ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೦-೧೧ನೇ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ಎಡತೊರೆ - ಒಂದು ಸಾಂಸ್ಕೃತಿಕ ಅಧ್ಯಯನ

ನಿಬಂಧಕಾರರು

ನಟರಾಜ್ ಹೆಚ್.ಸಿ.
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎಚ್.ಎನ್.ಮಂಜುರಾಜ್
ಕನ್ನಡ ಸಹಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆ ಕಾಲೇಜು
ಕೃಷ್ಣರಾಜನಗರ, ಮೈಸೂರುಜಿಲ್ಲೆ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೦-೧೧

917

[illegible] – ಒಂದು ಸಾಂಸ್ಕೃತಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೦–೧೧ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಎಡತೊರೆ – ಒಂದು ಸಾಂಸ್ಕೃತಿಕ ಅಧ್ಯಯನ

ನಿಬಂಧಕಾರರು

ನಟರಾಜ್ ಹೆಚ್.ಸಿ.

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಕ.ವಿ.ವಿ. ಹಂಪಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎಚ್.ಎನ್.ಮಂಜುರಾಜ್

ಕನ್ನಡ ಸಹಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆ ಕಾಲೇಜು
ಕೃಷ್ಣರಾಜನಗರ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೦–೧೧

ದೃಢೀಕರಣ ಪತ್ರ

೨೦೧೦-೧೧ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS/00478**ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ **ನಟರಾಜ್ ಹೆಚ್**.ಸಿ. ಅವರು ನನ್ನ ಮಾರ್ಗದರ್ಶನದಲ್ಲಿ **"ಎಡತೊರೆ – ಒಂದು ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಮೈಸೂರು
೧೩-೦೬-೨೦೧೧

(ಡಾ. ಎಚ್.ಎನ್.ಮಂಜುರಾಜ್)
ಮಾರ್ಗದರ್ಶಕರು
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆ ಕಾಲೇಜು
ಕೃಷ್ಣರಾಜನಗರ

ಅಭ್ಯರ್ಥಿಯ ಘೋಷಣಾ ಪತ್ರ

ಎಡತೊರೆ – ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯ ಈ ನಿಬಂಧ-ವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ **KVTMKS/00478**ರ ವಿದ್ಯಾರ್ಥಿಯಾದ ನಾನು ೨೦೧೦–೧೧ನೇ ಸಾಲಿನ ಪರೀಕ್ಷೆಗಾಗಿ **ಡಾ. ಎಚ್.ಎನ್.ಮಂಜುರಾಜ್,** ಕನ್ನಡ ಸಹಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕೃಷ್ಣರಾಜನಗರ ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೧೩–೦೬–೨೦೧೧


(ನಟರಾಜ್.ಹೆಚ್.ಸಿ.)
೨೦೧೦–೧೧ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಎಡತೊರೆ – ಒಂದು ಸಾಂಸ್ಕೃತಿಕ ಅಧ್ಯಯನ

ಪರಿವಿಡಿ

*****

ಕೃಷ್ಣರಾಜನಗರ ತಾಲ್ಲೂಕಿನ ನಕ್ಷೆ



ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ನಿಬಂಧ ರಚನೆಗೆಂದು ಆರಿಸಿಕೊಂಡ "ಎಡತೊರೆ- ಒಂದು ಸಾಂಸ್ಕೃತಿಕ ಅಧ್ಯಯನ", ಇದು ಒಂದು ಪ್ರದೇಶದ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ತೆರೆಯುವಂತದ್ದಾಗಿರುತ್ತದೆ. ಒಂದು ಊರಿನ ಅಥವಾ ಒಂದು ಪ್ರದೇಶದ ಅಧ್ಯಯನದಲ್ಲಿ ಸಾಂಸ್ಕೃತಿಕ ಮಹತ್ವದ ಜೊತೆಗೆ ಸಾಮಾಜಿಕ, ಐತಿಹಾಸಿಕ, ಧಾರ್ಮಿಕ ಹಾಗೂ ಆರ್ಥಿಕ ದೃಷ್ಟಿಯಿಂದಲೂ ಅಲ್ಲದೆ ಜಾನಪದೀಯವಾಗಿ ಮಹತ್ವದ ದಾಖಲೆಗಳಿಂದ ಕೂಡಿ ಐತಿಹಾಸಿಕ ಅಧ್ಯಯನಕ್ಕೆ ಒಂದು ಸಾಂಸ್ಕೃತಿಕ ಆಯಾಮ ಬರುತ್ತದೆ.

ದಿನನಿತ್ಯ ನಾವು ಹತ್ತಾರು ಹಳ್ಳಿ ಸ್ಥಳಗಳನ್ನು ಅವುಗಳ ಹೆಸರನ್ನು ಹೇಳುತ್ತೇವೆ, ಕೇಳುತ್ತೇವೆ. ಆದರೆ ಆ ಹೆಸರುಗಳೆಲ್ಲಾ ಯಾಂತ್ರಿಕವಾಗಿ ಕಿವಿಯ ಮೇಲೆ ಶಾಬ್ಧಿಕವಾಗಿ ಬಿದ್ದುಹೋಗಿ ಬಡವಾಗುತ್ತದೆ. ಯಾವುದೇ ಸ್ಥಳದ ಸಮಗ್ರ ಸಂಗತಿಗಳ ಬಗ್ಗೆ ನಾವು ತಲೆಕಡಿಸಿಕೊಳ್ಳುವುದಿಲ್ಲ. ವೈಜ್ಞಾನಿಕವಾಗಿ ವಿಶ್ಲೇಷಿಸುವ ಗೊಡವೆಗೆ ಹೋಗುವುದಿಲ್ಲ. ಆದರೆ ಇಂದು ಆಧುನಿಕ ಜೀವನದ ವೈಜ್ಞಾನಿಕ ಮತ್ತು ವೈಚಾರಿಕ ನೆಲೆಯ ಕಂಪ್ಯೂಟರ್ ಯುಗದ ಬೆಳವಣಿಗೆಯಲ್ಲಿ ಒಂದು ಪ್ರದೇಶ ಕೇಂದ್ರಿತ ಅಧ್ಯಯನವನ್ನು ಅಲಕ್ಷಿಸುವಂತಿಲ್ಲ. ಈ ಬಗ್ಗೆ ಗಮನಿಸಿ, ಗುರುತಿಸಿ, ಗೋಚರಿಸುವ ಕಾರ್ಯ ತುರ್ತಾಗಿ ನಡೆಯಬೇಕಾದುದು ಸೂಕ್ತವೆನಿಸುತ್ತದೆ. ಇತ್ತೀಚೆಗೆ ಇಂತಹ ಸ್ಥಳ ಕೇಂದ್ರಿತ ಅಧ್ಯಯನ, ಪ್ರಾದೇಶಿಕ ಅಧ್ಯಯನ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಆದ್ಯತೆ ನೀಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಎಡತೊರೆಯ ಸಾಂಸ್ಕೃತಿಕ ಅಧ್ಯಯನವು ಐತಿಹಾಸಿಕ ಮಹತ್ವದ ಜೊತೆಗೆ ಪ್ರಾಚೀನ ಪರಂಪರೆ ಹೊಂದಿರುವ ಸ್ಥಳವಾಗಿದೆ. ಇದರಿಂದ ಈ ಭಾಗದ ಸಾಂಸ್ಕೃತಿಕ ಜೀವನದ ಬಗ್ಗೆ ಪರಿಚಯಿಸುವುದೇ ಆಗಿದೆ. ಹಲವಾರು ವಿಷಯಗಳನ್ನೂ ಸಾಹಿತ್ಯ ಕಲೆಗಳ ಮೇಲೆ ಬೆಳಕು ಚೆಲ್ಲುವಂತಾಗುತ್ತದೆ.

ವಿಶ್ವದ ಇತರ ರಾಷ್ಟ್ರಗಳು ಎಚ್ಚರವಾಗುವ ಮುನ್ನವೇ ತನ್ನ ಜ್ಞಾನದ ದಿವ್ಯ ಜ್ಯೋತಿಯನ್ನು ಬೆಳಗಿಸಿ, ವಿಶ್ವಕ್ಕೆ ಧಾರೆ ಎರೆದ ರಾಷ್ಟ್ರ ನಮ್ಮ ಭಾರತ. ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿ ಅದು ಕಾರಣವಾಗಿಯೇ ವಿಶ್ವಮಾನ್ಯ ಹಾಗೂ ವಿಶ್ವವಂದ್ಯ. ಇಂತಹ ಅಪೂರ್ವ ಸಂಸ್ಕೃತಿಯ ಪ್ರಸಾರ ಪೋಷಕ ಕೇಂದ್ರಗಳಾಗಿ ತಲೆಯೆತ್ತಿ ನಿಂತವು

ಭಾರತದ ತೀರ್ಥ ಕ್ಷೇತ್ರಗಳು ಹಾಗು ಅವುಗಳಿಗೆ ಅಂಟಿ ನಿಂತುಕೊಂಡ ದೇವ ಮಂದಿರಗಳು.

ಅಸೇತು ಸೀತಾಚಲದ ತನಕ ವಿಸ್ತರಿಸಿರುವ ಭಾರತಾಂಭೆಯ ಗರ್ಭದಲ್ಲಿ ಮೆರೆಯುತ್ತಿರುವ ಹಲವಾರು ತೀರ್ಥಕ್ಷೇತ್ರ, ದೇವಮಂದಿರಗಳ ಶ್ರೇಣಿಯಲ್ಲಿ ದಕ್ಷಿಣಭಾರತಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ. ಪೌರಾಣಿಕ ಮತ್ತು ಐತಿಹಾಸಿಕ ದೃಷ್ಟಿಯಿಂದ ಮಾತ್ರವಲ್ಲದೇ ಕಲಾಕೌಶಲ್ಯದಿಂದಲೂ ಇಲ್ಲಿನ ದೇವಾಲಯಗಳು ಅತಿಶಯತೆ ಹೊಂದಿದೆ.

'ಕವೇರ'ನೆಂಬ ಮುನಿಯ ತಪಃಫಲವಾಗಿ ಜನಿಸಿದ ಕನ್ಯೆ ಕಾವೇರಿ. ಈಗೆ ಅಗಸ್ತ್ಯ ಮಹರ್ಷಿಯ ಪ್ರೇಯಸಿ. ಲೋಕೋಪಕಾರಕ್ಕಾಗಿ ನದಿಯಾಗಿ ಹರಿದ ಈಕೆ ದಕ್ಷಿಣ ಭಾರತದ "ಭಾಗೀರಥಿ" ಎಂದು ಪ್ರಸಿದ್ಧಳಾಗಿರುವಳು. ಈ ಪುಣ್ಯನದಿಯ ಇಕ್ಕೆಲಗಳಲ್ಲಿ ತಲೆಯೆತ್ತಿ ನಿಂತಿರುವ ತೀರ್ಥಕ್ಷೇತ್ರಗಳು, ದೇವಮಂದಿರಗಳು ಒಂದಲ್ಲ ಹತ್ತಾರು ಇವುಗಳಲ್ಲಿ "ಅರ್ಕತೀರ್ಥ"ವೆಂದು ಪ್ರಸಿದ್ಧವಾಗಿ, ಅರ್ಕೇಶ್ವರನನ್ನು ಆರಾಧ್ಯ ದೇವತೆಯನ್ನಾಗಿ ಹೊಂದಿದ ಎಡತೊರೆಯು ಪುರಾಣ ಪ್ರಸಿದ್ದವಾಗಿದೆ. ನಂತರ ಪ್ರವಾಹದ ಸಂದರ್ಭಕ್ಕನುಗುಣವಾಗಿ ಕೃಷ್ಣರಾಜನಗರವೆಂದು ನಾಮಾಂತರಗೊಂಡು ಇಂದು ತನ್ನದೇ ಆದ ಮೈಸೂರು ಕಡೆಯಿಂದ ನಗರವನ್ನು ಪ್ರವೇಶಿಸುವ ತಾಣದಲ್ಲಿ ಇಂದಿಗೂ ಎದ್ದುಕಾಣುವಂಥದ್ದು. ಸಾಂಸ್ಕೃತಿಕ ಅಧ್ಯಯನದಿಂದ ಅನೇಕ ಅಂಶಗಳ ಹಿನ್ನೆಲೆಯಲ್ಲಿ ಈ ಕ್ಷೇತ್ರವನ್ನು ಅಧ್ಯಯನಕ್ಕೆ ಒಳಪಡಿಸಿರುವುದರಿಂದ ಅನೇಕ ಬಹುಮುಖ್ಯ ವಿಚಾರಗಳು ಬೆಳಕಿಗೆ ಬರುತ್ತದೆ. ತಾಲ್ಲೂಕಿನ ಜೀವನದಿ ಕಾವೇರಿಯಿಂದ ಕೃಷ್ಣರಾಜನಗರ 'ಭತ್ತದಕಣಜ' ಎಂಬ ಹೆಸರನ್ನು ಅಲಂಕರಿಸಿದೆ. ಕಾವೇರಿ ನದಿಯ ದಂಡೆಯಲ್ಲಿರುವದರಿಂದ ಈ ಪ್ರದೇಶದ ಸುತ್ತ ಎಲ್ಲಿ ಕಣ್ಣಾಡಿಸಿದರೂ ಹಸಿರಿನಿಂದ ಕಂಗೊಳಿಸುವುದು. ಎಲ್ಲ ಧರ್ಮದ ಜಾತಿಯ ಜನರನ್ನು ಒಳಗೊಂಡಿದ್ದು ಪುರಾಣ ಪ್ರಸಿದ್ಧ ಚುಂಚನಕಟ್ಟೆ, ಡೋರ್ನಹಳ್ಳಿ, ಕಪ್ಪಡಿಯಂತಹ ಕ್ಷೇತ್ರಗಳನ್ನು ಪಡೆದು ಸಂಸ್ಕೃತಿ ಕೇಂದ್ರಿತ ನಗರವಾಗಿದೆ. ೧೯–೨೦ನೇ ಶತಮನದಲ್ಲಿ ಸಾಹಿತ್ಯ ವಿಮರ್ಶೆಯ ಅಧ್ಯಯನ ಮತ್ತು ಸಂಶೋಧನೆಗಳು ಹೆಚ್ಚೆಚ್ಚು ನಡೆದಂತೆ ಈ ಬಗೆಯ ಅಧ್ಯಯನದ ಮಹತ್ವ ಹೆಚ್ಚುತ್ತದೆ. ಈ ಅರ್ಥದಲ್ಲಿ ಮೈಸೂರು ಜಿಲ್ಲೆಯ ಅಂದಿನ ಎಡತೊರೆಯು ಇಂದಿನ ಕೃಷ್ಣರಾಜನಗರ ಸಾಂಸ್ಕೃತಿಕವಾಗಿ ಮತ್ತು ಐತಿಹಾಸಿಕವಾಗಿ ಮಾದರಿಯಾಗಿರುವ ನಗರವಾಗಿದೆ. ಆ ಕಾರಣಕ್ಕಾಗಿ ನಾನು ಈ ಬಗೆಯ ಅಧ್ಯಯನ ಕೈಗೊಂಡಿದ್ದೇನೆ.

ಅಧ್ಯಾಯ-೨

ಎಡತೊರೆ: ಅರ್ಥವಿವರಣೆ: ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆ

ಸ್ಥಳನಾಮ

ಮೈಸೂರು ಜಿಲ್ಲೆಯ ತಾಲ್ಲೂಕು ಕೇಂದ್ರವಾದ 'ಕೃಷ್ಣರಾಜನಗರಕ್ಕೆ ಮೊದಲಿದ್ದ ಹೆಸರೆ 'ಎಡತೊರೆ' ಎಂಬುದು. ಈ ಹೆಸರು ಬರಲು ಕಾರಣವನ್ನು ತಿಳಿಯಲು ಹೊರಟಾಗ ಸುಮಾರು ವರ್ಷಗಳ ಹಿಂದೆ ಕಾವೇರಿ ನದಿಯ ಬಲಭಾಗದ ತೀರದಲ್ಲಿ ಜನರು ವಾಸಿಸುತ್ತಿದ್ದರು. ಅವರು ವಾಸಿಸುತ್ತಿದ್ದ ಎಡಭಾಗದಲ್ಲಿ ಕಾವೇರಿ ನದಿ ಹರಿಯುತ್ತಿದ್ದ ಕಾರಣದಿಂದ ಆ ಊರಿಗೆ ಎಡತೊರೆ ಎಂಬುದು ಪ್ರಚಾರಕ್ಕೆ ಬಂದಿತ್ತೆಂದು ಹೇಳುತ್ತಾರೆ. ಇಲ್ಲಿ ತೊರೆ ಎಂದರೆ ನದಿ, ಹೊಳೆ ಎಂಬರ್ಥ ಇರುವುದನ್ನು ಕಾಣಬಹುದು.

ಸುಮಾರು ೯೦ ವರ್ಷಗಳ ಹಿಂದೆ ಕಾವೇರಿ ನದಿಯಲ್ಲಿ ಪ್ರವಾಹ ಒಂದು ಆ ಊರನ್ನೆಲ್ಲಾ ಕೊಚ್ಚಿಕೊಂಡು ಹೋಯಿತು. ಅಲ್ಲಿನ ಜನ ಕಂಗಾಲಾಗಿ ಆ ನದಿಯ ತಟದಿಂದ ತಮ್ಮ ವಸತಿಗಳನ್ನು ತೊರೆದು ಅಲ್ಲಿಂದ ಎತ್ತರಪ್ರದೇಶದ ೨.ಕಿ.ಮೀಗಳಷ್ಟು ದೂರಕ್ಕೆ ಬಂದು ತಮ್ಮ ನೆಲೆ ಕಂಡುಕೊಂಡರು. ಮೈಸೂರು ಅರಸರು ಆಳುತ್ತಿದ್ದ ಕಾಲವದು. ಕೃಷ್ಣರಾಜ ಒಡೆಯರ್ ಸಹಾಯ ಪಡೆದು ಮೈಸೂರು ಸಾಮ್ರಾಜ್ಯದ ಪ್ರಮುಖ ಪಟ್ಟಣವಾಗಿ ಅಭಿವೃದ್ಧಿಪಡಿಸಿದರು. ಅವರ ಜ್ಞಾಪಕಾರ್ಥವಾಗಿ ೧೯೨೪ರಿಂದ ನಿರ್ಮಾಣಕ್ಕೊಳಪಟ್ಟು ೧೯೩೪ರಲ್ಲಿ ಕೃಷ್ಣರಾಜನಗರವೆಂದು ನಾಮಾಂಕಿತಗೊಂಡಿತು. ಎಡತೊರೆ ಎಂಬ ಪದ ಮೂಲತಃ ದ್ರಾವಿಡ ಪಡವಾದ "ಇಡೈತುರೈ"[೧] ಎಂಬ ಪದದಿಂದ ಬಂದಿದೆ ಎನ್ನುವುದು ಉಂಟು. ಎಡತೊರೆನಾಡು (ಎ(ಯೆ)ಡ(ಡೆ) ತೊ(ದೊ)ರೆ(ಐ) ನಾಡು) ಎಡೆನಾಡು ಮುಂತಾಗಿ ಕಾವೇರಿ ಎಡಭಾಗದ ಪ್ರದೇಶ ಒಂದು ಆಡಳಿತ ವಿಭಾಗವಾಗಿ ಬಹಳ ಕಾಲದಿಂದಲೂ ಪ್ರಸಿದ್ಧ. ಎಡತೊರೆಗೆ ಆವರ್ತಪುರ, ಅರ್ಕಕ್ಷೇತ್ರವೆಂತಲೂ ಕರೆಯುವುದುಂಟು. ಇದಕ್ಕೆ ನಿದರ್ಶನವಾಗಿ

---

೧. ಕೆ.ಆರ್.ನಗರ ತಾಲ್ಲೂಕಿನ ಶಾಸನಗಳು - ಲೇಖನ: ಸೀತಾರಾಮ ಜಾಗೀರ್‌ದಾರ, ಕಲ್ಯಾಣಪಥ, ೧೯೯೬.

ಒಂಬತ್ತನೇ ಶತಮಾನದ ಗಂಗರ ಶಾಸನವೊಂದರ ಪ್ರಕಾರ ಅರ್ಕೇಶ್ವರ ಪುರಾಣವು ಒಂದಾಗಿದೆ. ಇಲ್ಲಿ ತೊರೆಯು ಎಡಕ್ಕೆ ಬಾಗಿ ತಿರುಗಿರುವುದರಿಂದ ಎಡತೊರೆ ಎಂಬ ಹೆಸರು ಬರಲು ಕಾರಣವಾಯಿತು. ಸ್ನಾನದ ಘಟ್ಟ ಹಾಗೂ ಪುಷ್ಕರಿಣಿಯನ್ನು ಹೊಂದಿರುವ ಶ್ರೀ ಅರ್ಕೇಶ್ವರನ ದೇವಸ್ಥಾನ ಈ ಊರಿನ ಮುಖ್ಯ ಕೇಂದ್ರ ಬಿಂದು. ಈ ಊರು ೧೧ನೇ ಶತಮಾನದ ಅರಸನಾಗಿದ್ದ ರಾಜೇಂದ್ರಚೋಳನಿಂದ ಗೆದ್ದ ಪ್ರದೇಶವಾಗಿದ್ದು, ಮುಮ್ಮಡಿ ಕೃಷ್ಣರಾಜ ಒಡೆಯರ್ ಶ್ರೀ ಅರ್ಕೇಶ್ವರನಿಗೆ ಅನೇಕ ದತ್ತಿಗಳನ್ನು ಬಿಟ್ಟಿರುವುದು ಶಾಸನಗಳಿಂದ ತಿಳಿದುಬರುತ್ತದೆ.[೧]

ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆ:

ಭಾರತೀಯರಲ್ಲಿ ಪ್ರಮುಖವಾಗಿ ಹಿಂದುಗಳಲ್ಲಿ ಪುರಾಣವು ಶತಮಾನ-ಗಳಿಂದಲೂ ಮಾನವನ ದಿನನಿತ್ಯದ ಜೀವನದ ಮೇಲೆ ಪ್ರಭಾವ ಬೀರುತ್ತಾ ಬಂದಿದೆ. ಧರ್ಮ, ತತ್ತ್ವಶಾಸ್ತ್ರ, ಜಾನಪದ, ವಿಜ್ಞಾನ, ಸಾಹಿತ್ಯ, ಚರಿತ್ರೆಗೆ ಸಾಮಗ್ರಿಗಳನ್ನು ಒದಗಿಸುವ ಆಗರವಾಗಿದೆ. ದಾನ, ವ್ರತಸ್ಥಳ, ಪುರಾಣಗಳು, ಬ್ರಹ್ಮ, ವಿಷ್ಣು,ರುದ್ರ, ಸೂರ್ಯನ ವರ್ಣಗಳು, ದೇವಾಲಯದ ಬಗೆಗಿನ ಮಾಹಿತಿಯನ್ನು ಪದ್ಮ, ಸ್ಕಂದ ಮತ್ತು ಅರ್ಕ ಪುಷ್ಕರಣಿ ಪುರಾಣ ಮುಂತಾದವುಗಳಲ್ಲಿ ಕಾಣುತ್ತೇವೆ.

ಸೂರ್ಯೋಪಾಸನೆಯು ಪ್ರಾಚೀನವಾದುದು, ಈಜಿಪ್ಟ್‌ನಲ್ಲೂ ಸೂರ್ಯ ಪೂಜೆಯ ನಿದರ್ಶನಗಳು ದೊರೆಯುತ್ತವೆ. ಪುಣ್ಯಪುರುಷ ಕ್ಷೇತ್ರ ನದಿ ಪುಷ್ಕರಣಿಗಳ ಹಿರಿಮೆ ಸಾರುವ ಕೃತಿಗಳು, ಕತೆಗಳು ಎಲ್ಲಾ ಧರ್ಮಗಳಲ್ಲೂ ಇವೆ. ಜೀವನ ನಿರ್ವಹಣೆಗೆ ಬೆಳಕು ಮೂಲ ಶಕ್ತಿಯಾದ್ದರಿಂದ ಸೂರ್ಯೋಪಾಸನೆ ಪ್ರಾರಂಭ-ಗೊಂಡಿರಬೇಕು. ಕರ್ನಾಟಕದಲ್ಲಿ ಒಂಬತ್ತನೆಯ ಶತಮಾನಕ್ಕೆ ಮೊದಲಿಂದಲೂ ಸೂರ್ಯ ಉಪಾಸನೆ ಇರುವುದು ಕಂಡುಬರುತ್ತದೆ. ಇಂತಹ ಒಂಬತ್ತನೆಯ ಶತಮಾನದ ಗಂಗರ ಶಾಸನ ಅರ್ಕೇಶ್ವರ ದೇವಾಲಯದ ಬಳಿ ದೊರೆತಿದೆ.

ಎಡತೊರೆಯ ಅರ್ಕೇಶ್ವರ ದೇವಾಲಯ ನಿರ್ಮಾಣಕ್ಕೆ ಕಾರಣವಾದ ಪುರಾಣ ಕಥೆಯು ಈ ಕೆಳಕಂಡಂತಿದೆ.

---

೧. ಲೇಖನ-'ಮುಮ್ಮಡಿ ಕೃಷ್ಣರಾಜ ವಿರಚಿತ ಎಡತೊರೆ ಅರ್ಕಪುಷ್ಕರಿಣೀ ಮಾಹತ್ಮೆ, ಸಂಪಾದಕಿ-ಟಿ.ಆರ್.ಶಾಂತ, ಪ್ರಕಾಶನ -ಕನ್ನಡ ಸಾಹಿತ್ಯ ಪರಿಷತ್ತು-೧೯೭೯.

ಸೂರ್ಯ ಮತ್ತು ಸಂಜ್ಞಾದೇವಿಯಲ್ಲಿ ಯಮನು ಮನುವು ಹಾಗೂ ಯಮುನೆ ಎಂಬ ಸೌಂದರ್ಯವತಿಯರಾದ ಉತ್ಕೃಷ್ಟ ಗುಣಗಳಿಂದ ಕೂಡಿದ ಮಕ್ಕಳು ಹುಟ್ಟಿದರು. ಅವರಲ್ಲಿ ರೂಪವಂತೆಯಾದ ಯಮುನೆಯೆಂಬ ಕನ್ಯೆಯನ್ನು ಸಂಜ್ಞಾದೇವಿಗಿಂತಲೂ ಅತಿಶಯವಾದ ಚೆಲುವೆಯಾದ ಕಾರಣ ಸಕಲರು ಮೋಹಪಟ್ಟರು. ಸ್ವತಃ ತಂದೆಯಾದ ಸೂರ್ಯನಿಗೆ ಆ ಕನ್ಯೆಯನ್ನು ನೋಡಿ ಇಚ್ಚಿಸಿದನು. ಇದರಿಂದ ದುರ್ನನಡತೆ-ಯುಳ್ಳವನಾದ ಸೂರ್ಯನನ್ನು ಸಮಸ್ತ ದೇವತೆಗಳು, ಋಷಿಗಳು, ಚಾರಣರು, ನಾಗಗಂಧರ್ವರು, ಅಪ್ಸರ ಸ್ತ್ರೀಯರು, ಯಕ್ಷರು ಮುಂತಾದ ಲೋಕದ ಜನರ ನಿಂದನೆಗೆ ಗುರಿಯಾದನು. ಲೋಕದ ಕತ್ತಲೆಯನ್ನು ಪರಿಹರಿಸುವ ಸೂರ್ಯನೆ ಕತ್ತಲೆಯ ಕೂಪಕ್ಕೆ ಬಿದ್ದನೆಂದು ಅನೇಕ ಪ್ರಕಾರವಾಗಿ ನಿಂದಿಸಿ ಶಾಪವನ್ನು ಕೊಟ್ಟರು. ಇದರಿಂದ ಶಾಪಗ್ರಸ್ತನಾದ ಸೂರ್ಯನು ತನ್ನ ತಪ್ಪಿನ ಅರಿವಾಗಿ, ಈ ಪಾಪದಿಂದ ಮುಕ್ತಿಯಾಗಲು ಪರಮೇಶ್ವರನ ಹೊರತಾಗಿ ತನ್ನನ್ನು ಯಾರು ರಕ್ಷಿಸರೆಂದು ತಿಳಿದು ಸಕಲ ಗುಣ ಸಂಪನ್ನನಾದ ಸೂರ್ಯನು ಭೂಲೋಕಕ್ಕೆ ಹೋಗಿ ತನ್ನ ಕರ್ಮವನ್ನು ಕಳೆಯಲು ನಿಶ್ಚಯಿಸಿದನು.

ಅದರಂತೆ ಸೂರ್ಯನು ಭೂಲೋಕದ ಕರ್ಮಭೂಮಿಯಾದ ಎಡತೊರೆಯಲ್ಲಿ ಪ್ರತಿಷ್ಠಾಪನೆಗೊಂಡನು. ಅಲ್ಲಿ ಸ್ನಾನಕ್ಕೋಸ್ಕರ ಸ್ವಚ್ಚವಾದ ಜಲವುಳ್ಳ ಪುಷ್ಕರಣಿಯನ್ನು ನಿರ್ಮಿಸಿದನು. ಆ ಪುಷ್ಕರಣಿಯಲ್ಲಿ ಸ್ನಾನ ಮಾಡಿ ಒಂದು ತಿಂಗಳೂ ಈಶ್ವರನ ಪೂಜೆಯನ್ನು ಮಾಡಿದನು. ಅಲ್ಲಿ ದಕ್ಷಿಣದ ತೀರದಲ್ಲಿ ಸೂರ್ಯನು ಪ್ರತಿಷ್ಠೆ ಮಾಡಿದ ಲಿಂಗವು ಜ್ಯೋತಿ ಸ್ವರೂಪವಾಗಿ ಕಾಣುವುದು. ಅನೇಕ ಅಶ್ವಮೇದ ಕ್ರತುಗಳನ್ನು ನೆರವೇರಿಸಿ, ಶಿವಪೂಜೆಯಿಂದ ಪರಿಶುದ್ಧನಾಗಿ ಪಾಪ ವಿಮೋಚನೆಯಿಂದ ಮುಕ್ತಿ ಪಡೆದನು. ಶಿವನ ಪ್ರೀತಿಗೋಸ್ಕರ ಆ ಶಿವಲಿಂಗದ ಪಶ್ಚಿಮ ದಿಕ್ಕಿನಲ್ಲಿ ಯಾಗ-ಶಾಲೆಯನ್ನು ನಿರ್ಮಿಸಿ ಅಶ್ವಮೇದಯಾಗ ನಡೆಸಿದನು. ಇದರಿಂದ ಪ್ರಸನ್ನನಾದ ಶಿವನು ಪಾರ್ವತಿಸಮೇತ ಪ್ರತ್ಯಕ್ಷನಾಗಿ ವರವನ್ನು ನೀಡಿದನು. ಈಗ ಎಲ್ಲ ಕೊಳಗಳು ಕಾವೇರಿಯಲ್ಲಿ ಸೇರಿವೆ. ಸೂರ್ಯನಿಂದ ಸ್ಥಾಪಿಸಿ ಪೂಜಿಸಿದ ಲಿಂಗವೇ ಅರ್ಕೇಶ್ವರನೆಂದೂ, ಸೂರ್ಯನು ಸ್ನಾನಮಾಡಿದ ಸ್ಥಳವೇ ಪುಷ್ಕರಣೀಯೆಂದು ಹೆಸರು ಪಡೆದಿದೆ. ಅರ್ಕ ಪುಷ್ಕರಣೀ ನೀರಿನ ಮಧ್ಯಮಂಟಪದ ಈಶಾನ್ಯ ಭಾಗಕ್ಕಿರುವ ಜಾಗ, ಇದನ್ನು "ತೆಪ್ಪದ ಮಂಟಪ" ಎಂದು ಕರೆಯುತ್ತಾರೆ.

ದೇವಾಲಯದ ಸಮೀಪ ದೊರೆತ ಒಂಬತ್ತನೆಯ ಶತಮಾನದ ಗಂಗರ ಶಾಸನದ ಪ್ರಕಾರ, ಸೂರ್ಯನ ಉಪಾಸನೆ ಪ್ರಾಚೀನವಾದದೆಂದು ತಮಿಳು

ಶಾಸನಗಳಲ್ಲಿ ಅಂಗೈಕಾರನ್ ಎಂಬುವನು ಈಶ್ವರ ದೇವಾಲಯಕ್ಕೆ ಭೂಮಿಯನ್ನು ದಾನ ಮಾಡಿದನೆಂದು ರಾಜೇಂದ್ರ ಚೋಳನೆಂಬುವನಿಂದ ಗೆದ್ದ ಪ್ರದೇಶ ಎಡತೊರೆ, ಆ ಕಾಲದಲ್ಲಿ ಮೀನಾಕ್ಷಿ ದೇವಾಲಯ ನಿರ್ಮಾಣಗೊಂಡಿದೆ ಎಂದು ಹೇಳಲಾಗಿದೆ. ದೇವಾಲಯವನ್ನು ನಿರ್ದಿಷ್ಟವಾದ ಕಾಲದಲ್ಲಿ ನಿರ್ಮಿಸಿದ್ದು ಎಂಬುದಕ್ಕೆ ಶಾಸನ ಉಲ್ಲೇಖವಿಲ್ಲ. ಚೋಳರ ಕಾಲದಲ್ಲಿ ನಿರ್ಮಿತಗೊಂಡು ಮೈಸೂರು ಅರಸರ ಕಾಲದಲ್ಲಿ ಅಭಿವೃದ್ಧಿಯಾಗಿದೆ ಎಂದು ತಿಳಿಯಬಹುದು.

ಉದಯದಲ್ಲಿ ಬ್ರಹ್ಮ, ಮಧ್ಯಾಹ್ನನದಲ್ಲಿ ವಿಷ್ಣು, ಸಂಜೆಯಲ್ಲಿ ಶಿವನಾಗುವ ತ್ರಿಮೂರ್ತಿ ಸ್ವರೂಪನಾದ ಭಾಸ್ಕರನ ತಪೋಭೂಮಿಯಾದ ಈ ಎಡತೊರೆಯ ಅರ್ಕಕ್ಷೇತ್ರ, ಮುಂದೆ ದೇವಾದಿ ದೇವತೆಗಳ ಋಷಿಮುನಿಗಳ ನೆಲೆಯಾಗಿ ಪರಿಣಮಿಸಿತು. ಪರಶುರಾಮನ ಮಾತೃ ಹತ್ಯಾಪಾಪ ಈ ತೀರ್ಥಸೇವನೆಯಿಂದ ಪರಿಹೃತವಾಯಿತೆಂಬ ಪೌರಾಣಿಕ ಹಿನ್ನೆಲೆಯನ್ನು ಪಡೆದ ಈ ಪಾವನ ಸ್ಥಳ ಪವಿತ್ರವಾಗಿದೆ.

ಎಡತೊರೆಯ "ಶ್ರೀ ಅರ್ಕೇಶ್ವರ ದೇವಾಲಯ"ವು ಐತಿಹಾಸಿಕ ದೃಷ್ಟಿಯಿಂದ ಮತ್ತು ಪೌರಾಣಿಕ ಕ್ಷೇತ್ರದ ಮಹಿಮೆಯಿಂದ ಮೈಸೂರು ಜಿಲ್ಲೆಯ ಪ್ರಮುಖ ದೇವಾಲಯಗಳಲ್ಲಿ ಒಂದಾಗಿದ್ದು ತನ್ನದೇ ಆದ ವಿಶಿಷ್ಟ ಜನಪ್ರಿಯತೆಯನ್ನು ಗಳಿಸಿದೆ.

ಅಧ್ಯಾಯ-೩

ಎಡತೊರೆ-ಈಗಿನ ಕೃಷ್ಣರಾಜನಗರ

ಭೌಗೋಳಿಕ ಮತ್ತು ಸಾಮಾಜಿಕ ಪರಿಚಯ

ಕಾವೇರಿ ಎಡಕ್ಕೆ ಹರಿಯುವುದರಿಂದ ಎಡತೊರೆಯಾದ ಸೂರ್ಯನಿಂದಲೇ ಪೂಜಿಸಲ್ಪಟ್ಟ ಈಗಿನ ಕೃಷ್ಣರಾಜನಗರಕ್ಕೆ ಸ್ಥಳಾಂತರ ಮತ್ತು ನಾಮಾಂತರಕ್ಕೆ ವಿಶೇಷ ಇತಿಹಾಸವಿದೆ. ನಮ್ಮ ಕನ್ನಡ ನಾಡಿನ ರಾಜಧಾನಿ ಮೈಸೂರು ದೊರೆಗಳಾದ ಶ್ರೀ ಚಾಮರಾಜೇಂದ್ರ ಒಡೆಯರ್ ಇವರ ಮಕ್ಕಳಾದ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಆಳ್ವಿಕೆಯಲ್ಲಿ ನಗರ ನಿರ್ಮಾಣವಾಯಿತು. ದಿವಾನ್‌ರಾಗಿದ್ದ ಮಿರ್ಜಾ ಇಸ್ಮಾಯಿಲ್ ಮತ್ತು ಶ್ರೀಮಾನ್ ವಿಶ್ವೇಶ್ವರಯ್ಯನವರು ಅಂದು ಇಂಜಿನಿಯರ್ ಆಗಿದ್ದರು. ಅವರ ನೇತೃತ್ವದಲ್ಲಿ ನಮ್ಮ ಜಿಲ್ಲೆಗೆ ಸೇವೆ ಸಲ್ಲಿಸಿದ ಮಹನೀಯರುಗಳು. ಕಾವೇರಿ, ಹೇಮಾವತಿ ಮತ್ತು ಲಕ್ಷ್ಮಣತೀರ್ಥ ಈ ಮೂರು ನದಿಗಳು ಸಂಗಮವಾಗಿ ಬರುವ ನದಿಗೆ ಅಣೆಕಟ್ಟು ಕಟ್ಟಿದರೆ ಸಾವಿರಾರು ಎಕರೆ ಭೂಮಿಗೆ ನೀರಾವರಿ ಆಗುವುದೆಂದು ಯೋಜನೆ ತಯಾರಿಸಿ ದೊರೆಯ ಅನುಮತಿ ಪಡೆದರು. ಮಹಾರಾಜರ ಅಪ್ಪಣೆಯಂತೆ ಅಣೆಕಟ್ಟು ಕಟ್ಟಿದರೆ ಸ್ಥಳಾವಕಾಶಗಳಿಗಾಗಿ ಬೇರೆ ಬೇರೆ ಕಡೆ ಜಾಗ ಕೊಡುತ್ತೇವೆ. ಊರುಗಳನ್ನು ನಿರ್ಮಿಸಿಕೊಳ್ಳುವಂತೆ ಎಚ್ಚರಿಕೆಯನ್ನು ನೀಡಿದರು. ಜನರು ಕಿವಿಗೊಡದಿದ್ದಾಗ ಸ್ವತಃ ವಿಶ್ವೇಶ್ವರಯ್ಯನವರೇ ಹಳ್ಳಿ ಹಳ್ಳಿಗೆ ಹೋಗಿ ಜನರ ಮನಃಪರಿವರ್ತಿಸಲು ಪ್ರಯತ್ನಿಸಿದರು. ನಾಡಿನ ಜೀವನದಿಯಾದ ಕಾವೇರಿಯು ಹರಿದು ಸಮುದ್ರ ಸೇರುತ್ತಿದ್ದುದನ್ನು ತಡೆಯಲು ಅಣೆಕಟ್ಟು ನಿರ್ಮಿಸಿ ಕೃಷಿ ಮತ್ತು ನಾಡಿನ ಅಭ್ಯುದಯಕ್ಕೆ ಬಳಸಿಕೊಳ್ಳಬೇಕೆಂಬ ಮಹದಾಸೆ ಶ್ರೀಯುತರದು. ಇವರ ದೂರದೃಷ್ಟಿಯ ಫಲವಾಗಿ ಕೃಷ್ಣರಾಜಸಾಗರ (ಕನ್ನಂಬಾಡಿ ಕಟ್ಟೆ) ನಿರ್ಮಾಣವಾಯಿತು. ೧೯೨೪ರಲ್ಲಿ ಸುರಿದ ಅಧಿಕ ಮಳೆಯ ಕಾರಣ, ಅಣೆಕಟ್ಟು ಭರ್ತಿಯಾಗಿ ಹಿನ್ನೀರಿನಿಂದ ಹಲವಾರು ಹಳ್ಳಿಗರು ಜಲಾವೃತವಾದವು. ಎಡತೊರೆಯ ಮುಳುಗಡೆಯಾಗಿ ದವಸಧಾನ್ಯಗಳೆಲ್ಲಾ ಕೊಚ್ಚಿಕೊಂಡು ಹೋಯಿತು. ನದಿಯ ಅಕ್ಕಪಕ್ಕದ ಗ್ರಾಮಗಳು ಮುಳುಗಿ ಜನರೆಲ್ಲ ಕಂಗಾಲಾದರು. ಮಹಾರಾಜರ ಅಪ್ಪಣೆಯಂತೆ ದಿವಾನರು ಮತ್ತು ವಿಶ್ವೇಶ್ವರಯ್ಯನವರು ಎಡತೊರೆಗೆ ಬಂದು ಸ್ಥಳ ಪರಿಶೀಲಿಸಿ ಎಲ್ಲರನ್ನು ಅಕ್ಕಪಕ್ಕದ ಹಳ್ಳಿಗಳಿಗೆ ಕಳುಹಿಸಿಕೊಟ್ಟರು. ಜನರು ಹಂಪಾಪುರ, ಕಣ್ಣೆರೆ, ಮೂಡಲಕೊಪ್ಪಲು ಹೀಗೆ ಅನೇಕ ಹಳ್ಳಿಗಳಿಗೆ ವಲಸೆ ಹೋದರು. ಮೈಸೂರು ಎಡತೊರೆ ನಡುವೆ ಕಾಡಿನ ಮಧ್ಯೆ

ಎತ್ತರದ ಜಾಗದಲ್ಲಿ ನಿಂತು ಕಾಡಿನ ಸೊಬಗನ್ನು ನೋಡಿ ಇಲ್ಲೇಕೆ ಊರನ್ನು ಕಟ್ಟಬಾರದೆಂದು ಮಣ್ಣಿನ ಗುಣ ಪರೀಕ್ಷಿಸಿ, ಮಹಾರಾಜರ ಅಪ್ಪಣೆ ಪಡೆದು ಚಾಮುಂಡೇಶ್ವರಿಯ ಕೃಪಾಶೀರ್ವಾದದಿಂದ ಊರು ಕಟ್ಟಲು ೧೯೨೪ರಲ್ಲಿ ಪ್ರಯತ್ನಿಸಿದ ಫಲವಾಗಿ ನೂತನ ನಗರ ಸ್ಥಾಪನೆಗೆ ಅಸ್ತಿಭಾರ ಹಾಕಲಾಯಿತು. ಮನೆ ಕಳೆದುಕೊಂಡವರಿಗೆ ನೂತನ ನಗರದಲ್ಲಿ ನಿವೇಶನ ನೀಡಿ ವ್ಯವಸ್ಥೆ ಮಾಡಲಾಯಿತು. ಜರ್ಮನಿಯ ತಾಂತ್ರಿಕ ತಜ್ಞ ಕೇಂಬ್ರಿಗಲ್‌ನ ಯೋಜನೆಯಂತೆ ೧೯೨೪ರಿಂದ ೧೯೩೪ರವರೆಗೆ ಎಡತೊರೆಯ ಎಲ್ಲಾ ಜನ ಹೊಸನಗರಕ್ಕೆ ಬಂದರು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಂದ ತಮ್ಮ ಹೆಸರಿನಲ್ಲಿ ೧೯೩೪ರಲ್ಲಿ ಅಧಿಕೃತವಾಗಿ ನೂತನ ನಗರವೂ ಉದ್ಘಾಟನೆಯಾಯಿತು. ಇಂದು ಮೈಸೂರು ಹಾಸನ ರಸ್ತೆಯ ನಡುವೆ ಕೃಷ್ಣರಾಜೇಂದ್ರ ವೃತ್ತದಲ್ಲಿರುವ ಗರುಡಗಂಬವೇ ಅದಕ್ಕೆ ಸಾಕ್ಷಿಯಾಗಿದೆ. ನೂತನ ನಗರಕ್ಕೆ ಕೃಷ್ಣರಾಜನಗರವೆಂದು ಹೆಸರಿಡಲಾಯಿತು.

ಕೃಷ್ಣರಾಜನಗರದ ಭೌಗೋಳಿಕ ಪರಿಚಯ:

೧೯೩೪ರಲ್ಲಿ ಎಡತೊರೆ ಕೃಷ್ಣರಾಜನಗರವೆಂದು ನಾಮಾಂಕಿವಾಗಿ ರೂಪುಗೊಂಡು ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ವಿಶ್ವೇಶ್ವರಯ್ಯನವರ ಶ್ರಮದ ಫಲವಾಗಿ ನಗರ ಹೊಸ ರೂಪ ಪಡೆದು ಇಂದು ಭತ್ತದ ಕಣಜವೆಂಬ ಹಿರಿಮೆಗೆ ಪಾತ್ರವಾಗಿದೆ. ಇಂದು ಮೈಸೂರಿನ ಪ್ರಮುಖ ತಾಲ್ಲೂಕು ಕೇಂದ್ರವಾಗಿದ್ದು, ಮೈಸೂರು-ಹಾಸನದ ಹೆದ್ದಾರಿಯಲ್ಲಿದೆ. ಮೈಸೂರಿಗೆ ೪೦ ಕಿ.ಮೀ.ದೂರದಲ್ಲಿದೆ.

ಸನ್ನಿವೇಶ ಮತ್ತು ವಿಸ್ತೀರ್ಣ:

ಮೈಸೂರು ಜಿಲ್ಲೆಗೆ ಮೊದಲು ೧೧ ತಾಲ್ಲೂಕುಗಳಿದ್ದು ಚಾಮರಾಜನಗರ ಜಿಲ್ಲೆಯಾಗಿ ವಿಭಜನೆಯ ನಂತರ ಈಗ ೭ ತಾಲ್ಲೂಕುಗಳು ಸೇರಿವೆ. ಭೌಗೋಳಿಕವಾಗಿ ಸುಮಾರು ೧೨°.೧೦ ಉತ್ತರದಿಂದ ೧೨°.೧೫ ಉತ್ತರ ಅಕ್ಷಾಂಶ ಹಾಗೂ ೭೫°.೫೦ ಪೂರ್ವದಿಂದ ೭೦°.೨೫ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. ಉತ್ತರ-ದಕ್ಷಿಣವಾಗಿ ಸಮಾರು ೨೭ ಕಿ.ಮೀ. ಅಗಲವಾಗಿಯೂ ಮತ್ತು ಪಶ್ಚಿಮ ಪೂರ್ವವಾಗಿ ಸುಮಾರು ೩೯ ಕಿ.ಮೀಗಳಷ್ಟು ಉದ್ದವಾಗಿ ವ್ಯಾಪಿಸಿದೆ. ಉತ್ತರ ಮತ್ತು ವಾಯವ್ಯ ಭಾಗದಲ್ಲಿ ಹೊಳೆನರಸೀಪುರ, ಪಶ್ಚಿಮದಲ್ಲಿ ಅರಕಲಗೂಡ, ನೈರುತ್ಯದಲ್ಲಿ ಪಿರಿಯಾ-ಪಟ್ಟಣ, ದಕ್ಷಿಣದಲ್ಲಿ ಹುಣಸೂರು, ಆಗ್ನೇಯಾದಲ್ಲಿ ಮೈಸೂರು, ಪೂರ್ವ ಮತ್ತು ಈಶಾನ್ಯಕ್ಕೆ ಕೃಷ್ಣರಾಜ ಪೇಟೆಯು ಈ ತಾಲ್ಲೂಕಿನ ಮೇರೆಗಳಾಗಿದ್ದರೆ, ಆಗ್ನೇಯಾ ಮತ್ತು

ಪೂರ್ವ ಭಾಗದಲ್ಲಿ ಲಕ್ಷ್ಮಣತೀರ್ಥ ಮತ್ತು ಕಾವೇರಿ ನದಿಗಳು ನೈಸರ್ಗಿಕ ಗಡಿಯನ್ನು ನಿರ್ಮಿಸಿದೆ.

ಈ ತಾಲ್ಲೂಕಿನ ಒಟ್ಟು ವಿಸ್ತೀರ್ಣ ೬೦೫.೩. ಚ.ಕಿ.ಮೀ.ಗಳು. ೨೦೦೧ರ ಪ್ರಕಾರ ತಾಲ್ಲೂಕಿನ ಒಟ್ಟು ಜನಸಂಖ್ಯೆ ೨.೩೯.೧೯೯. ಇದರಲ್ಲಿ ಪುರುಷರು ೧.೨೦.೪೮೧, ಮಹಿಳೆಯರು ೧.೧೮.೭೧೮. ತಾಲ್ಲೂಕಿನಲ್ಲಿ ೧೮೦ ಗ್ರಾಮಗಳನ್ನು ಒಳಗೊಂಡಿದ್ದರೆ, ಆಡಳಿತ ಅನುಕೂಲಕ್ಕಾಗಿ ೩೧ ಗ್ರಾಮ ಪಂಚಾಯಿತಿ, ೨೦ ತಾಲ್ಲೂಕು ಪಂಚಾಯಿತಿ ಮತ್ತು ೬ ಜಿಲ್ಲಾ ಪಂಚಾಯಿತಿಗಳನ್ನು ಪಡೆದಿದೆ. ಅವುಗಳೆಂದರೆ ಕಸಬಾ, ಹೆಬ್ಬಾಳು, ಚುಂಚನಕಟ್ಟೆ, ಸಾಲಿಗ್ರಾಮ, ಮಿರ್ಲೆ ಮತ್ತು ಹೊಸ ಅಗ್ರಹಾರ ಹೋಬಳಿಗಳಾಗಿವೆ.

ಈ ತಾಲ್ಲೂಕಿನ ಇಡೀ ಪ್ರದೇಶವು ಪಶ್ಚಿಮದಿಂದ ಪೂರ್ವದಿಕ್ಕಿಗೆ ಇಳಿಜಾರಾಗಿದ್ದು, ಯಾವುದೇ ಬೆಟ್ಟಗುಡ್ಡಗಳಿಂದ ಕೂಡಿರುವುದಿಲ್ಲ. ಈ ಪ್ರದೇಶವು ಸಮುದ್ರ ಮಟ್ಟದಿಂದ ಸುಮಾರು ೬೦೦ ರಿಂದ ೮೦೦ ಮೀಟರ್ ಎತ್ತರ ಪ್ರದೇಶದಿಂದ ಕೂಡಿದೆ. ಕಾವೇರಿ ನದಿಯು ಕೃಷ್ಣರಾಜನಗರಕ್ಕೆ ಜೀವನಾಡಿಯಿದ್ದಂತೆ. ಈ ನದಿಯು ತಾಲ್ಲೂಕಿನ ಮಧ್ಯೆ ಪಶ್ಚಿಮದಿಂದ ಪೂರ್ವದ ಕಡೆಗೆ ಹರಿಯುವುದು. ಇದರಿಂದ ನೀರಾವರಿ ಸೌಲಭ್ಯ, ಕುಡಿಯುವ ನೀರಿನ ಸೌಲಭ್ಯ ಅದರ ಪವಿತ್ರತೆಯಿಂದ 'ದಕ್ಷಿಣ ಗಂಗೆ' ಎಮದೇ ಹೇಳಲಾಗಿದೆ.

ಈ ತಾಲ್ಲೂಕು ಮೈಸೂರು ಜಿಲ್ಲೆಯ ವಾಯವ್ಯ ಭಾಗದಲ್ಲಿದ್ದು, ಉಷ್ಣವಲಯದ ಮಾನ್ಸೂನ್ ಮಾರುತಗಳ ವಾಯುಗುಣವನ್ನು ಹೊಂದಿದೆ. ಚಳಿಗಾಲ, ಬೇಸಿಗೆ ಕಾಲ ಮತ್ತು ಮಳೆಗಾಲದಲ್ಲಿ ವಾಯುಗುಣದ ಪರಿಸ್ಥಿತಿಯು ವಿಭಿನ್ನವಾಗಿರುತ್ತದೆ. ಸಮುದ್ರ ಮಟ್ಟದಿಂದ ದೂರವಿರುವುದರ ಜೊತೆಗೆ ಯಾವುದೇ ಮಹತ್ವವುಳ್ಳ ಬೆಟ್ಟಗುಡ್ಡಗಳಾಗಲಿ, ಸಾಕಷ್ಟು ಸಸ್ಯವರ್ಗವಿರುವುದಿಲ್ಲ. ಖಾಲಿ ಇರುವ ಗೋಮಾಳ ಮತ್ತಿತರ ಕಡೆ ಅರಣ್ಯ ಇಲಾಖೆಯವರು ಬೆಳೆಸಿರುವ ಕೆಲವು ಮರಗಳು ಕಂಡುಬರುತ್ತವೆ.

ಈ ತಾಲ್ಲೂಕಿನಲ್ಲಿ ಸಾರಿಗೆ ಸಂಪರ್ಕ ಅಂದಾಜು ೧೦೦೦ ಕಿ.ಮೀ. ಉದ್ದದ ಮಾರ್ಗವಿದೆ. ನಗರ ಕೇಂದ್ರದಿಂದ ವಿವಿಧ ಕಡೆಗೆ ಸಾರಿಗೆ ಸಂಪರ್ಕ ಇರುತ್ತದೆ. ಮೈಸೂರು ಹಾಸನ ರಾಜ್ಯ ಹೆದ್ದಾರಿ ಎಸ್‌ಎಚ್ ೫೭ ಈ ಊರಿನ ಮದ್ಯೆ ಹಾದು ಹೋಗುತ್ತದೆ. ಹಾಸನ, ಚಿಕ್ಕಮಗಳೂರು, ದರ್ಮಸ್ಥಳಕ್ಕೆ ಹೋಗುವವರು ಕೃಷ್ಣರಾಜನಗರವನ್ನು ದರ್ಶಿಸಿ ಹೋಗಲೇಬೇಕು. ಹಿಂದೆ ಇದ್ದ ಮೈಸೂರು ಅರಸೀಕೆರೆ

ಮೀಟರ್‌ಗೇಜ್‌ನಿಂದ ಬ್ರಾಡ್‌ಗೇಜ್‌ಗೆ ಪರಿವರ್ತನೆಯಾದ ಮೇಲಂತೂ ರೈಲುಗಳ ಓಡಾಟ ಅಧಿಕಗೊಂಡಿದೆ.

ನೂತನ ನಗರ ನಿರ್ಮಾಣಗೊಂಡಾಗ ಕೇವಲ ನಾಲ್ಕು ರಸ್ತೆಗಳಿದ್ದವು. ರಸ್ತೆಯ ಉಭಯ ಪಾರ್ಶ್ವಗಳಲ್ಲಿಯೂ ಜನರ ವಾಸಗೃಹಗಳೂ, ಮೈಸೂರು ಹಾಸನ ಹೆದ್ದಾರಿ ಮತ್ತು ಮುಸ್ಲಿಂ ಭಾಂಧವರ ಬಡಾವಣೆ ಮಾತ್ರ ಇದ್ದು ಜನಸಂಖ್ಯೆ ಬಹಳ ಕಡಿಮೆ ಇತ್ತು. ಕಳೆದ ಐವತ್ತು ವರ್ಷಗಳಿಂದ ನಗರ ವಿಶೇಷವಾಗಿ ಬೆಳೆದಿದ್ದು ಜನಸಂಖ್ಯೆಯು ಕೂಡಾ ಹೆಚ್ಚಾಗಿದೆ. ಜರ್ಮನ್ ಇಂಜಿನಿಯರ್, 'ಕ್ರೆಂಬಿಗಲ್‌ರ್' ಯೋಜನೆಯಂತೆ ನಗರ ರೂಪುಗೊಂಡಿದೆ. ಬಡವರ ಸೈಟು, ಬ್ರಾಹ್ಮಣರ ಬೀದಿ, ಹಳ್ಳದ ಬೀದಿ, ಬಜಾರ್ ರೋಡ್ ಇವು ಹಳೆಯ ವಿಲಾಸ ರಸ್ತೆ ಮುಂತಾದವು ಸೇರ್ಪಡೆಗೊಂಡಿವೆ. ಬಸವೇಶ್ವರ ಬಡಾವಣೆ, ಶ್ರೀರಾಮಬಡಾವನೆ, ಮೀನಾಕ್ಷಿ ಬಡಾವಣೆ, ಆಂಜನೇಯ ಬಡಾವಣೆಗಷ್ಟೆ ಸೀಮಿತವಾಗಿದ್ದ ಜನತೆ, ಇಂದು ವಿಸ್ತಾರಗೊಂಡಿದ್ದು ಹತ್ತಾರು ನೂತನ ಬಡಾವಣೆಗಳು ಸೃಷ್ಟಿಯಾಗಿದೆ. ಪುರಸಭೆ ನಗರ ನೈರ್ಮಲ್ಯದ ಕಡೆ ಗಮನಹರಿಸಿ ಉತ್ತಮ ಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸರಬರಾಜು, ಒಳಚರಂಡಿ, ಮಾರುಕಟ್ಟೆ, ಕ್ರೀಡಾಂಗಣ ಹೀಗೆ ನಾಗರಿಕರಿಗೆ ಅನೇಕ ಜನೋಪಯೋಗಿ ಸೌಲಭ್ಯವನ್ನು ಒದಗಿಸಿದೆ.

ಭೂಮೇಲ್ಮೈ ಲಕ್ಷಣಗಳು:

ಕರ್ನಾಟಕದ ದಕ್ಷಿಣ ಮೈದಾನಕ್ಕೆ ಸೇರಿದ ಕೃಷ್ಣರಾಜನಗರ ಬೆಟ್ಟಗುಡ್ಡ-ಗಳಿಂದಾಗಲಿ, ಆಳವಾದ ಕಣಿವೆ ಕಂದರಗಳಿಂದಾಗಲಿ ಕೂಡಿರುವುದಿಲ್ಲ. ಬದಲಾಗಿ ಅನೇಕ ಏರು-ತಗ್ಗುಗಳ ಪ್ರತೀಕವಾಗಿದೆ. ಗ್ರಾನೈಟ್ ವರ್ಗದ ಶಿಲಾ ರಚನೆಯುಳ್ಳ, ಬೆಣಚುಕಲ್ಲು, ಕರಿಕಲ್ಲು ಗುಡ್ಡಗಳೂ ಹಾಗೂ ಕಣ ಶಿಲೆಗಳು ಕಂಡುಬರುತ್ತದೆ. ಇಡೀ ಪ್ರದೇಶವು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದ್ದೂ ಇದಕ್ಕನುಗುಣವಾಗಿ ಕಾವೇರಿ ಮತ್ತು ಉಪನದಿಗಳು ಹರಿಯುತ್ತವೆ. ಈ ಪ್ರದೇಶವು ಸಮುದ್ರಮಟ್ಟದಿಂದ ಸುಮಾರು ೬೦೦ರಿಂದ ೮೦೦ ಮೀ ಎತ್ತರವಾಗಿದ್ದು ಉತ್ತರದಲ್ಲಿ ಹುಚ್ಚಯ್ಯನ ಬೆಟ್ಟವಿದೆ.

ನದಿವ್ಯವಸ್ಥೆ:

ಒಂದು ಪ್ರದೇಶದ ಜನರ ಜೀವನಕ್ರಮ, ಪ್ರಗತಿ, ಸಂಸ್ಕೃತಿ, ನಾಗರಿಕತೆ ಮತ್ತು ಕೃಷಿ ಅಲ್ಲಿ ದೊರೆಯಬಹುದಾದ ಜಲಸಂಪತ್ತುಗಳಿಂದ ನಿರ್ಧರಿಸಲ್ಪಡುತ್ತದೆ. ಕಾವೇರಿ ನದಿ ಕೃಷ್ಣರಾಜನಗರಕ್ಕೆ ಜೀವನಾಡಿಯಿದ್ದಂತೆ. ತಾಲ್ಲೂಕಿನ ಮಧ್ಯೆ ಪಶ್ಚಿಮದಿಂದ ಪೂರ್ವದ ಕಡೆಗೆ ಹರಿಯುವುದು. ಇದರಿಂದ ದೊರೆಯುವ ನೀರಾವರಿ ಸೌಲಭ್ಯ,

ಕುಡಿಯುವ ನೀರಿನ ಸೌಲಭ್ಯ, ವಿದ್ಯುಚ್ಛಕ್ತಿ ತಯಾರಿಕೆ, ಅದರ ಪವಿತ್ರತೆ, ವ್ಯಾಪಕತೆ ಮುಂತಾದ ಉಪಯುಕ್ತತೆಗಳ ಸಮಗ್ರದೃಷ್ಟಿಯಿಂದ ಇದು "ದಕ್ಷಿಣಗಂಗೆ" ಎಂದೇ ಪ್ರಸಿದ್ಧಿ ಪಡೆದಿದೆ. ಇದು ನಗರದ ಪಕ್ಕದಲ್ಲಿ ಹಾದುಹೋಗಿರುವುದು ನಮ್ಮ ಸುದೈವವೇ ಸರಿ. ಕಾವೇರಿ ಕರ್ನಾಟಕದ ಪ್ರಮುಖನದಿ.

ವಾಯುಗುಣ:

ವಾಯುಗುಣವು ಯಾವುದೇ ಪ್ರದೇಶದ ಭೌಗೋಳಿಕ ಪರಿಸರದ ಒಂದು ಪ್ರಮುಖ ಘಟಕವಾಗಿದೆ. ಜನಜೀವನದ ಪ್ರತಿಯೊಂದು ಹಂತದಲ್ಲಿ ವಾಯುಗುಣದ ಪ್ರಭಾವವು ನಿರ್ಣಾಯಕವಾದುದಾಗಿದೆ. ಈ ತಾಲ್ಲೂಕು ಮೈಸೂರು ಜಿಲ್ಲೆಯ ವಾಯುವ್ಯ ಭಾಗದಲ್ಲಿದ್ದು, ಉಷ್ಣವಲಯದ ಮಾನ್ಸೂನ್ ಮಾರುತಗಳ ವಾಯುಗುಣವನ್ನು ಹೊಂದಿದೆ. ಚಳಿಗಾಲ, ಮಳೆಗಾಲ ಮತ್ತು ಬೇಸಿಗೆಯಲ್ಲಿ ವಾಯುಗುಣದ ಪರಿಸ್ಥಿತಿಯು ವಿಭಿನ್ನವಾಗಿರುತ್ತದೆ. ನವೆಂಬರ್‌ನಿಂದ ಫೆಬ್ರುವರಿವರೆಗಿನ ಚಳಿಗಾಲವು ತಂಪಾದ ಹವೆಯಿಂದ ಕೂಡಿದ್ದರೆ, ಮಾರ್ಚಿಯಿಂದ ಮೇ ತಿಂಗಳವರೆಗಿನ ಬೇಸಿಗೆಯು ಹೆಚ್ಚು ತಾಪಮಾನದಿಂದಿದ್ದರೆ, ಚಳಿಗಾಲದಲ್ಲಿ ೧೮ರಿಂದ ೨೦ ಸೆಲ್ಸಿಯಸ್ ಉಷ್ಣಾಂಶವಿರುತ್ತದೆ.

ಸಸ್ಯವರ್ಗ:

ಈ ತಾಲ್ಲೂಕಿನಲ್ಲಿ ಹೇಳಿಕೊಳ್ಳುವಂತಹ ಸಸ್ಯವರ್ಗಗಳಾಗಲೀ, ಬೆಟ್ಟಗುಡ್ಡಗಳಿಲ್ಲ. ಅಂತೆಯೇ ಕಾಡುಗಳಿಲ್ಲ. ಸಾಕಷ್ಟು ನೀರಾವರಿ ಸೌಲಭ್ಯವಿರುವುದರಿಂದ ಸಿಗುವ ಪ್ರದೇಶವು ಹೆಚ್ಚು. ಹಿಂದೆ ಬೋರೆ, ತೋಪು ಹಾಗೂ ಗೋಮಾಳವೆಂದು ಕರೆಯುತ್ತಿದ್ದ ಭಾಗಗಳಲ್ಲಿ ಅಲ್ಪಸ್ವಲ್ಪ ಸಸ್ಯವರ್ಗವಿತ್ತು. ಜನಸಂಖ್ಯೆಯ ಒತ್ತಡದಿಂದ ನಾಶವಾಗಿ ಶೇ. ೦.೨೬ ಭಾಗ ಮಾತ್ರ ಅರಣ್ಯ ಪ್ರದೇಶವೆಂದು ದಾಖಲಿಸಲಾಗಿದೆ. ಈ ತಾಲ್ಲೂಕಿನಲ್ಲಿ ಉತ್ತರ ಭಾಗದ ಗುಳುವಿನ ಅತ್ತಿಗುಪ್ಪೆ ಮತ್ತು ಮಟದ ಕಾವಲುಗಳಲ್ಲಿ ಅರಣ್ಯ ಇಲಾಖೆಯವರು ಬೆಳೆಸಿರುವ ನೀಲಗಿರಿ ತೋಪುಗಳಿದ್ದು, ಕೃಷಿವಲಯಗಳಲ್ಲಿ ಬೇವು, ಮಾವು, ಹೊಂಗೆ, ಆಲ, ಬಸರಿ, ಬಾಗೆ, ಬಿದಿರು ಇತ್ಯಾದಿ ಮರಗಳಿವೆ.

ಮಣ್ಣುಗಳು:

ಕೃಷ್ಣರಾಜನಗರ ತಾಲ್ಲೂಕಿನ ಮಣ್ಣುಗಳ ಗುಣಲಕ್ಷಣಗಳು ಅಲ್ಲಿನ ಮೂಲಶಿಲೆಗಳು ಹಾಗೂ ವಾಯುಗುಣದ ಪರಿಸ್ಥಿತಿಯನ್ನಾಧರಿಸಿದೆ. ಹೆಚ್ಚು ಭಾಗ ಮರಳು ಮಿಶ್ರಣದಿಂದ ಕೂಡಿದ್ದು, ಗ್ರಾನೈಟ್ ಮತ್ತು ನೀಸ್ ವರ್ಗದ ಶಿಲೆಗಳಿಂದ

ಉತ್ಪತ್ತಿಯಾದುದು. ಇದು ಸಾಧಾರಣ ಕೆಂಪುಮಿಶ್ರಿತ ಕಂದು ಬಣ್ಣದಿಂದ, ಕೆಂಪು ಮತ್ತು ಕಂದು ಮಿಶ್ರಿತವಾಗಿಯೂ ಕೂಡಿದೆ. ಕಡಿಮೆ ಮಳೆಬೀಳುವ ಭಾಗಗಳಲ್ಲಿ ರಾಗಿ, ಜೋಳ, ಎಣ್ಣೆಕಾಳು, ಅಲಸಂದೆ, ಹುರುಳಿ, ಶೇಂಗಾ, ಎಳ್ಳು ಇತ್ಯಾದಿ ನೀರಾವರಿ ಸೌಲಭ್ಯ ಇರುವ ಕಡೆಗಳಲ್ಲಿ ಭತ್ತ, ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತದೆ. ಹೋಬಳಿವಾರು ಮಣ್ಣಿನ ಪ್ರಕಾರ ಮತ್ತು ಹಂಚಿಕೆಯನ್ನು ಗಮನಿಸಿದಾಗ ಹೊಸ ಅಗ್ರಹಾರ ಹೋಬಳಿಯಲ್ಲಿ ಮರಳು ಮಿಶ್ರಿತಮಣ್ಣು, ಸಾಲಿಗ್ರಾಮ, ಮಿರ್ಲೆ, ಹೆಬ್ಬಾಳು ಮತ್ತು ಕಸಬಾಗಳಲ್ಲಿ ಕಪ್ಪು, ಜಿಗುಟು ಮತ್ತು ಚುಂಚನಕಟ್ಟೆ ಹೋಬಳಿಯಲ್ಲಿ ಕೆಂಪು ಮರಳು ಮಿಶ್ರಿತ ಮಣ್ಣು ಕಂಡುಬರುತ್ತದೆ. ಒಟ್ಟಾರೆಯಾಗಿ ಇತರೆ ತಾಲ್ಲೂಕಿಗೆ ಹೋಲಿಸಿದರೆ ಇಲ್ಲಿನ ಮಣ್ಣು ಉತ್ಕೃಷ್ಟವಾಗಿರದೆ, ನೀರಾವರಿ ಸೌಲಭ್ಯದಿಂದಾಗಿ ವಿವಿಧ ಪ್ರಕಾರದ ಬೆಳೆಗಳನ್ನು ಬೆಳೆಯಲಾಗುತ್ತದೆ.

ನೀರಾವರಿ:

ಈ ತಾಲ್ಲೂಕಿನಲ್ಲಿ ಕಾಲುವೆ, ಬಾವಿ ಮತ್ತು ಕೆರೆ ನೀರಾವರಿ ಪ್ರಮುಖ ವಿಧಾನಗಳು. ಆದರೆ ಕಾಲುವೆ ನೀರಾವರಿಯು ಪ್ರಮುಖವಾಗಿದೆ. ಇಲ್ಲಿ ಮಳೆಯ ಹಂಚಿಕೆ ಕಡಿಮೆ ಮತ್ತು ಅಸಮಾನತೆಯಿಂದ ಕೂಡಿದೆ. ಈ ತಾಲ್ಲೂಕಿನ ನೀರಾವರಿಯ ಹೊಸ ಆಯಾಮವು ಕಾಲುವೆ ನೀರಾವರಿಯಿಂದ ಪ್ರಾರಂಭವಾಗುತ್ತದೆ. ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟುಗಳಲ್ಲಿ ಕೃಷ್ಣರಾಜ ಅಣೆಕಟ್ಟು ಮೊತ್ತಮೊದಲನೆಯ ದಾಗಿದೆ. ಇದನ್ನು ರಾಮನಾಥಪುರದಿಂದ ೫ ಕಿ.ಮೀ. ದೂರದಲ್ಲಿರುವ ಕಟ್ಟೇಪುರದ ಬಳಿ ನಿರ್ಮಿಸಲಾಗಿದೆ. ಇದರಿಂದ ತೊಡಲಾದ ಬಲದಂಡೆಯ ನಾಲೆ ರುದ್ರಪಟ್ಟಣದ ಮೂಲಕ ಚುಂಚನಕಟ್ಟೆಯವರೆಗೂ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ನಂತರ ಕಾಲುವೆ ನೀರಾವರಿ ಪರಿಚಯವಾಗಿ ಹಂತಹಂತವಾಗಿ ಸಾಕಷ್ಟು ಅಭಿವೃದ್ಧಿಯನ್ನು ಪಡೆದುಕೊಂಡಿದೆ.

ಚುಂಚನಕಟ್ಟೆಯಿಂದ ಸುಮಾರು ೧೨ ಕಿ.ಮೀ. ದೂರದಲ್ಲಿರುವ ಬೆಳ್ಳೂರಿನ ಬಳಿ "ಚಾಮರಾಜ ಅಣೆಕಟ್ಟು" ಕಾವೇರಿ ನದಿಗೆ ನಿರ್ಮಿಸಿರುವ ಎರಡನೇ ಅಣೆಕಟ್ಟು. ಇದು ತಾಲ್ಲೂಕಿನ ಹೆಚ್ಚು ಪ್ರದೇಶಕ್ಕೆ ನೀರಾವರಿಯನ್ನೊದಗಿಸುತ್ತದೆ. ಅದರಲ್ಲೂ ಸಾಲಿಗ್ರಾಮ, ಮಿರ್ಲೆ ಮತ್ತು ಗಂಧನಹಳ್ಳಿ ಪ್ರದೇಶಕ್ಕೆ ಚಾಮರಾಜ ನಾಲೆಯಿಂದ ಹೆಚ್ಚು ಉಪಯುಕ್ತವಾಗಿದೆ. ಮತ್ತೊಂದು ಬಲದಂಡೆ ನಾಲೆಯು ಕೃಷ್ಣರಾಜನಗರದ ಮೂಲಕ ಅತ್ತಿಕುಪ್ಪೆಯವರೆಗೆ ಸಾಗುವುದು. ಇದರ ನಂತರ ತಗ್ಗಿನಲ್ಲಿರುವ ಚುಂಚನಕಟ್ಟೆ

ಬಳಿಯಲ್ಲಿ "ಹನುಮಂತಕಟ್ಟೆ" ಮತ್ತು "ಶ್ರೀರಾಮದೇವರ ಕಟ್ಟೆ" ಎಂಬ ಎರಡು ಅಣೆಕಟ್ಟುಗಳಿವೆ. ಮೊದಲನೆಯದು ಚಿಕ್ಕದೇವರಾಜ ಒಡೆಯರ ಕಾಲದಲ್ಲಿ (ಕ್ರಿ.ಶ. ೧೬೭೨) ನಿರ್ಮಿತವಾದುದು. ಕಾಲುವೆ ನೀರಾವರಿಯು ಅಭಿವೃದ್ಧಿಗೊಂಡ ಮೇಲೆ ಕೆರೆ ಮತ್ತು ಬಾವಿ ನೀರಾವರಿಯ ಪ್ರಾಮುಖ್ಯತೆ ಕಡಿಮೆ ಆಗಿದೆ.

ಕೃಷಿ:

ನಮಗೆ ಅಗತ್ಯವಾದ ಆಹಾರಧಾನ್ಯಗಳು ಮತ್ತು ಕಚ್ಚಾಪದಾರ್ಥಗಳನ್ನು ಪಡೆಯುವುದಕ್ಕಾಗಿ ಭೂಮಿಯನ್ನು ಉಳುಮೆಮಾಡಿ, ಬಿತ್ತನೆಮಾಡಿ, ಬೆಳೆಗಳನ್ನು ಪೋಷಿಸುವ ಕಲೆಯೇ ಕೃಷಿ ಅಥವಾ ವ್ಯವಸಾಯ. ಇದು ಬಹುಹಿಂದಿನಿಂದಲೂ ರೂಢಿಯಲ್ಲಿರುವ ಇಲ್ಲಿಯ ಜನರ ಮೂಲ ವ್ಯಕ್ತಿಯಾಗಿದೆ. ಕೃಷಿಯು ಈ ತಾಲ್ಲೂಕಿನ ಆರ್ಥಿಕ ಪ್ರಗತಿಯನ್ನು ನಿರ್ಧರಿಸುತ್ತದೆ. ತಾಲ್ಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಶೇ. ೭೫ಕ್ಕೂ ಹೆಚ್ಚು ಜನರ ಜೀವನೋಪಾಯ ಕೃಷಿಯನ್ನಾಧರಿಸಿದೆ. ೧೯೮೧ನೇ ಜನಗಣತಿಯ ಪ್ರಕಾರ ಈ ತಾಲ್ಲೂಕಿನ ಒಟ್ಟು ದುಡಿಯುವ ಜನಸಂಖ್ಯೆ ೬೯.೪೨೦ ಗಳಾಗಿತ್ತು. ಇದರಲ್ಲಿ ೫೧.೬೭೩ ಜನರು ಕೃಷಿಕರಾಗಿದ್ದರು.

ಇಡೀ ಭಾರತದಲ್ಲಿ ಹೆಚ್ಚು ರೂಢಿಯಲ್ಲಿರುವಂತೆಯೇ ಈ ತಾಲ್ಲೂಕಿನಲ್ಲಿ ಸಾಂದ್ರ ಬೇಸಾಯ ಪದ್ಧತಿಯು ರೂಢಿಯಲ್ಲಿದೆ. ಜನಸಂಖ್ಯೆಯ ಒತ್ತಡವು ಹೆಚ್ಚಾದಂತೆ ಭೂಹಿಡುವಳಿಯ ಗಾತ್ರವು ಚಿಕ್ಕದಾಗುತ್ತಾ ಬಂದಿದೆ. ಸಾಮಾನ್ಯವಾಗಿ ಬೇಸಾಯ ಕ್ರಮವನ್ನು ತರಿ, ಖುಷ್ಕಿ ಮತ್ತು ಭಾಗಾಯ್ತು (ತೋಟ) ಎಂದು ಮೂರು ರೀತಿಯಲ್ಲಿ ವಿಮಗಡಣೆ ಮಾಡಿರುವುದು ಇಲ್ಲಿ ರೂಢಿಯಲ್ಲಿದೆ. ತರಿ ಜಮೀನಿನ ಮುಖ್ಯ ಬೆಳೆ ಭತ್ತ ಮತ್ತು ಕಬ್ಬು ಖುಷ್ಕಿ ವಲಯದ ಪ್ರಮುಖ ಬೆಳೆ ರಾಗಿ ಮತ್ತು ಜೋಳ. ಜೊತೆಯಲ್ಲಿ ಅಲಸಂದೆ, ಹುರುಳಿ, ಆವರೆ, ತೊಗರಿ ಮತ್ತು ತಂಬಾಕು. ತೋಟದಲ್ಲಿ ತೆಂಗು, ಅಡಿಕೆ ಮತ್ತು ವೀಳ್ಯದೆಲೆ ಇತ್ಯಾದಿ ಬೇಸಾಯವನ್ನೊಳಗೊಂಡಿದೆ.

ಸಾರಿಗೆ ಸಂಪರ್ಕ

ಒಂದು ಪ್ರದೇಶದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪ್ರಗತಿಯು ಅಲ್ಲಿನ ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳಿಂದ ನಿರ್ಧರಿಸಲ್ಪಡುತ್ತದೆ. ಸರಕು ಮತ್ತು ಪ್ರಯಾಣಿಕರನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯುವುದಕ್ಕೆ ಸಾರಿಗೆಯು ಎಷ್ಟು ಅಗತ್ಯವೋ ಮನುಷ್ಯನ ಭಾವನೆ ಹಾಗೂ ಸುದ್ಧಿ ಸಮಾಚಾರಗಳನ್ನು ರವಾನಿಸಲು ಸಂಪರ್ಕ ಮಾಧ್ಯಮಗಳೂ ಸಹ ಅಷ್ಟೇ ಅಗತ್ಯ. ಕೃಷ್ಣರಾಜನಗರ ತಾಲ್ಲೂಕಿನಲ್ಲಿ

ಸುಮಾರು ೯೫೭ ಕಿ.ಮೀ. ಉದ್ದದ ರಸ್ತೆ ಮಾರ್ಗವಿದೆ. ಅವು ತಾಲ್ಲೂಕು ಕೇಂದ್ರದಿಂದ ವಿವಿಧ ಸ್ಥಳಗಳಿಗೆ, ಅಂದರೆ ಜಿಲ್ಲಾಕೇಂದ್ರ, ಇತರ ತಾಲ್ಲೂಕು ಕೇಂದ್ರ ಹಾಗೂ ರಾಜ್ಯದ ರಾಜಧಾನಿಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಮೈಸೂರು – ಹಾಸನ ರಾಜ್ಯ ಹೆದ್ದಾರಿಯು (೫೪.೫೭) ಈ ತಾಲ್ಲೂಕಿನ ಮೂಲಕ ಆಗ್ನೇಯದಿಂದ ಉತ್ತರಕ್ಕೆ ಹೋಗುವುದು. ಕೃಷ್ಣರಾಜನಗರದ ಬಸ್‌ನಿಲ್ದಾಣದ ಮೂಲಕ ದಿನನಿತ್ಯ ಸುಮಾರೂ ೨೦೦ಕ್ಕೂ ಹೆಚ್ಚು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್‌ಗಳು ಹಾಯ್ದುಹೋಗುತ್ತಾ ಪ್ರಯಾಣಿಕರನ್ನು ವಿವಿಧ ಸ್ಥಳಗಳಿಗೆ ಸಾಗಿಸುತ್ತದೆ. ಈ ಕೇಂದ್ರದಿಂದ ಮೈಸೂರು, ಬೆಂಗಳೂರು, ಹುಣಸೂರು, ಪಿರಿಯಾಪಟ್ಟಣ, ಹೊಳೆನರಸೀಪುರ, ಚಿಕ್ಕಮಗಳೂರು, ಹಾಸನ, ಧರ್ಮಸ್ಥಳ, ಸಕಲೇಶಪುರ, ಕೊಣನೂರು, ಅರಕಲಗೂಡು ಮುಂತಾದ ಕಡೆಗೆ ಸಾರಿಗೆ ಬಸ್ಸಿನ ಸೌಲಭ್ಯವಿದೆ. ಕೊಯಮತ್ತೂರು, ವಿಜಯವಾಡ ಮುಂತಾದ ಅಂತರರಾಜ್ಯಗಳಿಗೂ ಸಾರಿಗೆ ಸೌಲಭ್ಯವಿದೆ.

ಈ ತಾಲ್ಲೂಕಿನಲ್ಲಿ ३೮ ಕಿ.ಮೀ. ಉದ್ದದ ರೈಲುಮಾರ್ಗದ ವ್ಯವಸ್ಥೆಯಿದೆ. ಮೊದಲು ಮೀಟರ್‌ಗೇಜ್ ಇದ್ದು ನಂತರ ಬ್ರಾಡ್‌ಗೇಜ್‌ಗೆ ಪರಿವರ್ತನೆಯಾಗಿದೆ. ಮೈಸೂರು – ಅರಸೀಕೆರೆಗೆ ರೈಲುಮಾರ್ಗವು ಈ ತಾಲ್ಲೂಕಿನ ಕೃಷ್ಣರಾಜನಗರ, ಹಂಪಾಪುರ, ಹೊಸ ಅಗ್ರಹಾರದ ಮೂಲಕ ಸಾಗುವುದು. ಲಕ್ಷ್ಮಣತೀರ್ಥನದಿಯನ್ನು ದಾಟುವ ಮೂಲಕ ರೈಲುಮಾರ್ಗವು ತಾಲ್ಲೂಕನ್ನು ಪ್ರವೇಶಿಸುತ್ತದೆ. ಬ್ರಾಡ್‌ಗೇಜ್‌ಗೆ ಪರಿವರ್ತನೆಗೆ ಆದನಂತರ ರೈಲುಗಳ ಓಡಾಟ ಅಧಿಕವಾಗಿದೆ. ಮೈಸೂರು–ಧಾರವಾಡ, ಮೈಸೂರು–ಶಿವಮೊಗ್ಗ ಎಕ್ಸ್‌ಪ್ರೆಸ್, ಮೈಸೂರು–ಅರಸೀಕೆರೆ ಪ್ಯಾಸೆಂಜರ್, ಯಶವಂತಪುರ – ಸುಬ್ರಮಣ್ಯ – ಶಿವಮೊಗ್ಗ ಇಂಟರ್‌ಸಿಟಿ ಮುಂತಾದ ರೈಲ್ವೆಗಳಿಂದ ತಾಲ್ಲೂಕಿಗೆ ಸಾರಿಗೆ ಸಂಪರ್ಕ ಅನುಕೂಲಕರವಾಗಿದೆ.

ಅಂಚೆ ಮತ್ತು ತಂತಿ ಸಂಪರ್ಕ ಮಾಧ್ಯಮವು ಸಾಕಷ್ಟಿದೆ. ಈ ತಾಲ್ಲೂಕಿನಲ್ಲಿ ಒಟ್ಟು ೪೮ ಅಂಚೆ ಕಛೇರಿಗಳು ಮತ್ತು ೧೮ ತಂತ ಕಛೇರಿಗಳಿವೆ. ಕೆಲವು ಚಿಕ್ಕಗ್ರಾಮ ಗಳಲ್ಲಿಯು ಅಂಚೆ ವ್ಯವಸ್ಥೆ ಇರುತ್ತದೆ.

ಉದ್ದಿಮೆಗಳು:

ಕೃಷ್ಣರಾಜನಗರದ ತಾಲ್ಲೂಕು ಕೃಷಿಪ್ರಧಾನವಾದುದು. ಹೆಚ್ಚು ಜನರು ತಮ್ಮ ಜೀವನೋಪಾಯಕ್ಕೆ ಕೃಷಿಯನ್ನು ಆಧರಿಸಿರುವರು. ಹಾಗಾಗಿ ಇಲ್ಲಿ ಯಾವುದೇ ಬೃಹತ್ ಪ್ರಮಾಣದ ಕೈಗಾರಿಕೆಗಳು ಅಭಿವೃದ್ಧಿಯಿರುವುದಿಲ್ಲ. ಒಂದು ಸಕ್ಕರೆ ಕೈಗಾರಿಕೆ

ಮತ್ತು ಒಂದು ಕಾಗದದ ಕೈಗಾರಿಕೆಯಿದೆ. ೫೦ಕ್ಕೂ ಹೆಚ್ಚು ಅಕ್ಕಿಗಿರಣಿಗಳು ಕಂಡುಬರುತ್ತದೆ.

ಚುಂಚನಕಟ್ಟೆಯ ಬಳಿ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯಿದೆ. ಇದರಲ್ಲಿ ನೂರಾರು ಜನ ಕಾಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕಾರ್ಖಾನೆಯು ದಿನಕ್ಕೆ ೧೨೫೦ ಟನ್ ಸಕ್ಕರೆಯನ್ನು ತಯಾರಿಸುವ ಸಾಮರ್ಥ್ಯವಿದೆ. ಆದರೆ ಅಷ್ಟೊಂದು ಉತ್ಪಾದನೆಯಾಗುತ್ತಿಲ್ಲ. ಸುತ್ತಮುತ್ತಲಿನ ಗದ್ದೆಗಳಿಂದ ಸಾಕಷ್ಟು ಕಬ್ಬು ಬೇಸಾಯ-ವಿದ್ದರೂ ಸಹ ವರ್ಷದಲ್ಲಿ ೮ ತಿಂಗಳೂ ಮಾತ್ರ ಕಬ್ಬು ಅರೆಯುವ ಕಾರ್ಯ ನಡೆಯುವುದು.

ಹನಸೋಗೆ ದಾಟಿದ ನಂತರ ಕಾವೇರಿನದಿಯು ಚುಂಚನಕಟ್ಟೆಯ ಬಳಿ ೨೭ ಮೀಟರ್ ಎತ್ತರದಿಂದ ಧುಮುಕುತ್ತಾ ಜಲಪಾತವೊಂದನ್ನು ನಿರ್ಮಿಸುತ್ತದೆ. ಇದು ಬೀಳುವ ಸ್ಥಳವನ್ನು "ಸೀತೆಮಡು" ಎಂದು ಕರೆಯುವರು. ಈ ನದಿಯ ಪಾತ್ರದುದ್ದಕ್ಕೂ ಸೃಷ್ಟಿಸುವ ಮೂರು ಜಲಪಾತಗಳಲ್ಲಿ ಇದು ಮೊದಲನೆಯದು. ಮುಂದೆ ಶಿವನ ಸಮುದ್ರ ಮತ್ತು ಹೊಗೇನ್‌ಕಲ್ ಬಳಿಯೂ ಎರಡು ಜಲಪಾತಳನ್ನು ಸೃಷ್ಟಿಸುತ್ತದೆ. ಚುಂಚನಕಟ್ಟೆ ಜಲಪಾತದ ಅದಮ್ಯವಾದ ಶಕ್ತಿಯ ಬಳಕೆಗಾಗಿ ಅಲ್ಲೊಂದು ಜಲವಿದ್ಯುದಾಗರವೊಂದು ನಿರ್ಮಾಣವಾಗಿದೆ.

ಕೃಷ್ಣರಾಜನಗರದಿಂದ ಹುಣಸೂರಿಗೆ ಹೋಗುವ ಮಾರ್ಗದಲ್ಲಿ "ಅಸೋಸಿಯೇಟೆಡ್ ಪೇಪರ್ ಮತ್ತು ಸ್ಟ್ರಾಬೋರ್ಡ್" ಕಾಗದದ ಕಾರ್ಖಾನೆಯೊಂದು ೧೯೭೯ರಲ್ಲಿ ಸ್ಥಾಪನೆಯಾಗಿದೆ. ಇದೊಂದು ಸಣ್ಣಪ್ರಮಾಣದ ಉದ್ದಿಮೆಯಾಗಿದೆ. ಸದ್ಯಕ್ಕೆ ಕ್ರಾಫ್ಟ್ ಪೇಪರನ್ನು ತಯಾರಿಸುತ್ತದೆ. ಬಿಸಾಡುವಂತಹ ವೇಸ್ಟ್ ಪೇಪರ್ ಪೆಟ್ಟಿಗಳನ್ನು ಕಚ್ಚಾಪದಾರ್ಥವನ್ನಾಗಿ ಬಳಸಿಕೊಂಡು ಕ್ರಾಫ್ಟ್ ಪೇಪರನ್ನು ತಯಾರಿಸುವುದು ನಿಜಕ್ಕೂ ಮೆಚ್ಚಬೇಕಾದ ಸಂಗತಿ. ಇಂತಹ ಕಚ್ಚಾಪದಾರ್ಥವನ್ನು ಮೈಸೂರು, ಮಂಗಳೂರು, ಕಣ್ಣಾನೂರು ಹಾಗೂ ಕೇರಳದ ನಗರಗಳಿಂದ ಪಡೆದು ಸಿದ್ದ ಪೇಪರನ್ನು ಹೆಚ್ಚಾಗಿ ಶಿವಕಾಶಿ, ಮದ್ರಾಸ್, ಮೈಸೂರು, ಮಂಗಳೂರು ಮತ್ತು ಕೇರಳಗಳಿಗೆ ಕಳುಹಿಸಲಾಗುತ್ತದೆ.

ಇಲ್ಲಿರುವ ೫೦ಕ್ಕೂ ಹೆಚ್ಚು ಅಕ್ಕಿಗಿರಣಿಗಳಿದ್ದೂ, ನಗರವೊಂದಲ್ಲೇ ೧೦ಕ್ಕೂ ಹೆಚ್ಚು ಅಕ್ಕಿಗಿರಣಿಗಳಿದ್ದರೆ ಕೆಲವೊಂದು ಕಲ್ಯಾಣಮಂಟಪಗಳಾಗಿ ಮಾರ್ಪಾಟ್ಟಿವೆ. ಉಳಿದವು ಭತ್ತವನ್ನು ಬೆಳೆಯುವ ವಲಯಗಳಲ್ಲಿ ಹಂಚಿಕೆಯಾಗಿದೆ.

ಜನಸಂಖ್ಯೆ:

ಸಂಪನ್ಮೂಲಗಳಲ್ಲಿ ಮಾನವ ಸಂಪತ್ತು ಅಮೂಲ್ಯವಾದುದು. ಬುದ್ಧಿಶಕ್ತಿ ಮತ್ತು ಕಾರ್ಯದಕ್ಷತೆಗಳಿಂದಾಗಿ ಮಾನವ ಕ್ರಿಯಾತ್ಮಕ ಉತ್ಪಾದಕ. ಆತನ ಉತ್ತಮ ಬೌದ್ಧಿಕತೆಯು ಪ್ರದೇಶವೊಂದರ ಸಂಪತ್ತಾಗಿ ಪರಿಣಮಿಸುವುದು. ಈ ತಾಲ್ಲೂಕು ವಿಸ್ತೀರ್ಣದಲ್ಲಿ ಜಿಲ್ಲೆಯ ೯ನೇ ಸ್ಥಾನದಲ್ಲಿದ್ದರೂ ಜನಸಂಖ್ಯೆಯ ಗಾತ್ರದಲ್ಲಿ ೬ನೇ ಸ್ಥಾನದಲ್ಲಿದೆ. ೧೯೯೧ನೇ ಜನಗಣತಿಯಲ್ಲಿ ಒಟ್ಟು ಜನಸಂಖ್ಯೆ ೨,೧೭,೩೭೦. ಆದರೆ ಇತ್ತೀಚಿನ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ನಗರದಲ್ಲಿ ೧,೭೭,೭೭೦. ಅದರಲ್ಲಿ ಪುರುಷರು ೮೯೩೭೦, ಮಹಿಳೆಯರು ೮೮೪೦೦.

ಸಾಕ್ಷರತೆ ಮತ್ತು ಶಿಕ್ಷಣ:

ಜನಸಾಂದ್ರತೆಯಲ್ಲಿ ಮುಂದುವರಿದಿರುವಂತೆ ಸಾಕ್ಷರತೆಯಲ್ಲೂ ಕೃಷ್ಣರಾಜ ನಗರದ ತಾಲ್ಲೂಕು ಮೈಸೂರು ಜಿಲ್ಲೆಯ ಎರಡನೆಯ ಸ್ಥಾನದಲ್ಲಿದೆ. ೧೯೮೧ರಲ್ಲಿ ಈ ತಾಲ್ಲೂಕಿನ ಸರಾಸರಿ ಸಾಕ್ಷರತೆಯ ಪ್ರಮಾಣ ಶೇ. ೩೨.೭೮ರಷ್ಟಿದ್ದರೆ, ೧೯೯೧ರ ಜನಗಣತಿಯ ಪ್ರಕಾರ ಇಡೀ ತಾಲ್ಲೂಕಿನ ಸಾಕ್ಷರತೆಯ ಪ್ರಮಾಣ ಶೇ. ೪೧.೭೧ ಆಗಿರುತ್ತದೆ. ಇದರಲ್ಲಿ ಪುರುಷರ ಸಾಕ್ಷರತೆ ಶೇ. ೫೨.೨೮ ಮತ್ತು ಸ್ತ್ರೀಯರಲ್ಲಿ ಶೇ. ೩೦.೮೧ರಷ್ಟಾಗಿರುತ್ತದೆ. ಆದರೂ ಗ್ರಾಮೀಣ ಪ್ರದೇಶದ ಸಾಕ್ಷರತೆಯ ಮಟ್ಟವು ಸುಧಾರಿಸಬೇಕಾಗಿದೆ. ೧೯೯೧ರಲ್ಲಿದ್ದಂತೆ ಈ ತಾಲ್ಲೂಕಿನ ಗ್ರಾಮೀಣ ಸಾಕ್ಷರತೆಯ ಪ್ರಮಾಣ ಶೇ. ೩೪.೯ರಷ್ಟಾಗಿರುತ್ತದೆ. ಇದು ಜಿಲ್ಲಾ ಸರಾಸರಿಗಿಂತ ಸ್ವಲ್ಪ ಉತ್ತಮ. ಇನ್ನುಳಿದ ಶೇ. ೬೫ರಷ್ಟು ಗ್ರಾಮೀಣ ಜನರು ಅನಕ್ಷರಸ್ಥರಾಗಿ ಉಳಿದಿರುವರು. ಇದನ್ನು ಸುಧಾರಿಸುವುದಕ್ಕಾಗಿ ತಾಲ್ಲೂಕಿನಾದ್ಯಂತ "ಸಾಕ್ಷರತಾ ಆಂದೋಲನ" ಯೋಜನೆ ಹಮ್ಮಿಕೊಳ್ಳಲಾಗಿದೆ. "ಸಾಕ್ಷರವಾಹಿನಿ ಅಥವಾ ಅಕ್ಷರ-ಆರೋಗ್ಯ" ಯೋಜನೆಯು ಫಲಕಾರಿಯಾಗಿದೆ. ಇದರಲ್ಲಿ ೨೫.೮೦೭ ಜನರು ನವಸಾಕ್ಷರರಾಗಿರುತ್ತಾರೆ. ಈಗಲೂ ಈ ಯೋಜನೆಯು ಮುಂದುವರೆದಿದೆ.

ಈ ತಾಲ್ಲೂಕಿನಲ್ಲಿ ಶಿಕ್ಷಣದ ವ್ಯವಸ್ಥೆ ಸುಧಾರಿಸಿದೆ. ೩೦ಕ್ಕೂ ಹೆಚ್ಚು ಪ್ರೌಢಶಾಲೆಗಳಿವೆ. ಅವುಗಳಲ್ಲಿ ೧೩ ಸರ್ಕಾರಿ ಉಳಿದವು ಖಾಸಗಿ ಸಂಸ್ಥೆಗಳಾಗಿರುತ್ತದೆ. ಒಟ್ಟು

೧೨ ಪದವಿಪೂರ್ವ ಕಾಲೇಜು ಇದ್ದು ೨ ಅನುದಾನಿತ ಸಂಸ್ಥೆಗಳಾಗಿದೆ. ಒಟ್ಟು ೧೦೭ ಹೈಯರ್ ಪ್ರೈಮರಿ ಶಾಲೆಗಳಿದ್ದು ಸರ್ಕಾರಿ ಶಾಲೆಗಳು ಅಧಿಕ ಮೂರು ಪ್ರಥಮದರ್ಜೆಗಳಲ್ಲಿ ಒಂದು ಖಾಸಗಿ ಸಂಸ್ಥೆಗೆ ಸೇರಿದ್ದು, ಅದು ಸಾಲಿಗ್ರಾಮದಲ್ಲಿದ್ದರೆ, ಇನ್ನುಳಿದ ಎರಡು ಕೃಷ್ಣರಾಜನಗರದಲ್ಲಿದೆ. ಅದರಲ್ಲಿ ಒಂದು ಮಹಿಳಾ ಪ್ರಥಮದರ್ಜೆ ಕಾಲೇಜು ಇದೆ. ಇತ್ತೀಚೆಗೆ ಕೆಲವೊಂದು ತಾಂತ್ರಿಕ ಮತ್ತು ವೃತ್ತಿ ಶಿಕ್ಷಣ ಕಾಲೇಜುಗಳು ಕಂಡುಬರುತ್ತವೆ. ಅನೇಕ ವಿದ್ಯಾರ್ಥಿನಿಲಯಗಳಲ್ಲಿ ಪರಿಶಿಷ್ಟಜಾತಿ ಮತ್ತು ವರ್ಗಕ್ಕೆ ೧೪ ವಿದ್ಯಾರ್ಥಿನಿಲಯಗಳಿವೆ.

ಇತರ ಸೇವಾಸೌಲಭ್ಯಗಳು:

ಕೃಷ್ಣರಾಜನಗರ ತಾಲ್ಲೂಕಿನಲ್ಲಿ ೧೫ ಪ್ರಾಥಮಿಕ ಆರೋಗ್ಯ ಘಟಕಗಳಿವೆ ಹಾಗು ಎರಡು ಕುಟುಂಬ ಕಲ್ಯಾಣ ಕೇಂದ್ರಗಳಿವೆ. ಕೃಷ್ಣರಾಜನಗರ ಪಟ್ಟಣದಲ್ಲಿ ಸಾರ್ವಜನಿಕ ಆಸ್ಪತ್ರೆಯೊಂದಿದ್ದು, ಸುಮಾರು ನೂರು ಒಳರೋಗಿಗಳಿಗೆ ಅವಕಾಶ ಕಲ್ಪಿಸುವಷ್ಟು ವ್ಯವಸ್ಥೆಯಿರುತ್ತದೆ. ಇವುಗಳಿಗೆಲ್ಲಾ ಅನೇಕ ಖಾಸಗಿ ಕ್ಲಿನಿಕ್‌ಗಳು ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕಂಡುಬರುತ್ತದೆ.

ಹೆಚ್ಚು ಕಡಿಮೆ ಈ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಸೌಲಭ್ಯವಿರುತ್ತದೆ. ಜನಸಂಖ್ಯೆ ಹೆಚ್ಚಾಗಿರುವ ಹಳ್ಳಿಗಳಲ್ಲಿ ಬಾವಿ ಮತ್ತು ಟ್ಯಾಂಕ್‌ಗಳ ವ್ಯವಸ್ಥೆಯಿರುತ್ತದೆ. ಮಿಕ್ಕೆಲ್ಲಾ ಕಡೆಗಳಲ್ಲಿ ಹ್ಯಾಂಡ್ ಪಂಪ್ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಲಾಗಿದೆ. ಇದೇ ರೀತಿ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೂ ವಿದ್ಯುಚ್ಛಕ್ತಿ ಸರಬರಾಜು ವ್ಯವಸ್ಥೆಯಿದೆ.

ಈ ತಾಲ್ಲೂಕಿನಲ್ಲಿ ಮನರಂಜನೆಗೇನೂ ಕೊರತೆಯಿಲ್ಲ. ತಾಲ್ಲೂಕಿನಾದ್ಯಂತ ೧೧ ಸಿನಿಮಾ ಮಂದಿರಗಳಲ್ಲಿ, ನಗರದಲ್ಲಿ ಮೂರಿವೆ. ಇವುಗಳಲ್ಲದೇ ೧೫ ವಾಣಿಜ್ಯ ಬ್ಯಾಂಕುಗಳು ಮತ್ತು ೧೨೬ ಕೃಷಿ ಸಹಕಾರ ಸಂಘಗಳಿವೆ. ಗ್ರಾಮಾಂತರ ವಲಯದಲ್ಲಿ ಬ್ಯಾಂಕುಗಳ ವ್ಯವಸ್ಥೆಯು ಕೊರತೆಯಿದೆ. ಅಧಿಕ ಸಂಖ್ಯೆಯಲ್ಲಿ ಕೃಷಿ ಸಹಕಾರ ಸಂಘಗಳಿದ್ದರೂ ಸಹ ಅವುಗಳಲ್ಲಿ ಯಾವುದೂ ಕೂಡಾ ಸಮರ್ಪಕವಾಗಿ ಕೃಷಿಗಾಗಿ ಸೇವೆ ಸಲ್ಲಿಸುತ್ತಿಲ್ಲ. ಕೆ.ಆರ್.ನಗರ, ಕುಪ್ಪೆ, ಅರ್ಜುನಹಳ್ಳಿ, ಸಾಲಿಗ್ರಾಮ, ಮಿರ್ಲೆ ಮತ್ತು ಬೇರ್ಯಗಳಲ್ಲಿ ವಾರದ ಸಂತೆಗಳು ನಡೆಯುತ್ತದೆ. ಸಾಮಾನ್ಯ ರೈತರು ಈ ವಾರದ ಸಂತೆಗಳಲ್ಲಿ ತಮ್ಮಲ್ಲಿ ಬೆಳೆದ ಅತ್ಯಲ್ಪ ಪ್ರಮಾಣದ ಕೃಷಿ ಉತ್ಪನ್ನಗಳನ್ನು ಮಾರಿ, ತಮ್ಮ ನಿತ್ಯ ಬಳಕೆಗೆ ಬೇಕಾಗುತವಂತಹ ಸರಕುಗಳನ್ನು ಕೊಳ್ಳುವರು. ಕೃಷಿಕರೇ ಹೆಚ್ಚಾಗಿರುವ

ಈ ತಾಲ್ಲೂಕಿನಲ್ಲಿ ಅವರ ನಿತ್ಯಾವಶ್ಯಕ ಸೌಲಭ್ಯಗಳ ಪೂರೈಕೆ ಇನ್ನೂ ಸಂಪೂರ್ಣವಾಗಿ ಲಭ್ಯವಾಗುತ್ತಿಲ್ಲ.

ಸಾಮಾಜಿಕ ಪರಿಚಯ:

ಕೃಷ್ಣರಾಜನಗರವು ಇಂದು ಲೇಖಕ ಎಚ್ಚೆಸ್ಕೆ ಹೇಳುವಂತೆ ಒಂದು ರೀತಿಯಲ್ಲಿ ಕರತಲ ಕರ್ನಾಟಕ, ಕರತಲ ಭಾರತವಿದ್ದಂತೆ, ದಕ್ಷಿಣ ಗಂಗೆ ಕಾವೇರಿಯ ಮಗ್ಗುಲಲ್ಲಿ ಅರಳಿದ ಸುಂದರ ನಗರ. ಇಲ್ಲಿನ ಜನ ಧರ್ಮ ಬೀರುಗಳು, ಧರ್ಮಸಹಿಷ್ಣುಗಳು, ದರ್ಮ ಸಮನ್ವಯಕಾರರು, ವಿವಿಧ ಧರ್ಮಗಳ ನಾನಾ ಜಾತಿಗಳ ನಂಬಿಕೆ ಆಚರಣೆಗಳ ಜನರು ಪರಸ್ಪರ ಸೌಹಾರ್ದದಿಮದ ಬಾಳುತ್ತಿದ್ದಾರೆ. ಸಾಲಿಗ್ರಾಮದಲ್ಲಿ ಜೈನರೂ, ನಗರ ಮತ್ತಿತರ ಕಡೆ ಮುಸ್ಲೀಮರೂ ಚೌಕಹಳ್ಳಿಯಲ್ಲಿ ವೀರಶೈವರೂ, ಡೋರ್ನಹಳ್ಳಿಯಲ್ಲಿ ಕ್ರೈಸ್ತರೂ ಹೀಗೆ ವಿವಿಧ ಜಾತಿಯ ಜನರು ತಮ್ಮ ತಮ್ಮ ಕುಲಕಸುಬು ಮತ್ತು ತಮ್ಮ ಧರ್ಮಕ್ಕನುಗುಣವಾಗಿ ಬಾಳಾಟ ನಡೆಸುತ್ತಿದ್ದಾರೆ. ಹಾಗಾಗಿ ಕೃಷ್ಣರಾಜನಗರವನ್ನು ಒಂದು ರೀತಿಯಲ್ಲಿ ಸಂಗ್ರಹ ಭಾರತವೆಂದೆ ಹೇಳಬಹುದು.

ನಗರದಲ್ಲಿ ಹೆಚ್ಚು ಸುಶಿಕ್ಷಿತ ಜನರಿದ್ದು ಸರ್ಕಾರಿ ಮತ್ತು ಸರ್ಕಾರಿಯೇತರ ಕೆಲಸಗಳಲ್ಲಿ ದುಡಿಯುತ್ತಿರುವವರು. ನಾಡಿಗೆ ಅನೇಕ ಮಹನೀಯರುಗಳನ್ನು ಕೊಟ್ಟಂತಹ ಹೆಗ್ಗಳಿಕೆ ಇದರದು. ಇಲ್ಲಿ ವ್ಯಾಸಂಗ ಮಾಡಿದವರು ವೈದ್ಯರು, ಇಂಜಿನಿಯರು, ವಕೀಲರು, ಅಧ್ಯಾಪಕರು, ವಾಣಿಜ್ಯೋದಮಿಗಳು, ಕೈಗಾರಿಕಾ ಉದ್ಯಮಿಗಳು ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆಸಲ್ಲಿಸುತ್ತಿದ್ದಾರೆ. ಅನೇಕರೂ ಹೊರದೇಶಗಳಿಗೂ ಹೋಗಿ ನೆಲೆಸಿದ್ದು ವಿವಿಧ ಕ್ಷೇತ್ರಗಳಲ್ಲಿ ನಗರದ ಹೆಸರನ್ನು ಎತ್ತಿ ಹಿಡಿದಿದ್ದಾರೆ. ಇಲ್ಲಿನ ಜನಪ್ರತಿನಿಧಿಗಳು ಶಾಸಕರಾಗಿ, ಮಂತ್ರಿಗಳಾಗಿ ವಿವಿಧ ಖಾತೆ-ಗಳನ್ನು ನಿರ್ವಹಿಸಿ ಕರ್ನಾಟಕದಲ್ಲಿ ಕೃಷ್ಣರಾಜನಗರವನ್ನು ಬೆಳಗಿದ್ದಾರೆ.

ಈ ನಗರದ ನಾಗರೀಕರು ಸಹೃದಯರು, ದೈವಭಕ್ತರು, ಪರೋಪಕಾರಿಗಳು, ಸಹಕಾರ ಮನೋಭಾವದವರು, ಸುಸಂಸ್ಕೃತರಾಗಿ, ಕಲಾಭಿಮಾನಿಗಳಾಗಿ ಶಾಂತಿಪ್ರಿಯ-ರಾಗಿ ಬಾಳ್ವೆ ನಡೆಸುತ್ತಿದ್ದಾರೆ. ಹಲವಾರು ಸಂಘಸಂಸ್ಥೆಗಳನ್ನು ರಚಿಸಿಕೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದಾರೆ. ನಗರದ ರೋಟರಿಸಂಸ್ಥೆ, ಲಯನ್ಸ್, ಲಯನ್ಸ್‌ಕ್ಲಬ್, ಶ್ರೀಮಹಾಗಣಪತಿ ಸೇವಾಸಮಿತಿ, ಶ್ರೀ ಕೃಷ್ಣಸೇವಾಸಮಿತಿ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ವಾಸವೀ ಸಂಘ ಹೀಗೆ ಹಲವಾರು ಸಂಗಸಂಸ್ಥೆಗಳು ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಂಗೀತ, ನಾಟಕ, ನೃತ್ಯ,

ವಿಚಾರಗೋಷ್ಠಿ ಸಮಾಜಸೇವಾಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ನಗರದ ಡಾ.ರಾಜಕುಮಾರ್ ಬಾನಂಗಳ ಬಯಲು ರಂಗಮಂದಿರದಲ್ಲಿ ಸುಮಾರು ಎರಡು ತಿಂಗಳು ಮಹಾಗಣಪತಿ ಪ್ರತಿಷ್ಠಾಪಿಸಿ ನಗರದ ನಾಗರಿಕರಿಗೆ ವಿವಿಧ ಕಾರ್ಯಕ್ರಮಗಳ ರಸದೌತಣವನ್ನು ಒದಗಿಸುತ್ತಾ ಬಂದಿರುತ್ತದೆ. ಶ್ರೀ ಕೃಷ್ಣ ಸೇವಾಸಮಿತಿ ಪ್ರತಿವರ್ಷ ಕೃಷ್ಣಜನ್ಮಾಷ್ಠಮಿ ಸಂದರ್ಭದಲ್ಲಿ ಸಂಗೀತ, ನೃತ್ಯ ಮನರಂಜನಾ ಕಾರ್ಯಕ್ರಮ ನೀಡುತ್ತಾ ಬಂದಿದೆ.

ನಗರ ಸ್ಥಾಪನೆಯ ಇಪ್ಪತ್ತೈದು ವರ್ಷಗಳ ನೆನಪಿಗಾಗಿ ಪುರಸಭೆಯ ವತಿಯಿಂದ ಆಚರಿಸಿದ ಬೆಳ್ಳಿಹಬ್ಬದ ಸಂದರ್ಭದಲ್ಲಿ ನಗರದ ಸ್ಥಾಪನೆಯ ಕುರುಹಾದ ಗರುಡಗಂಬದ ಮೇಲೆ ವಿದ್ಯುದ್ದೀಪವೊಂದನ್ನು ಅಲಂಕರಿಸಲಾಗಿತ್ತು. ಅಂದಿನ ಮಹೋತ್ಸವಕ್ಕೆ ರಾಷ್ಟ್ರದ ನಾಯಕರಾದ ಶ್ರೀ.ಬಿ.ಡಿ.ಜತ್ತಿ, ಎಸ್. ನಿಜಲಿಂಗಪ್ಪನವರು ಆಗಮಿಸಿದ್ದರು. ಐವತ್ತನೇ ವರ್ಷದ ಸುವರ್ಣ ಮಹೋತ್ಸವದಲ್ಲಿ ಪುರಸಭೆಯಿಮದ ಹಲವಾರು ಕಾರ್ಯಕ್ರಮ ನಡೆದು ಸ್ಮರಣ ಸಂಚಿಕೆ ಹೊರಬಂದಿತ್ತು. ಈಗ ಎಪ್ಪತ್ತೈದನೆ ವರ್ಷದ ಆಚರಣೆಗಾಗಿ ನಗರ ಸಿದ್ಧಗೊಳ್ಳುತ್ತಿದೆ. ಈ ಸಂಬಂಧ ಅಮೃತ ಮಹೋತ್ಸವ ಸಮಿತಿ ರಚಿತವಾಗಿರುತ್ತದೆ.

ಇಂದು ಬೃಹತ್ತಾಗಿ ಬೆಳೆದಿರುವ ನಗರ ಅವಶ್ಯಕ ಮೂಲಭೂತ ಸೌಲಭ್ಯಗಳನ್ನು ಹೊಂದಿ ಭೌಗೋಳಿಕವಾಗಿ ಮತ್ತು ಸಾಮಾಜಿಕವಾಗಿ ಮೈಸೂರು ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾಗಿದೆ.

ಅಧ್ಯಾಯ–೪

ನಗರದ ಧಾರ್ಮಿಕ ಜೀವನ

ನಗರದ ಆದಿದೇವತೆ ಶ್ರೀ ಮೀನಾಕ್ಷಿ ಸಮೇತ ಶ್ರೀ ಅರ್ಕೇಶ್ವರ ಸಾಮಿಯ ಪಾದಪದ್ಮಗಳನ್ನು ಸದಾಕಾಲವು ಆರಾಧಿಸಬೇಕೆಂದು ಪರಮಾತ್ಮನ ಶಾಶ್ವತ ಸೇವಕಳಾಗ-ಬೇಕೆಂದು ತಲಕಾವೇರಿಯಿಂದ ಹರಿದು ಬಂದ ಮಾತೆ ಕಾವೇರಿ ಬಹು ಪವಿತ್ರ ಮತ್ತು ಶಾಂತಚಿತ್ತಳು. ಆದರೆ ೧೯೨೪ರಮದು ಇಡೀ ಎಡತೊರೆ ಯನ್ನೊಮ್ಮೆ ಬಾಚಿ ತಬ್ಬಿಕೊಂಡಿದ್ದರ ಫಲವೇ ಎಡತೊರೆಯ ಸ್ಥಳಾಂತರ ಮತ್ತು ಕೃಷ್ಣರಾಜನಗರ ನಾಮಾಂಕಿತಗೊಂಡು ಇಂದು ವಿಶಾಲ ಭೂಪ್ರದೇಶದ ಮೇಲೆ ಉತ್ತಮ ವಾಯುಗುಣ, ಸಂಪದ್ಭರಿತ ನಗರವಾಗಿದೆ. ಎಡತೊರೆ ಪೂರ್ಣ ಹೊಸ ನಗರಕ್ಕೆ ಸ್ಥಳಾಂತರಗೊಂಡ ಮೇಲೆ ಅಲ್ಲಿ ಉಳಿದಿರುವುದು ಅರ್ಕೇಶ್ವರ ಸನ್ನಿಧಿ, ಪಾಳು ನರಸಿಂಹ ದೇವಾಲಯ, ಆಂಜನೇಯನ ಗುಡಿ, ಯೋಗಾನರಸಿಂಹಸ್ವಾಮಿ ಮಠ, ಶ್ರೀರಾಮದೇವಸ್ಥಾನ ಹಾಗೂ ಮಸೀದಿ ಇದೆ.

ವಿಪುಲವಾದ ಧಾರ್ಮಿಕ ಪರಂಪರೆಯನ್ನು ಹೊಂದಿದ ನಗರವನ್ನು ಒಂದು ಪ್ರದಕ್ಷಿಣೆ ಹಾಕಿದರೆ ಇಲ್ಲಿರುವ ದೇವಸ್ಥಾನ, ಜನರ ಧಾರ್ಮಿಕ ನಂಬಿಕೆಗಳು ಭಾರತೀಯ ಧರ್ಮ ಮತ್ತು ಸಂಸ್ಕೃತಿಗೆ ಪೂರಕವಾಗಿವೆ. ಅರ್ಕೇಶ್ವರಸ್ವಾಮಿ, ಪದ್ಮಾಕ್ಷಿ, ಮೀನಾಕ್ಷಿ-ದೇವಿಯ ಕೃಷ್ಣ ಶಿಲೆಯ ವಿಗ್ರಹಗಳಿವೆ ಶೈವಾಗಮದ ರಿತ್ಯಾ ಪೂಜಾಕೈಂಕರ್ಯಗಳು ನಡೆದು ಮಾಘ ಶುದ್ಧ ಸಪ್ತಮಿ ರಥೋತ್ಸವ ನಡೆದು, ಶಿವರಾತ್ರಿಯ ಶಿವಲಿಂಗದ ಮೇಲೆ ಬೀರುವ ರವಿಕಿರಣವನ್ನು ನೋಡಲು ಜನತೆ ಸಾಗರೋಪಾದಿಯಲ್ಲಿ ಹೋಗುತ್ತಾರೆ. ಅದೇ ರೀತಿ ಚುಂಚನಕಟ್ಟೆಯ ಶ್ರೀರಾಮ ರಥೋತ್ಸವ, ಕಪ್ಪಡಿ ಜಾತ್ರೆ ಮತ್ತು ರಾಮನಾಥಪುರದ ಜಾತ್ರೆಗಳಿಗೂ ನಗರದ ಜನ ಭಾಗವಹಿಸುತ್ತಾರೆ ಕಾವೇರಿಯ ತಟದ ಭಾಗಗಳಲ್ಲಿ ಬರುವ ಈ ಧಾರ್ಮಿಕ ಕೇಂದ್ರಗಳು ಬುದ್ಧಿಜೀವಿಗಳಿಗೆ ಪ್ರವಾಸಿಗರಿಗೆ ಪ್ರೇಕ್ಷಣಿಯ ಸ್ಥಳವಾದರೆ ಆಸ್ತಿಕರಿಗೆ ದಕ್ಷಿಣ ಕಾಶಿಯಾಗಿದೆ.

ಎಡತೊರೆ ಬದಲಾಯಿಸಿದಾಗ ಪಿತ್ರಾರ್ಜಿತ ಆಸ್ತಿಯೆಂಬಂತೆ ಅಲ್ಲಿನ ಮಸೀದಿ, ಆಂಜನೇಯಸ್ವಾಮಿ, ಹೊಳೆದಡದಲ್ಲಿದ್ದ ಹೊಳೆ ಗಣಪತಿ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಚಂದ್ರಮೌಳೇಶ್ವರ ಶಿಲಾ ವಿಗ್ರಹಗಳನ್ನು ಹೊಸ ನಗರಕ್ಕೆ ತಂದು ಪ್ರತಿಷ್ಠಾಪಿಸಲಾಯಿತು.

ನಗರದ ಕೇಂದ್ರ ಭಾಗದಲ್ಲಿ ವಿಶಾಲ ಜಾಗದಲ್ಲಿ ಅಶ್ವಥ ವೃಕ್ಷಗಳ ಸಾನಿದ್ಯದಲ್ಲಿ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯ ೧೯೩೪ರಲ್ಲಿ ಪುನರ್ ಪ್ರತಿಷ್ಠಾಪಿತಗೊಂಡಿರುತ್ತದೆ. ಸುಂದರ ಕೃಷ್ಣಶಿಲೆ, ಶಂಕಚಕ್ರ ಗಧಾಪದ್ಮಗಳಿಂದ ಅಲಂಕೃತಗೊಂಡು ಮತ್ತು ಮಹಾಲಕ್ಷ್ಮಿ ವಿಗ್ರಹಗಳು ಇಂದು ವಿಶಿಷ್ಟಾದ್ವೈತ ಮತದವರ ಭಕ್ತಿ ಕೇಂದ್ರವಾಗಿದೆ.

ಚಂದ್ರಮೌಳೇಶ್ವರ ರಸ್ತೆಯಲ್ಲಿರುವ ಶ್ರೀ ಯೋಗಾನಂದೇಶ್ವರ ಮಠ ಇಂದು ನಗರದ ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ. ಹಳೇ ಎಡತೊರೆಯಿಂದ ಹೊಸ ನಗರಕ್ಕೆ ಅಡಿಯಿಟ್ಟಂತಹ ಶ್ರೀಯೋಗಾನಂದೇಶ್ವರಮಠ ಶ್ರೀ ಗಣಪತಿ ಭಾರತಿ ಸ್ವಾಮೀಜಿಯಿಂದ ಇಂದಿನ ಶ್ರೀ ಶಂಕರಭಾರತಿಸ್ವಾಮೀಜಿಯವರೆಗೂ ಆಧ್ಯಾತ್ಮ ಪ್ರಚಾರದ ಫಲವಾಗಿ ಆಸ್ತಿಕರಿಗೆ ವಿಶೇಷ ಭಕ್ತಿಕೇಂದ್ರವಾಗಿದೆ. ನವರಾತ್ರಿ ಮತ್ತು ರಾಮನವಮಿಯಂದು ಒಂಬತ್ತು ದಿನಗಳವರೆಗೆ ವಿಶೇಷ ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದು ಬೇಸಿಗೆಯಲ್ಲಿ ದೂರದ ಊರುಗಳಿಂದ ಬರುವ ಮಕ್ಕಳಿಗೆ ವೇದ ಅಧ್ಯಯನ, ಪ್ರವಚನವನ್ನು ಕಲಿಸಲಾಗುತ್ತದೆ.

ಮುಂದೆ ಅರ್ಕನಾಥ ರಸ್ತೆಯಲ್ಲಿ ಸಾಗಿದರೆ ಮಾರುತಿ ಗುಡಿಯಿದ್ದು ನಿತ್ಯ ಪೂಜಾಕಾರ್ಯ ನಡೆಯುತ್ತದೆ. ಇಲ್ಲಿ ಕಂಡುಬರುವ ಶ್ರೀ ವಿದ್ಯಾ ಗಣಪತಿ ಮಂದಿರ ಕೆಲ ಉತ್ಸಾಹಿ ತರುಣರ ಶ್ರಮದ ಫಲವಾಗಿದೆ. ೧೯೭೦ರಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರಿಂದ ಕಲ್ಯಾಣಮಂಟಪವಾಗಿ ರೂಪುಗೊಂಡು, ಇಂದಿನವರೆಗೂ ಕಾರ್ಯನಿರ್ವಹಿಸುತ್ತಿದೆ. ಇದೇ ಆವರಣದಲ್ಲಿ ಕೌಮಾರೀಶ್ವರಿ ಎಂದು ಕರೆಯುವ ಮಾರಮ್ಮನ ಗುಡಿಯಿದ್ದು, ಪ್ರತಿ ಮಂಗಳವಾರ ಮತ್ತು ಶುಕ್ರವಾರ ವಿಶೇಷ ಪೂಜೆ ನಡೆಯುತ್ತದೆ.

ಆಂಜನೇಯ ಬ್ಲಾಕಿನ ಅದಿದೇವತೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಈ ಭಾಗದ ಪ್ರಮುಖ ಆರಾಧನಾ ದೇವರು. ಎಡತೊರೆಯಿಂದ ತಂದು ೧೯೩೪ರಲ್ಲಿ ಪ್ರತಿಷ್ಠಾಪಿಸಲಾಯಿತು ಎಂದು ಹೇಳಲಾಗಿದೆ. ಚಿಕ್ಕದಾಗಿ ಚೊಕ್ಕಟವಾಗಿರುವ ಈ ಭವ್ಯ ಶಿಲಾಮೂರ್ತಿಯನ್ನು ಪೂರ್ವದಲ್ಲಿ ಶ್ರೀ ವ್ಯಾಸರಾಜಸ್ವಾಮಿಗಳು ಪ್ರತಿಷ್ಠಾಪಿಸಿದ್ದರೆಂದು ಇತಿಹಾಸವಿದೆ.

ಇಲ್ಲಿಂದ ಮುಮದೆ ಸಾಗಿದರೆ ಸಗರವಂಶದ ಉಪ್ಪಾರರ ಸುಂದರ ಅಲಂಕೃತಗೊಂಡ ಶ್ರೀರಾಮಮಂದಿರವಿದೆ. ಪುರಾತನ ಚಿತ್ರಕಲೆ, ಭಾವಚಿತ್ರಗಳಿದ್ದೂ, ನಿತ್ಯ ಪೂಜೆಗೊಂಡು, ಕಲ್ಯಾಣಮಂಟಪವಾಗಿ ಕಾರ್ಯನಿರ್ವಹಿಸುತ್ತಿದೆ.

ಭಾರತೀ ವಿದ್ಯಾಮಂದಿರದ ಮುಂದೆ ಶ್ರೀಮತಿ ಆಲಮೇಲಮ್ಮನವರು ತಮ್ಮ ಸ್ವಂತ ಆಸ್ತಿಯಿಂದ ಪ್ರತಿಷ್ಠಾಪಿಸಿರುವ ಶ್ರೀ ಸತ್ಯನಾರಾಯಣ ದೇವಾಲಯ ಕೃಷ್ಣಶಿಲೆಯ ಮೂರ್ತಿ ಪಂಚರಾತ್ರಗಮರಿತ್ಯಾ ಪೂಜೆ ನಡೆಯುತ್ತದೆ. ಬಲಭಾಗದಲ್ಲಿ ಶ್ರೀ ಸುಬ್ರಮಣ್ಯ ಸ್ವಾಮಿ, ಶಬರಿಮಲೆ ಐಯ್ಯಪ್ಪಸ್ವಾಮಿ, ವರಸಿದ್ದಿ ವಿನಾಯಕ ದೇವಸ್ಥಾನವಿದ್ದರೆ, ಎಡಭಾಗದಲ್ಲಿ ತುಸುದೂರದಲ್ಲಿ ಶ್ರೀ ಕಾಳಿಕಾಂಬ ಕಮಠೇಶ್ವರಿ ದೇವಾಲಯವಿದೆ. ಇಲ್ಲಿರುವ ಗಣಪತಿ ಎಡತೊರೆಯ ಹೊಳೆಪಕ್ಕದ ಗಣಪತಿ ಎನ್ನಲಾಗಿದ್ದು ೧೯೩೪ರಲ್ಲಿ ಪುನರ್ ಪ್ರತಿಷ್ಠಾಪಿಸಲಾಗಿದೆ.

ಬಜಾರ್ ರಸ್ತೆಯಲ್ಲಿ ವಿಶಾಲವಾದ ಕಟ್ಟಡದಲ್ಲಿ ಕಂಗೊಳಿಸುವುದು, ವೈಶ್ಯರ ಕುಲದೇವತೆ ಶ್ರೀ ಕನ್ನಿಕಾ ಪರಮೇಶ್ವರಿ ದೇವಿ ಮತ್ತು ಕಲ್ಯಾಣಮಂಟಪ ಕೃಷ್ಣಶಿಲೆಯ ವಿಗ್ರಹಗಳಲ್ಲಿ ದೇವಿ ಶ್ರೀರಾಮಲಕ್ಷ್ಮಣಸೀತೆ, ಆಂಜನೇಯ, ನಗರೇಶ್ವರ ಸುಬ್ರಮಣ್ಯ ಗಣಪತಿ ಚಂಡೀಕೇಶ್ವರ ವಿಗ್ರಹಗಳಿಗೆ ನಿತ್ಯ ಆರಾಧನೆ ನಡೆಯುತ್ತದೆ. ಏಳನೆಯ ರಸ್ತೆಯಲ್ಲಿ ಶ್ರೀ ಪಾಂಡುರಂಗ ವಿಠಲಮಂದಿರವಿದ್ದೂ ವಿಠಲ ರುಕ್ಮಿಣಿಯ ವಿಗ್ರಹ ಮೋಹಕವಾಗಿದೆ.

ನಗರದ ದಕ್ಷಿಣ ಭಾಗದಲ್ಲಿರುವ ಬಸವೇಶ್ವರ ಬಡಾವಣೆ ಹೆಸರಿಗೆ ತಕ್ಕಂತೆ ಶ್ರೀ ಬಸವೇಶ್ವರ ದೇವಾಲಯವಿದ್ದು ವೀರಶೈವರ ಆರಾಧ್ಯದೈವವಾಗಿದೆ. ಇದು ೧೯೪೮ರಲ್ಲಿ ಪ್ರತಿಷ್ಠಾಪಿಸಲಾಗಿದೆ. ಕಡೇ ಕಾರ್ತಿಕೆಯಂದು ವಿಶೇಷ ಪೂಜೆಯ ಜೊತೆಗೆ ವಿಜೃಂಭಣೆಯಿಂದ ಮೆರವಣಿಗೆ ನಡೆಯುತ್ತದೆ. ಇಲ್ಲೆ ಮಲೆಮಹಾದೇಶ್ವರ ದೇವಸ್ಥಾನ, ನವಗ್ರಹದೇವಸ್ಥಾನ, ಶ್ರೀ ಅಕ್ಕಮಹಾದೇವಿ ದೇವಾಲಯ ಇರುತ್ತದೆ.

ಮೈಸೂರಿನಿಂದ ನಗರಕ್ಕೆ ಆಗಮಿಸುತ್ತಿದ್ದಂತೆಯೇ ನಮಗೆ ಸ್ವಾಗತ ಕೋರುವುದು ಹೊಸ ಚೌಕಹಳ್ಳಿಯ ಬಸವೇಶ್ವರ ದೇವಾಲಯ ಮತ್ತು ಸ್ವಲ್ಪಮುಂದೆ ಸಾಗಿದರೇ ಶ್ರೀ ಆದಿಶಕ್ತಿ ತೋಪಮ್ಮನವರ ದೇವಸ್ಥಾನಗಳು ಕಂಡುಬರುತ್ತವೆ. ನಗರದ ಬಸ್ ಡಿಪೋ ಮುಂದೆ ಒಂದು ದೇವಾಲಯವಿದ್ದು ಈಶ್ವರ, ಬಸವೇಶ್ವರ, ಗಣಪತಿ ವಿಗ್ರಹವುಳ್ಳ ದೇವಮಂದಿರವಿದೆ.

ಒಟ್ಟಿನಲ್ಲಿ ನಗರದಲ್ಲಿ ಕಂಡುಬರುವ ಪ್ರತಿಯೊಮದು ದೇವಾಲಯವು ಅಲ್ಲಿನ ಸ್ಥಳೀಯ ಜನತೆಗೆ ನಿತ್ಯ ಪರಮಾತ್ಮನ ನಿವಾಸಸ್ಥಾನವಾಗಿದೆ. ಎಡತೊರೆಯ ಕಾವೇರಿ ನದಿಯ ದಂಡೆಯಲ್ಲಿ ಪ್ರಾಚೀನ ಮಸೀದಿ ಇದ್ದರೆ, ಇತ್ತ ನಗರದ ಮುಸ್ಲಿಂ ಬಡಾವಣೆಯಲ್ಲಿಯೂ ಮಸೀದಿ ಇದೆ. ಈದ್ ಮತ್ತು ರಂಜಾನ್‌ಗಳಂದು ವಿಶೇಷ

ಪ್ರಾರ್ಥನೆಯೊಂದಿಗೆ, ಕಾಲೇಜಿನ ಹಿಂಭಾಗದಲ್ಲಿರುವ ಮೈದಾನದಲ್ಲಿ ಸಮಾವೇಶ ಗೊಳ್ಳುತ್ತಾರೆ. ಅದೇ ರೀತಿ ನಗರದ ಪಶ್ಚಿಮ ಭಾಗದಲ್ಲಿ ಇತ್ತೀಚೆಗೆ ಕ್ರೈಸ್ತರು ಚರ್ಚ್‌ವೊಂದನ್ನು ನಿರ್ಮಿಸಿ, ಪ್ರತಿ ಮಂಗಳವಾರದಂದು ವಿಶೇಷ ಪ್ರಾರ್ಥನೆ ಸಲ್ಲಿಸುತ್ತಾರೆ.

ತನ್ನ ಹಿಂದಿನಿಂದ ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ಧರ್ಮ, ನಂಬಿಕೆ, ಸಂಪ್ರದಾಯಗಳಿಗೆ ಅನುಗುಣವಾಗಿ ಇವತ್ತಿಗೂ ಕೂಡಾ ನಗರದ ಜನರು ಒಂದಲ್ಲ ಒಂದು ರೀತಿಯಲ್ಲಿ ದೇವಾಲಯದ ನಿರಂತರ ಸಂಪರ್ಕ ಏರ್ಪಡಿಸಿಕೊಂಡಿದ್ದಾರೆ. ಗಣೇಶನ ಹಬ್ಬ, ದೀಪಾವಳಿ, ಯುಗಾದಿಯಂದು ಜನತೆ ಹೊಸ ಉಡುಪು ಮತ್ತು ಹುರುಪಿನೊಂದಿಗೆ ನಗರದ ಎಲ್ಲಾ ದೇವಾಲಯಗಳಲ್ಲಿ ಜನ ಗಿಜಿಗಿಡುತ್ತಾರೆ.

ಭವ್ಯ ಪರಂಪರೆಯುಳ್ಳ ದೇವಾಲಯಗಳನ್ನು ರಕ್ಷಿಸಿ , ಪೋಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಕೃಷ್ಣರಾಜನಗರ ತಾಲೂಕಿನ ಮಠಗಳು:

ಮಠದ ಕಲ್ಪನೆ ಬಹಳ ಹಿಂದಿನಿಂದಲೂ ಇದೆ. ಇದು ಸನ್ಯಾಸಿಗಳ ವಾಸಸ್ಥಾನ. ಆಧ್ಯಾತ್ಮದ ಸಾಧನೆಗಾಗಿ ವಿರಾಗಿಗಳಾಗಿ ಬಂದ ಸಾಧಕರ ನೆಲೆ. ಲೌಕಿಕ ಅಥವಾ ಸಾಂಸಾರಿಕ ಜಂಜಾಟಗಳಿಂದ ದೂರಾಗಿ ಪ್ರಶಾಂತವಾದ ವಾತಾವರಣದಲ್ಲಿ ತಮ್ಮ ಸಾಧನೆಯ ಹಾದಿಯನ್ನು ಕಂಡುಕೊಳ್ಳುವುದೂ ಉದ್ದೇಶ. ಇಷ್ಟಾದರೂ ಮಠದಲ್ಲಿನ ಯತಿ ಸಾಮಾಜಿಕ ಸಂಬಂಧವನ್ನು ಕಂಡುಕೊಳ್ಳುವುದಿಲ್ಲ. ತಾನು ಕಂಡುಂಡ ಆಧ್ಯಾತ್ಮಿಕ ಅನುಭವವನ್ನು ಜನಸಾಮಾನ್ಯರಿಗೆ ಬೋಧಿಸುತ್ತಾ ಅವರನ್ನೂ ಉದ್ಧರಿಸುವ ಗುರುತರವಾದ ಕೆಲಸ ಇಲ್ಲಿಂದಲೇ ನಡೆಯಬೇಕು. ಮಠದ ಮುಖ್ಯಸ್ಥರಾದ ಗುರುವಿಗೆ ಧರ್ಮೀಯರಲ್ಲಿ ಅತ್ಯಂತ ಪೂಜನೀಯ ಸ್ಥಾನವಿದೆ.

ಹಿಂದೂಧರ್ಮದ ಅದ್ವೈತ ತತ್ವದ ಪ್ರತಿಪಾದಕರಾದ ಶ್ರೀ ಶಂಕರಾಚಾರ್ಯರು ತಮ್ಮ ಸಿದ್ಧಾಂತಗಳನ್ನು ಜನರಿಗೆ ತಿಳಿಸಲು ಹಾಗೂ ಧರ್ಮದ ಹೆಸರಿನಲ್ಲಿ ಇದ್ದ ದುಷ್ಟ ಆಚರಣೆಗಳನ್ನು ಹೋಗಲಾಡಿಸಲು ದ್ವಾರಕ, ಪೂರಿ, ಬದರಿ, ಶೃಂಗೇರಿ, ಹರಿದ್ವಾರ ಮುಂತಾದ ಸ್ಥಳಗಳಲ್ಲಿ ಮಠಗಳನ್ನು ಮೊದಲಿಗೆ ಸ್ಥಾಪಿಸಿದರೆಂದು ತಿಳಿಯುತ್ತದೆ. ಹೀಗೆ ಸ್ಥಾಪಿಸಿದ ಮಠಗಳ ಮುಖ್ಯಸ್ಥನಾಗಿ ಸ್ವಾಮಿ ಅಥವಾ ಮಹಂತನಿರುತ್ತಿದ್ದನು. ಧಾರ್ಮಿಕ ಗ್ರಂಥಗಳ ಅಧ್ಯಯನ, ಧರ್ಮಪ್ರಚಾರ ಹಾಗೂ ಬರುವ ಅತಿಥಿಗಳಿಗೆ ಸತ್ಕಾರವೂ

ಮಠಗಳ ನಡವಳಿಕೆಯಲ್ಲಿ ಸೇರಿವೆ. ಹಳ್ಳಿಗಳಲ್ಲಿಯೂ ಲೌಖಿಕ ವಿದ್ಯಾಭ್ಯಾಸ ಮಾಡಿಸುತ್ತಿದ್ದ ಕೇಂದ್ರಗಳನ್ನು ಮಠಗಳೆಂದು ಕರೆಯುತ್ತಿದ್ದರು. ಎಳೆಹರೆಯದ ಮಕ್ಕಳನ್ನು ಊರಿನ ಓಚಯ್ಯಗಳ ಈ ಕೂಲಿಮಠಗಳಿಗೆ ಕಳಿಸಿ ವಿದ್ಯಾಭ್ಯಾಸ ಮಾಡಿಸುತ್ತಿದ್ದರು.

ಕರ್ನಾಟಕದ ಇತಿಹಾಸದಲ್ಲಿ ವೀರಶೈವ ಮಠಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಅವು ಜಡ್ಡುಗಟ್ಟಿದ ಧರ್ಮದ ಕೇಂದ್ರಗಳಾಗಿರಲಿಲ್ಲ. ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳ ಜೊತೆಗೆ ಸಾಮಾಜಿಕ ಕ್ರಾಂತಿಗೆ ಕಾರಣವಾದ ಕಾಯಕದ ಮಹತ್ವವನ್ನು ಜನರಿಗೆ ತಿಳಿಸುತ್ತಾ ಅಲ್ಲಾಮಾದಿಗಳಿಂದ ರೂಪುಗೊಂಡಿದ್ದ ಅನುಭವ ಮಂಟಪದ ಮರಿ ಅನುಭವ ಮಂಟಪಗಳೆ ಆಗಿವೆ. ಇಲ್ಲಿಯೂ ಶಿವಾನುಭವಗೋಷ್ಠಿ, ವಿಚಾರ ವಿಮರ್ಶೆಗಳೆಲ್ಲಾ ನಡೆಯುತ್ತದೆ. ಮೈಸೂರು ಪ್ರಾಂತದಲ್ಲಿ ಸುತ್ತೂರು ಮಠ, ತುಮಕೂರಿನ ಶ್ರೀ ಸಿದ್ದಗಂಗಾಮಠ, ಚಿತ್ರದುರ್ಗದ ಶ್ರೀ ಬೃಹನ್ಮಠ, ಸಿರಿಗೆರೆಯಲ್ಲಿ ಶ್ರೀ ತರಳಬಾಳು ಮಠ ಹೀಗೆ ಅನೇಕ ಮಠ ಜ್ಞಾನದಾಸೋಹದ ಕೈಂಕರ್ಯವನ್ನು ನಡೆಸಿಕೊಮಡು ಬರುತ್ತಿವೆ.

ಕೃಷ್ಣರಾಜನಗರ ತಾಲ್ಲುಕಿನಲ್ಲಿರುವ ವೀರಶೈವ ಮಠಗಳು ಸುಮಾರು ಹತ್ತಕ್ಕಿಂತಲೂ ಹೆಚ್ಚಿದ್ದರೂ ಅವುಗಳಲ್ಲಿ ಕೆಲವು ಇದ್ದೂ ಇಲ್ಲದಂತಿವೆ. ಈ ತಾಲ್ಲೂಕಿನ ಮಠಗಳ ಸಮೀಕ್ಷೆ ನಡೆಸಲು ಹೋದಾಗ ಕಂಡುಬಂದ ಮಠಗಳೆಂದರೆ (೧) ಅರಕೆರೆಮಠ (೨) ಎಲೆಮುದ್ದನ ಹಳ್ಳಿಯಮಠ (೩) ಕರ್ಪೂರವಳ್ಳಿಯ ಮಠ (೪) ನರಚನಹಳ್ಳಿಯ ಮಠ (೫) ಮಾರಗೌಡನಹಳ್ಳಿಯಮಠ, (೬) ಅಂಕನಹಳ್ಳಿಯ ಮಠ (೭) ಸರಗೂರು ಮಠ (೮) ಹಾಡ್ಯದ ಮಠ (೯) ಲಾಲನಹಳ್ಳಿಯಮಠ (೧೦) ಹೊಸೂರು ಕಲ್ಲಹಳ್ಳಿಯ ಮಠ (೧೧) ಕಲ್ಯಾಣಪುರದ ಮಠ ಅವುಗಳಿಗಿರುವ ಹೆಸರಿನಿಂದಲೇ ಇವನ್ನು ಕರೆಯುವುದು ವಾಡಿಕೆಯಾಗಿದೆ.

ಅರಕೆರೆಮಠ:

ಅರಕೆರೆ ವಿರಕ್ತಮಠವೆಂದು ಹೆಸರಿರುವ ಈ ಮಠ ಮೈಸೂರು ಕೆ.ಆರ್.ನಗರ ಇನ್ನೂ ಮೂರು ಕಿ.ಮೀ. ಅಂತರದಲ್ಲಿರುವಾಗಲೇ ರಸ್ತೆಯ ಎಡಬದಿಯಲ್ಲಿ ಕಾಣಸಿಗುತ್ತದೆ. ನಾಡಹೆಂಚಿನ ಹಳೆಯ ಕಟ್ಟಡದಲ್ಲಿರುವ ಮಠಕ್ಕೆ ಸುಂದರವಾದ ದ್ವಾರ ನಿರ್ಮಾಣ ಕಾರ್ಯ ಸಾಗಿದೆ. ೧೯೬೩ರಲ್ಲಿ ಪ.ಬ್ರ.ಶ್ರೀ.ನಂಜುಂಡಸ್ವಾಮಿಗಳು ಜವಾಬ್ದಾರಿ ವಹಿಸಿಕೊಂಡಿದ್ದು, ೬೦ ವರ್ಷ ಅನುಭವಸ್ಥರಾಗಿರುತ್ತಾರೆ. ಮಠ ೪೦೦

ವರ್ಷ ಹಳೆಯದಾಗಿದ್ದು ಎಡತೊರೆಯ ಅರ್ಕೇಶ್ವರ ದೇವಸ್ಥಾನದ ಸನಿಹದಲ್ಲಿದ್ದ ಈ ಮಠ ಬಳ್ಳೂರು ಅಡ್ಡಗಟ್ಟೆಯಿಂದಾದ ನೀರಾವರಿಯ ಕಾರಣ ಸ್ಥಳಾಂತರಗೊಂಡು ಈ ಜಾಗಕ್ಕೆ ಬಂದಿತೆಂದು ಹೇಳುವಾಗ ಲಿಂಗೈಕ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಕೃಪೆಯನ್ನು ಸ್ಮರಿಸುತ್ತಾರೆ. ಗದ್ದಿಗೆ ಮತ್ತು ಶ್ರೀ ಮಹಾದೇಶ್ವರ ದೇವಾಲಯಕ್ಕೆ ನಿತ್ಯಪೂಜೆ ಹಾಗೂ ಅಮವಾಸ್ಯೆ ಪೂಜೆಯ ಕೈಂಕರ್ಯವನ್ನು ನಡೆಸಲಾಗುತ್ತಿದೆಯೆಂದು ತಿಳಿದಿದೆ.

ಸರಗೂರು ಮಠ:

ಕರ್ಕಾಳು, ಪಶುಪತಿ, ಗಾಯನಹಳ್ಳಿ, ಕೆಡಗ, ಕೋಳೂರುಗಳ ಜನರ ಬಾಯಲ್ಲಿ ಇರುವ ಮಠ ಸರಗೂರು ಮಠ. ಇದಕ್ಕೆ ಸುಮಾರು ೨೫ ವರ್ಷ ಮಾತ್ರ ಇತಿಹಾಸವಿದೆ. ಊರ ಮುಖಂಡರ ಶ್ರಮದ ಫಲವಾಗಿ ರೂಪುಗೊಂಡ ಮಠಕ್ಕೆ ಶ್ರೀ ಬಸಪ್ಪನವರ ಹೆಸರು ವಿಶೇಷವಾಗಿ ಕೇಳಿಬರುತ್ತದೆ. ಉತ್ತರ ಕರ್ನಾಟಕದ ನರಗುಂದ ಬಳಿಯ ಕಾಡಾಳುಗ್ರಾಮದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಇದರ ಸ್ಥಾಪಕರು. ಶರಣೆ ನಂಜಮ್ಮ ಮತ್ತು ಕಾಳಪ್ಪ ಸ್ವಾಮಿಗಳ ಸೇವೆ ಕೂಡಿ ಬಹುಮುಖ್ಯ. ಪ್ರತಿವರ್ಷ ಆರಾಧನೆ ಮತ್ತು ಶಿವಗೋಷ್ಠಿ ನಡೆಯುತ್ತದೆ.

ಕರ್ಪೂರವಳ್ಳಿಮಠ:

ಸಾಲಿಗ್ರಾಮಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿರುವ ಮಠ ಕರ್ಪೂರವಳ್ಳಿಯ ಮಠ. ೧೯೭೩ರಲ್ಲಿ ಅಧಿಕಾರವಹಿಸಿಕೊಂಡು ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಇದುವರೆಗಿನ ಅವಧಿಯಲ್ಲಿ ಸಾಕಷ್ಟು ಪ್ರಗತಿಯನ್ನು ಕಂಡಿದೆ. ಸುಮಾರು ೨೦ ಎಕರೆ ಜಮೀನಿನಲ್ಲಿ ಕಬ್ಬು, ತೆಂಗು, ಹೊಗೆಸೊಪ್ಪು, ಬೇಸಾಯ ಮಾಡುವ ಇವರು ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಯನ್ನು ನಡೆಸುತ್ತಿದ್ದಾರೆ. ನೆರೆಯ ತಂದ್ರೆಯಲ್ಲಿ ನರ್ಸರಿಯನ್ನು ಸ್ಥಾಪಿಸಿದ್ದಾರೆ. ಮಠದ ಪಕ್ಕದಲ್ಲಿ ಶ್ರೀ ರೇಣುಕರ ಗುಡಿಯಿದ್ದು, ಟ್ರಸ್ಟ್‌ವೊಂದನ್ನು ಸ್ಥಾಪಿಸಿ ಬಡಮಕ್ಕಳಿಗೆ ವಿದ್ಯಾರ್ಥಿನಿಲಯ ಸ್ಥಾಪಿಸಬೇಕೆಂಬ ಆಲೋಚನೆಯಿದೆ. ೧೯೯೪ರಲ್ಲಿ ಶಿವಾನುಭವ ಧಾರ್ಮಿಕ ಸಮ್ಮೇಳನ ವಿಜೃಂಭಣೆಯಿಂದ ನಡೆಯಿತು.

ಮಾರಗೌಡನಹಳ್ಳಿಯಮಠ:

ಚುಂಚನಕಟ್ಟೆ ಹೋಬಳಿಯ ಮಾರಗೌಡನ ಹಳ್ಳಿ ಮಠವು ಸುಮಾರು ೫೦ ವರ್ಷಗಳಷ್ಟು ಹಳೆಯದು. ಹುಣಸೂರಿನ ಉಕ್ಕಿನಕಂತೆ ಮಠದ ಆಗಿನ ಶ್ರೀ

ಸೋಮಶೇಖರ ಮಹಾಸ್ವಾಮಿಗಳ ಪಟ್ಟದ ಶ್ರೀ ಪಟ್ಟಸ್ವಾಮಿ ಮಹಾಸ್ವಾಮಿಗಳವರಿಗೆ ಅಧಿಕಾರವಹಿಸಿಕೊಟ್ಟರೆಂದು ತಿಳಿಯುತ್ತದೆ. ಊರವರ ಸ್ವರಿತ ಪ್ರಯತ್ನದಲ್ಲಿ ದಿ॥ ಶ್ರೀ ಬಸಪ್ಪನವರ ಹೆಸರು ಕೇಳಿಬರುತ್ತದೆ. ಸುಗ್ಗಿಯ ಭಿಕ್ಷಾಕಾಯಕದಿಂದ ದಾಸೋಹ ನಡೆದು, ಅನೇಕ ಸಾಮಾಜಿಕ, ಧಾರ್ಮಿಕ ಕಾರ್ಯಗಳು ನಡೆಯಬೇಕಾಗಿದೆ.

ಎಲೆಮುದ್ದನಹಳ್ಳಿಮಠ:

ಸಾಲಿಗ್ರಾಮ - ಬೇರ್‍ಯರಸ್ತೆಯಲ್ಲಿನ ಎಲೆಮುದ್ದನಹಳ್ಳಿ ಊರಿನಲ್ಲಿರುವ ಮಠ. ಕೊಡಗುಜಿಲ್ಲೆಯ ತೊರೆನೂರಿನ ಶ್ರೀ ಮರುಳ ಸಿದ್ದೇಶ್ವರ ಮಠದ ಶಾಖೆಯೆಂದು ಹೇಳುವ ಈ ಮಠದ ಹಿಂದಣಸ್ವಾಮಿಗಳು ಲಿಂಗೈಕ್ಯರಾದಾಗ ಕುರುಬರ ಹಳ್ಳಿಯ ಶ್ರೀ ಪುಟ್ಟಸ್ವಾಮಪ್ಪನವರು ಕೆಲಕಾಲ ಕಾರ್ಯಭಾರ ವಹಿಸಿಕೊಂಡಿದ್ದರು. ಸುತ್ತಮುತ್ತ ಪ್ರಶಾಂತ ವಾತವರಣ ಹೊಂದಿದ್ದು ಅನೇಕ ಶಿಕ್ಷಣ ಕಾರ್ಯನಿರ್ವಹಿಸಬೇಕೆಂಬುದು ಮಠದ ಆಶಯವಾಗಿದೆ.

ನರಚನಹಳ್ಳಿಮಠ:

ಮಿರ್ಲೆಗೆ ಹತ್ತಿರವಿರುವ ನರಚನಹಳ್ಳಿ ಮಠವು ಸೋಮಹಳ್ಳಿ ಮಠದ ಶಾಖೆಯೆಂದು ಹೇಳುತ್ತಾರೆ. ಶ್ರೀ ಚನ್ನಬಸವಮಹಾಸ್ವಾಮಿಗಳವರು ಸುಮಾರು ೭೦ ವರ್ಷಗಳೆಂದು ಹೇಳುವ ಲಿಂಗೈಕ್ಯ ಶ್ರೀ ವೀರಭದ್ರಸ್ವಾಮಿಗಳ ಗದ್ದುಗೆ ಇದೆ. ಸೋಮನಾಥಪುರ ಹಾಗೂ ಲಾಲನಹಳ್ಳಿಯಲ್ಲಿ ಭಕ್ತರನ್ನು ವಿಶೇಷವಾಗಿ ಹೊಂದಿರುವ ಮಠವು ಆಗಾಗ್ಗೆ ಶಿವಾನುಭವ ದಾಸೋಹ, ಆರಾಧನೆ ನಡೆಯುತ್ತದೆ.

ಹಾಡ್ಯದ ಮಠ:

ಚುಂಚನಕಟ್ಟೆ ಹೋಬಳಿ ಹಾಡ್ಯಗ್ರಾಮದಲ್ಲಿಯೂ ಮಠ ಇದೆ. ಕಾವೇರಿ ನದಿಯ ಬಳಿಯಲ್ಲೇ ಇರುವ ಈ ಮಠ ದೇವನೂರಿನ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠಕ್ಕೆ ಸೇರಿದೆ. ಸುಮಾರು ೫೦-೬೦ ವರ್ಷಗಳಷ್ಟು ಹಳೆಯದಾದ ಈ ಮಠ ಊರವರ ಪ್ರಯತ್ನದಿಂದ ದೇವನೂರು ಮಠದ ಆಗಿನ ಗುರುಗಳ ಕೃಪೆಯಿಂದ ಸ್ಥಾಪನೆಗೊಂಡು ಪ್ರತಿ ಸೋಮವಾರ ಮತ್ತು ಶುಕ್ರವಾರಗಳಲ್ಲಿ ಕೋರಣ್ಯ ಭಿಕ್ಷದ ಕಾಯಕದ ಜೊತೆಗೆ ಶಾಲಾವಿದ್ಯಾರ್ಥಿಗಳಿಗೆ ಹಾಗೂ ಅತಿಥಿಗಳಿಗೆ ದಾಸೋಹ ನಡೆಸುತ್ತಾ ಬಂದಿದೆ.

ಅಂಕನಹಳ್ಳಿಮಠ:

ಹಾಡ್ಯಕ್ಕೆ ಸುಮಾರು ೪ ಕಿ.ಮೀ. ಅಂತರದಲ್ಲಿರುವ ಅಂಕನಹಳ್ಳಿ ಮಠದ ಹೆಸರು ಶ್ರೀ ಬಸವಕಲ್ಯಾಣ ವಿರಕ್ತಮಠ. ೯೫ರಲ್ಲಿ ಪ್ರಾರಂಭವಾದ ಶ್ರೀ ಗುರುಪಾದ ಶಿವಾಚಾರ್ಯ ಮಹಾಸ್ವಾಮಿಗಳಿಂದ, ಜಮೀನಿನಿಂದ ಉತ್ಪತ್ತಿ ಹಾಗೂ ಸುಗ್ಗಿಯಿಂದ ಬರುವ ಭಿಕ್ಷೆಯಲ್ಲಿ ಊರಿನ ಶಾಲೆಗೆ ಬಡಮಕ್ಕಳಿಗೆ ಊಟದ ವ್ಯವಸ್ಥೆ ಮಾಡಲಾಗುತ್ತದೆ.

ಇತರೆ ಮಠಗಳು:

ಕೆ.ಆರ್.ನಗರದ ಸಮೀಪದಲ್ಲಿಯೇ ಕಾಲನಹಳ್ಳಿಯ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠವಿದ್ದು, ಐದಾರು ವರ್ಷಗಳಿಂದ ಭಿಕ್ಷದ ಮಠವಾಗಿ, ಇದರ ಜವಾಬ್ದಾರಿಯನ್ನು ಶ್ರೀ ಪಂಚಾಕ್ಷರ ಸ್ವಾಮಿಗಳು ಮಠದ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ. ಹೊಸೂರು ಕಲ್ಲಹಳ್ಳಿ ಮತ್ತು ಕಲ್ಯಾಣಪುರದಲ್ಲಿ ಮಠಗಳು ಇದ್ದ ಗುರುತು ಇದ್ದರೂ ಅಗೋಚರವಾಗಿದೆ.

ಶ್ರೀ ಯಡತೊರೆ ಯೋಗಾನಂದೇಶ್ವರ ಸರಸ್ವತಿ ಮಠ:

ನಗರದ ಚಂದ್ರಮೌಳೇಶ್ವರ ರಸ್ತೆಯಲ್ಲಿರುವುದು ಹಳೆ ಎಡತೊರೆಯಿಂದ ಹೊಸನಗರಕ್ಕೆ ಅಡಿಯಿಟ್ಟಂತಹ ಶ್ರೀ ಯೊಗಾನಂದೇಶ್ವರ ಮಠ, ಅದ್ವೈತ ಸಿದ್ಧಾಂತದ ಮಹಾಮಹಿಮರಾದ ಶ್ರೀ ಗಣಪತಿ ಭಾರತಿ ಸ್ವಾಮೀಜಿಯವರು ಆಧ್ಯಾತ್ಮ ಪ್ರಚಾರಕ್ಕಾಗಿ ಹಗಲಿರುಳು ದುಡಿಯುತ್ತಿದ್ದಾರೆ. ಭಗವತ್ಪಾದರ ಅಮೃತಶಿಲೆಯ ವಿಗ್ರಹ, ತಾಯಿ ಮಹಾಮಾತೆ ವೀಣಾವಾಣಿ ಶಾರದೆ, ಪಕ್ಕದಲ್ಲಿ ಆದಿತ್ಯಾದಿ ನವಗ್ರಹಗಳು, ಸತ್ಯನಾರಾಯಣಸ್ವಾಮಿ ವಿಗ್ರಹಗಳು ಭಕ್ತರನ್ನು ಆಕರ್ಷಿಸುತ್ತದೆ. ಮಠದ ಮುಂಭಾಗದಲ್ಲಿ ವೇದಾಧ್ಯಾಯನ ಸಂಸ್ಥೆಯಿದು ಪ್ರತಿವರ್ಷ ಮಕ್ಕಳಿಗೆ ವೇದ ಶ್ಲೋಕಗಳನ್ನು ಬೋಧಿಸುತ್ತಾರೆ. ಶ್ರೀ ಶಂಕರಭಾರತಿ ಮಹಾಸ್ವಾಮಿಗಳು ಈಗ ಉತ್ತರಾಧಿಕಾರಿಯಾಗಿದ್ದಾರೆ.

ಶ್ರೀ ಕಾಗಿನೆಲೆ ಶಾಖಾಮಠ:

ಜಾತಿ, ಕುಲದ ಬಗ್ಗೆ ಸಂದೇಶ ಸಾರಿದ ೧೫ನೆಯ ಶತಮಾನದ ಕನಕದಾಸರ ಕಾಗಿನೆಲೆಗೆ ಸೇರಿದ ಈ ಮಠವು ನಗರದಲ್ಲಿದೆ. ಹಾವೇರಿ ಜಿಲ್ಲೆಯ ಕಾಗಿನೆಲೆಯಲ್ಲಿ ಮೂಲಮಠವಿದ್ದು, ಕರ್ನಾಟಕದ ನಾಲ್ಕು ದಿಕ್ಕಿನಲ್ಲೂ ಉಪಶಾಖಾಮಠಗಳನ್ನು ಹೊಂದಿದ್ದು, ಅವುಗಳಲ್ಲಿ ದಕ್ಷಿಣ ಕರ್ನಾಟಕಕ್ಕೆ ಸಂಬಂಧಿಸಿದಂತೆ ಕೃಷ್ಣರಾಜನಗರದಲ್ಲಿ

ಈ ಮಠವನ್ನು ಸ್ಥಾಪಿಸಲಾಗಿದೆ. ಮೊದಲ ಗುರುಗಳಾಗಿ ಶ್ರೀ ಶ್ರೀಶಿವಾನಂದ ಪುರಿಗಳು ನೇಮಕಗೊಂಡು ಮಠದ ವತಿಯಿಂದ ತ್ರಿವಿಧ ದಾಸೋಹಗಳನ್ನು ನಡೆಸುತ್ತ ಬಂದಿರುತ್ತಾರೆ.

ಭವ್ಯಪರಂಪರೆಯುಳ್ಳ ದೇವಾಲಯಗಳನ್ನು ರಕ್ಷಿಸುವುದು, ಪೋಷಿಸುವುದು ಭಾರತೀಯರ ಆದ್ಯಕರ್ತವ್ಯ. ದೇವಾಲಯ ಮತ್ತು ಮಠಗಳ ಉದ್ದೇಶ ಧಾರ್ಮಿಕ ಅವಶ್ಯಕತೆಗಳನ್ನು ನಡೆಸಲು ಮತ್ತು ಪೂರೈಸಲು ಸಾಮಾಜಿಕ ಕೈಂಕರ್ಯವನ್ನು ಕೈಗೊಳ್ಳುವ ಉದ್ದೇಶದಿಂದ ಸ್ಥಾಪಿತವಾಗುತ್ತದೆ. ಆದರೆ ನಾಗರಿಕತೆ ಬೆಳೆಯಿತ್ತೆಂದು ಹೇಳುವ ನಾವು ವ್ಯಕ್ತಿಪ್ರತಿಷ್ಠೆ ಮತ್ತು ರಾಜಕೀಯ ದುರುದ್ದೇಶಕ್ಕಾಗಿ ಮಠಗಳನ್ನು ದುರುಪಯೋಗಪಡಿಸುವುದು ಸೂಕ್ತವಲ್ಲ.

ಜಪದಕಟ್ಟೆ:

ಇದು ಮೈಸೂರು ಜಿಲ್ಲೆಯ ಕೃಷ್ಣರಾಜನಗರದ ಹೆಬ್ಬೂಸೂರು ಗ್ರಾಮದ ಒಂದು ಸುಂದರ ತಾಣ. ಇಲ್ಲಿ ಕಾವೇರಿ ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ಈ ಸ್ಥಳವನ್ನು ಸ್ಕಾಂದ ಪುರಾಣದಲ್ಲಿ ಜಪ್ಯೇಶ್ವರ ಕ್ಷೇತ್ರವೆಂದು ಕರೆಯಲಾಗಿದೆ. ಕಾವೇರಿಯ ದಕ್ಷಿಣಾವರ್ತದಲ್ಲಿ ಸ್ನಾನಮಾಡಿ ಜಪ್ಯೇಶ್ವರನನ್ನು ಪೂಜಿಸಿ, ಪಂಚಾಕ್ಷರಿ ಮಂತ್ರವನ್ನು ಜಪಿಸಿದವನು ಸಕಲದೋಷಗಳನ್ನು ಕಳಕೊಂಡನೆಂದು ಹೇಳಲಾಗಿದೆ. ಇಲ್ಲಿ ಜಾಬಾಲಿ ಮಹರ್ಷಿಗಳು ವಾಸವಾಗಿದ್ದು ತಪಸ್ಸು ಮಾಡುತ್ತಿದ್ದರೆಂದು ಅಲ್ಲಿಗೆ ಬಂದ ಶ್ರೀರಾಮನಿಗೂ ತತ್ವೋಪದೇಶ ನೀಡಿದರೆಂದು, ಶಿವೋಪನಿಷತ್ತಿನಲ್ಲಿಯೂ ಉಲ್ಲೇಖವಿದೆ. ಇಲ್ಲಿ ಶತಮಾನಗಳಷ್ಟು ಹಳೆಯದಾದ ಗಂಗಾಧರ ದೇವಸ್ಥಾನವಿದ್ದು, ಹೆಬ್ಬೂರು – ಶೀಗವಾಳು ಗ್ರಾಮಸ್ಥರು ಅದರ ಪೂಜಾವ್ಯವಸ್ಥೆಯನ್ನು ಶ್ರೀ ಯೋಗಾನಂದೇಶ್ವರ ಮಠಕ್ಕೆ ವಹಿಸಿದೆ. ಗುರುಭವನ, ವಿದ್ಯಾರ್ಥಿಗಳ ವಾಸಗೃಹ, ಗೋಶಾಲೆ, ಭೋಜನಶಾಲೆಗಳನ್ನು ನಿರ್ಮಿಸಿ ೨೧–೦೬–೨೦೧೦ರಂದು ಶೃಂಗೇರಿ ಶ್ರೀ ಭಾರತೀತೀರ್ಥ ಮಹಾಸ್ವಾಮಿ-ಗಳಿಂದ ಜಪ್ಯೇಶ್ವರದೇವರ ಕುಂಬಾಭಿಷೇಕ ನಡೆಸಲಾಯಿತು.

ಚುಂಚನಕಟ್ಟೆ ಶ್ರೀರಾಮದೇವಸ್ಥಾನ:

ಇಲ್ಲಿ ಶ್ರೀರಾಮದೇವಸ್ಥಾನವಿದ್ದು, ಜನವರಿ ತಿಂಗಳಲ್ಲಿ ದನಗಳ ಜಾತ್ರೆ ನಡೆದು, ರಥೋತ್ಸವ ನಡೆದು ಇಡೀ ಕರ್ನಾಟಕದಲ್ಲಿ ಹೆಸರುವಾಸಿ ಪಡೆದಿದೆ. ದನಗಳ ಪರಿಷೆ ಗಮನಸೆಳೆಯುವಂತಹದ್ದು. ಚುಂಚನಕಟ್ಟೆ ಹೋಬಳಿಗೆ ಸೇರಿದ ಹನಸೋಗೆಯಲ್ಲಿ ಜೈನಕ್ಷೇತ್ರವಿದ್ದು ಆದೀಶ್ವರ ದೇವಾಲಯವಿದೆ.

ಕಪ್ಪಡಿಕ್ಷೇತ್ರ:

ಕಪ್ಪಡಿಕ್ಷೇತ್ರದಲ್ಲಿ ರಾಚಪ್ಪಾಜಿ ಮತ್ತು ಸಿದ್ದಪ್ಪಾಜಿಯವರ ಗದ್ದುಗೆ ಇವೆ. ಭಕ್ತರ ಕೇಂದ್ರಬಿಂದುವಾದ ಇದು ಧಾರ್ಮಿಕ ನಂಬಿಕೆ ಮತ್ತು ಆಚರಣೆಗೆ ಪ್ರಸಿದ್ಧಿ ಪಡೆದಿದೆ. ಹೊರಜಿಲ್ಲೆಗಳಿಂದ ಭಕ್ತರು ಆಗಮಿಸಿ ಹರಕೆಗಳನ್ನು ತೀರಿಸುತ್ತಾರೆ. ಗುರುಮನೆತನದವರು ಪರಂಪರೆಯಂತೆ ಮಳವಳ್ಳಿ ಮತ್ತು ಬೊಪ್ಪನಗೌಡಪುರದಿಂದ ಗುರುಗಳು ಪೂಜಾಕೈಂಕರ್ಯವನ್ನು ನೆರವೇರಿಸುತ್ತಾರೆ.

ಒಟ್ಟಿನಲ್ಲಿ ದೇವಾಲಯಗಳಾಗಲಿ, ಮಠಗಳಾಗಲಿ ಭಕ್ತ ನೆಮ್ಮದಿಗೆ ಪ್ರಮುಖ ತಾಣಗಳಿದ್ದಮತೆ. ಎಡತೊರೆ ನಗರದಲ್ಲಿರುವ ದೇವಾಲಯಗಳು ಪ್ರತಿದಿನ ಮುಂಜಾನೆ ಬಾಗಿಲು ತೆರೆದು ನಿತ್ಯ ಪೂಜಾವಿಧಿವಿಧಾನಗಳೊಂದಿಗೆ ಭಕ್ತರ ಮನಸ್ಸಿಗೆ ಶಾಂತಿಸಮೃದ್ಧಿಯನ್ನು ನೀಡುತ್ತಾಬಂದಿವೆ.

ನಗರದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು

ಮಾನವನ ಜೀವದ್ದೇಶೆಗೆ ಸಾಕ್ಷಿ ಆತನ ಹೃದಯದಲ್ಲಿ ನಡೆಯುತ್ತಿರುವ ಶ್ವಾಸೋಚ್ವಾಸ ಕ್ರಿಯೆ. ಅಂತೆಯೇ ಒಮದು ನಗರದ ಜೀವಕಳೆಯನ್ನು ಎತ್ತಿತೋರಿಸುವುದು ಅಲ್ಲಿನ ಸಾಂಸ್ಕೃತಿಕ ಸಂಘಗಳ ಕಾರ್ಯಚಟುವಟಿಕೆಗಳು. ಈ ದಿಸೆಯಲ್ಲಿ ನಮ್ಮ ರಾಜನಗರ ಹಲವಾರು ಅಪೂರ್ವ ಕಲಾ ಹಾಗೂ ಸಂಸ್ಕೃತಿಯ ಪ್ರತೀಕವಾದ ಕಾರ್ಯಕ್ರಮಗಳಿಗೆ ತವರುಮನೆಯಾಗಿದೆ.

ಹತ್ತೊಂಬತ್ತುನೂರ ಐವತ್ತೆರಡನೆಯ ಇಸವಿಯ ಸಮಯ. ಕೆಲವೇ ಜನ ಉತ್ಸಾಹಿ ತರುಣರಿಂದ ಇದೇ ಕೃಷ್ಣರಾಜನಗರದಲ್ಲಿ "ಕಲಾಸಂಘ" ಎಂಬ ಹೆಸರಿನಿಂದ ಒಂದು ಸಂಘಸ್ಥಾಪನೆಯಾಗಿ ಅನೇಕ ಗಣ್ಯವ್ಯಕ್ತಿಗಳು ಪ್ರೋತ್ಸಾಹದಾಯಕರಾಗಿದ್ದರು. ಪ್ರತಿತಿಂಗಳೂ ಒಂದು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿತ್ತು. ನಾಟಕ, ನೃತ್ಯ, ಸಂಗೀತ, ಜನಪದಗೀತೆ, ಉಪನ್ಯಾಸ ಹೀಗೆ ಯಾವುದಾದರೊಂದು ಕಾರ್ಯಕ್ರಮ, ಮನರಂಜನೆ ನಡೆಯುತ್ತಿತ್ತು. ಈ ಕಾರ್ಯಕ್ರಮಗಳಲ್ಲಿ ಜಿ.ಪಿ.ರಾಜರತ್ನಂ, ತ.ರಾ.ಸು. ಶಿವರಾಮಕಾರಂತರು, ಅನಂತನಾರಾಯಣ, ಜೀ.ಶಂ.ಪ, ಕರೀಂಖಾನ್ ಮುಂತಾದ ಹಿರಿಯ ಸಾಹಿತಿಗಳು ತಮ್ಮ ವಿಚಾರಪೂರಿತ ಉಪನ್ಯಾಸ ನೀಡುತ್ತಿದ್ದರು.

ಇದೇ ಸಂದರ್ಭದಲ್ಲಿ "ಹಂಸ" ಎಂಬ ಒಂದು ಹಸ್ತಲಿಖಿತ ಪತ್ರಿಕೆಯ ಆಶ್ರಯದಲ್ಲಿ ಎರಡು ಬಾರಿ ಅಖಿಲ ಕರ್ನಾಟಕ ಸಣ್ಣ ಕಥೆ ಸ್ಪರ್ಧೆ ನಡೆಸಿ, ಬಹುಮಾನ

ಪಡೆದ ಲೇಖಕರಿಗೆ ಪ್ರಸಿದ್ಧ ಸಣ್ಣ ಕಥಾಲೇಖಕ ಆನಂದರವರು, ಮತ್ತೊಮ್ಮೆ ಗೋಪಾಲಕೃಷ್ಣ ಅಡಿಗರಿಂದ ಬಹುಮಾನ ವಿತರಿಸಲಾಗಿತ್ತು.

ಪ್ರತಿಯುಗಾದಿ, ಗಣೇಶಹಬ್ಬ, ದೀಪಾವಳಿ ಹಬ್ಬಗಳಲ್ಲಿ ತಪ್ಪದೇ ನಾಟಕಗಳನ್ನು ಅಭಿನಯಿಸಲಾಗಿತ್ತು. ಕಲಾಸಂಘವು ಮುಂದೆ ಚಿತ್ರಕಲಾ ಎಂಬ ಹೆಸರಿನಿಂದ ಮೈಸೂರು, ಮಂಡ್ಯ, ಹಾಸನ ಮುಂತಾದ ಕಡೆ ನಾಟಕ ಪ್ರದರ್ಶನ ಮತ್ತು ಆಕಾಶವಾಣಿಗಳಲ್ಲಿಯೂ ಪ್ರಸಾರವಾಯಿತು. ಆರುಬಾರಿ ಅಖಿಲ ಕರ್ನಾಟಕ ಕೈಲಾಸಂ ಸ್ಮಾರಕ ನಾಟಕ, ನೃತ್ಯ ಮತ್ತು ಸಂಗೀತ ಸ್ಪರ್ಧೆ ನಡೆದಿದೆ. ಒಮ್ಮೆ ಮೈಸೂರಿನ ಪುರಭವನದಲ್ಲಿ ನಡೆದ ಸಂದರ್ಭದಲ್ಲಿ ಅಂದಿನ ವಿಧಾನ ಸಭಾಧ್ಯಕ್ಷ ಎಸ್.ಆರ್.ಕಂಠಿ–ಯವರು ಅಧ್ಯಕ್ಷತೆ ವಹಿಸಿದ್ದರು. ಸ್ಪರ್ಧೆಯ ತೀರ್ಪುಗಾರರಾಗಿ, ತ.ರಾ.ಸು. ತ್ರಿವೇಣಿ, ಎಂ.ಎಸ್.ರಾಮಸ್ವಾಮಿ, ಅನಂತರಂಗಾಚಾರ್‌ರವರು ಆಗಮಿಸಿದ್ದರು.

ಕೃಷ್ಣರಾಜನಗರದಲ್ಲಿ ನಡೆದ ಈ ಸ್ಪರ್ಧೆಗಳಲ್ಲಿ ಭಾಗವಹಿಸಿ, ಈಗಿನ ಚಲನಚಿತ್ರಗಳಲ್ಲಿ ಪ್ರಸಿದ್ಧವಾಗಿರುವ ಎಂ.ಪಿ.ಶಂಕರ್, ಶಕ್ತಿಪ್ರಸಾದ್, ಅರಸುಕುಮಾರ್, ಕುಂದಾಣಿ ಸತ್ಯನ್ ಮುಂತಾದವರು ಭಾಗವಹಿಸಿ ಪಾರಿತೋಷಕಗಳನ್ನು ಪಡೆದಿರುತ್ತಾರೆ. ಇವರಿಗೆ ಎಸ್.ನಿಜಲಿಂಗಪ್ಪ, ದ.ರಾ.ಬೇಂದ್ರೆ, ತೀ.ನಂ.ಶ್ರೀಕಂಠಯ್ಯನವರು ತಮ್ಮ ಅಮೃತಹಸ್ತದಿಂದ ನೀಡಿರುತ್ತಾರೆ. ಮುಂದೆ ಈ ಚಿತ್ರಕಲಾ ಸಂಸ್ಥೆ, "ಚಿತ್ರಕಲಾ ಥಿಯೇಟರ್" ಎಂಬ ಹೆಸರಿನಿಂದ ವೃತ್ತಿ ಸಂಸ್ಥೆಯಾಗಿ, ಬೇಲೂರು, ಚನ್ನರಾಯಪಟ್ಟಣ, ತರೀಕೆರೆ, ಮೂಡಿಗೆರೆ ಮುಂತಾದ ಕಡೆಗಳಲ್ಲಿ ನಾಟಕ ಪ್ರದರ್ಶನವಾಯಿತು.

ಇದೇ ನಗರದಲ್ಲಿ ಕಲಾಸೇವೆಮಾಡಿದ ಇನ್ನೊಂದು ಸಂಸ್ಥೆ, "ಯುವಕ ಸಂಘ". ಇದರಲ್ಲಿ ಆರ್.ಬಿ.ಸೋಮಪ್ಪ, ವೈ.ಆರ್.ಭದ್ರಪ್ಪ, ಬಿ.ಎಸ್.ನಾಗರಾಜ್ ಮುಂತಾದವರು ಸೇವೆ ಸಲ್ಲಿಸಿ, ಪುಸ್ತಕಭಂಡಾರ, ವಾಚನಾಲಯ, ಸಾವಿರಾರು ಉತ್ತಮ ಗ್ರಂಥಗಳು ನಗರದ ನಾಗರಿಕರಿಗೆ ಲಭ್ಯವಾಯಿತು. ಪ್ರಸಿದ್ಧ ಕಲಾವಿದರಾದ ಪಿ.ಕಾಳಿಂಗರಾವ್, ಮೋಹನಕುಮಾರಿ ಮುಂತಾದವರನ್ನು ಕರೆಸಿ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದರು.

ಕೆ.ಶಿವರಾಮಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಅವರನ್ನು ಕೃಷ್ಣರಾಜ–ನಗರಕ್ಕೆ ಬರಮಾಡಿಕೊಂಡು, ದೇ.ಜವರೇಗೌಡ ಮತ್ತು ಯು.ಆರ್.ಅನಂತಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಕಾರಂತರ ಸನ್ಮಾನ ಸಮಿತಿಯಲ್ಲಿ ಸಮಾರಂಭ ನಡೆಸಿ ಸನ್ಮಾನಿಸಲಾಯಿತು. ಇವೆಲ್ಲಕ್ಕಿಂತಲು ಹಳೆಯ ವೃತ್ತಿನಾಟಕ ಸಂಸ್ಥೆಯೆಂದು ಇದ್ದು,

ಅತ್ಯುತ್ತಮ ರಂಗಸಜ್ಜಿಕೆಯನ್ನೊಳಗೊಂಡ ಈ ಸಂಸ್ಥೆಯಲ್ಲಿ ಡಾ. ರಾಜ್‌ಕುಮಾರ್, ಬಾಲಕೃಷ್ಣ ಅಯ್ಯರ್, ನರಸಿಂಹರಾಜ್ ಮುಂತಾದವರು ಅಭಿನಯಿಸಿದ್ದರೆಂದು ಹೇಳಲಾಗಿದೆ.

ನಗರದ ಇನ್ನೊಂದು ನಾಟಕಸಂಸ್ಥೆ, "ಶ್ರೀ ಮೀನಾಕ್ಷಿ ಕೃಪಾಪೋಷಿತ ನಾಟಕ ಮಂಡಳಿ" ಇದರ ಹೆಚ್ಚಿನ ಕಲಾವಿದರು ಕೀರ್ತಿಶೇಷರಾಗಿದ್ದಾರೆ. ವೈ.ವಿ.ಅನಂತಯ್ಯ, ವೈ.ಜೆ.ನಂಜುಂಡಪ್ಪ, ವೈ.ಸಿ.ವೆಂಕಟರಮಣಶೆಟ್ಟರು ಈ ಸಂಸ್ಥೆಯ ಹಳೆಯ ನಟರು. ಈ ಮಂಡಳಿಯಿಂದ, ದೇವದಾಸಿ, ಧರ್ಮರತ್ನಾಕರ, ಗೃಹಲಕ್ಷ್ಮಿ ಮುಂತಾದ ನಾಟಕಗಳನ್ನು ಕೆ.ಎಸ್.ರಾವ್‌ರವರ ನಿರ್ದೇಶನದಲ್ಲಿ ಅಭಿನಯಿಸಲಾಯಿತು.

ಈಚೀನ ದಿನಗಳಲ್ಲಿ ಜೈಭಾರತ್ ಕಲಾಸಂಘ, ಲೌಲಿಬ್ರದರ್ಸ್ ಕಲಾವೃಂದ, ಶ್ರೀನಿಧಿರಂಗ ವೇದಿಕೆ, ಶ್ರೀಕೃಷ್ಣ ಯುವಕ ಸಂಘ ಮುಂತಾದ ಹವ್ಯಾಸಿ ಕಲಾಸಂಸ್ಥೆಗಳು ನಾಟಕ ಪ್ರದರ್ಶನ ನೀಡುತ್ತಿವೆ. ನಗರದ ರೋಟರಿ ಸಂಸ್ಥೆ, ಲಯನ್ಸ್‌ಕ್ಲಬ್, ಮಹಾಗಣಪತಿ ಸೇವಾ ಸಮಿತಿ, ಶ್ರೀ ಸತ್ಯಸಾಯಿ ಸೇವಾಸಮಿತಿ, ತಾಲ್ಲೂಕು ಕನ್ನಡ ಸಾಹಿತ್ಯ ಸಮಿತಿ ಮುಂತಾದ ಸಂಘಸಂಸ್ಥೆಗಳು ಕಾರ್ಯನಿರತರಾಗಿದ್ದು, ಸಂಗೀತ, ನಾಟಕ, ನೃತ್ಯ, ವಿಚಾರಗೋಷ್ಠಿ, ಚರ್ಚಾಕೂಟ, ಸಮಾಜ ಸೇವಾಕಾರ್ಯ ಮಾಡುತ್ತಾ ಬಂದಿದೆ. ನಗರದ ಮಹಾಗಣಪತಿ ಸೇವಾಸಮಿತಿಯ ಪುರಸಭಾ ಬಯಲುರಂಗ ಮಂದಿರದ ಡಾ. ರಾಜಕುಮಾರ್ ಬಾನಮಗಳದಲ್ಲಿ ಗಣೇಶ ಹಬ್ಬದಂದು ಒಂದು ತಿಂಗಳು ಅನೇಕ ಕಾರ್ಯಕ್ರಮಗಳನ್ನು ನೀಡುತ್ತಿದೆ.

ನಗರದ ಜನರು ಕ್ರೀಡಾಭಿಮಾನಿಗಳಾಗಿದ್ದು, ಸ್ಥಳೀಯ ನ್ಯೂ ನಗರ ಬ್ಯಾಡ್‌ಮಿಂಟನ್ ಕ್ಲಬ್ ವತಿಯಿಂದ ಪ್ರತಿವರ್ಷವು ರಾಜ್ಯಮಟ್ಟದಲ್ಲಿ ಕ್ರೀಡೆಯನ್ನು ಹಮ್ಮಿಕೊಂಡು ಪ್ರತಿಭಾವಂತರಿಗೆ ಅವಕಾಶಗಳ ವೇದಿಕೆಯಾಗಿದೆ. ವಾಲೀಬಾಲ್ ಮತ್ತು ಷಟಲ್‌ಕಾರ್ಕ್ ಟೀಂಗಳು ಸಹ ಇವೆ.

ಅಧ್ಯಾಯ-೫

ತಾಲ್ಲೂಕಿನ ಜಾನಪದ

ಮಾನವ ಸಂಸ್ಕೃತಿಯನ್ನು ಅಧ್ಯಯನ ನಡೆಸುವ ಶಾಸ್ತ್ರಗಳಲ್ಲಿ ಜನಪದ ಪ್ರಮುಖ ಪಾತ್ರ ವಹಿಸುತ್ತದೆ. ಕಂಠಸ್ಥ ಸಂಸ್ಕೃತಿಯು ಶಿಷ್ಟ ಸಂಸ್ಕೃತಿಯಿಂದ ಬೇರ್ಪಟ್ಟು ತನ್ನ ಅನುಕೂಲವಾದ ಪರಿಸರದಲ್ಲಿ ಜನಪದ ಇಂದಿಗೂ ಉಳಿದುಕೊಂಡು ಬಂದಿದೆ. ಬದುಕಿನ ಭಾಗವಾಗಿ ಸಂಸ್ಕೃತಿಯ ಕೊಂಡಿಯಾಗಿ ಧಾರ್ಮಿಕ, ಸಾಮಾಜಿಕವಾಗಿ ಜೀವನದ ಸಮಸ್ತ ಕ್ರಿಯೇಗಳನ್ನು ಜಾನಪದ ಸಾಹಿತ್ಯದಲ್ಲಿ ಕಾಣುತ್ತೇವೆ.

ಜನಪದ ಹಾಡು ಕುಣಿತಗಳು ನಮ್ಮ ಅನಕ್ಷರಸ್ಥ ಗ್ರಾಮೀಣರ ಅಂತರಂಗದಲ್ಲಿ ಬೆಳೆದು, ಲೋಕಕ್ಕೆ ಅನ್ನವನ್ನು ಕೊಡುವ ರೈತರ ಹೊಲಗದ್ದೆಗಳ ಪರಿಸರವೇ, ಪಡೆದ ಅನುಭವ, ತಮ್ಮ ಸಮಸ್ತ ಬದುಕಿಗೆ ಕಾರಣವಾದ ದೈವೀಶಕ್ತಿಯ ಕುರಿತ ಹಾಡುಗಳು, ನಂಬಿಕೆ, ಕತೆಗಳೇ ಜಾನಪದ ಸಾಹಿತ್ಯದ ಮೂಲವೆನ್ನಬಹುದು. ತೀರಾ ಇತ್ತೀಚಿನವರೆಗೆ ಹಳ್ಳಿಗಳ ನಡುವೆ ಸಾಂಸ್ಕೃತಿಕ ಕೊಂಡಿಯಾಗಿದ್ದವರು ಬಳೆಗಾರರು, ಚೌಡಿಕೆಯವರು, ತೊಗಲುಬೊಂಬೆಯ ಗಾರುಡಿಗರು, ಕೋಲೆಬಸವನಾಡಿಸುವವರು, ಬುಡಬುಡಕೆಯವರು, ತಲೆಮಾರುಗಳ ಕಥೆ ಹೇಳುತ್ತಿರುವವರು, ಇವರು ಹಳ್ಳಿಯಿಂದ ಹಳ್ಳಿಗೆ ಬಿಸಿಲು ಮಳೆಲಯೆನ್ನದೆ ಊರೂರು ಅಲೆದು ಜೀವಿಸುತ್ತಿದ್ದವರು ಅನೇಕರು. ಅವರಲ್ಲಿ ಕಪ್ಪಡಿಯನ್ನು ಕುರಿತು ಹಾಡುವ ನೀಲಗಾರರೂ ಜಾನಪದದ ಕಲಾವಿದರ ಪರಂಪರೆಯಲ್ಲಿ ಒಬ್ಬರಾಗಿದ್ದಾರೆ.

ಕಪ್ಪಡಿಯು ಕೃಷ್ಣರಾಜನಗರದ ಪ್ರಮುಖ ಸ್ಥಳ. ಜಾನಪದ ನಂಬಿಕೆ, ಜಾನಪದ ಕಾವ್ಯ ಹಾಗೂ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳಲ್ಲಿ ಇಡೀ ಮೈಸೂರು ಜಿಲ್ಲೆಯಲ್ಲಿಯೇ ಪ್ರಭಾವೀ ಕೇಂದ್ರವಾಗಿ ಪ್ರಸಿದ್ಧವಾಗಿದೆ. ನಗರದಿಂದ ಆರು ಕಿ.ಮೀ. ದೂರದಲ್ಲಿ ಕಾವೇರಿ ನದಿಯ ಪ್ರಶಾಂತ ದಂಡೆಯಲ್ಲಿದೆ. ಶಿವರಾತ್ರಿಯಿಂದ ಯುಗಾದಿಯ ವರೆವಿಗೆ ಜಾತ್ರೆಗೆಂದು ಭಕ್ತರು ಸಹಸ್ರ ಸಂಖ್ಯೆಯಲ್ಲಿ ಒಂದು ರಾಚಪ್ಪಾಜಿಯವರ ಗದ್ದುಗೆಗೆ ಪೂಜೆ ಸಲ್ಲಿಸುತ್ತಾರೆ. ನೀಲಗಾರರು, ಕಂಸಾಳೆಯವರು ಹಾಡುವ 'ಮಂಟೇಸ್ವಾಮಿ ಕಾವ್ಯ'ದಲ್ಲಿ ಕಪ್ಪಡಿ ರಾಚಪ್ಪಾಜಿಯವರ ಮಹಿಮೆ, ಸಾಹಸಗಳನ್ನು ಕುರಿತು ಹಾಡುವಂತ ಪ್ರಸ್ತಾವನೆ ಸುದೀರ್ಘವಾಗಿ ದೊರಕುತ್ತವೆ. ಈ ವೃತ್ತಿಗಾಯಕರ ಕಲೆಯನ್ನು ಮಂಟೇಸ್ವಾಮಿ ಶಿಷ್ಯಪರಂಪರೆ ಅಂದಿನಿಂದ ಇಂದಿನವರೆಗೂ ಮುಂದುವರೆಸಿಕೊಂಡು ಬಂದಿದೆ. ಇವರನ್ನು 'ನೀಲಗಾರರು' ಎಂದು

ಕರೆಯಲಾಗುತ್ತದೆ. ನೀಲಗಾರರು ಎಂದರೆ ಲೀಲೆಗಾರರು ಎಂದು ಕೆಲವರು ಅರ್ಥೈಸಿದ್ದಾರೆ. ಹಾವಿನ ಹೆಡೆಯ ಆಕಾರದ ತಂಬೂರಿ, ತಾಳ, ದಮ್ಮಡಿ, ಗಗ್ಗರ ಇವರ ಪ್ರಮುಖ ವಾದ್ಯ ಪರಿಕರಗಳು. ಮುಖ್ಯ ಗಾಯಕನ ಸೊಲ್ಲಿಗೆ ಸ್ವರ ಕೊಡುವುದು, ಹೂಗುಟ್ಟುವುದು, ಪ್ರತಿಕ್ರಿಯಿಸುವುದು ಹಾಗೂ ಇತರೆ ತಾಳಗಳನ್ನು ಬಳಸುವುದು ಸಹ ಗಾಯಕರ ಕೆಲಸ. ಇವರು ಮಂಟೇಸ್ವಾಮಿ ಕಾವ್ಯದ ಜೊತೆಯಲ್ಲಿಯೇ ಮಾದೇಶ್ವರನ ಕಾವ್ಯವನ್ನು ಹಾಡುತ್ತಾರೆ.

ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಕಪ್ಪಡಿಯ ಮಹಿಮೆಯನ್ನು ಜಾನಪದ ಹಿನ್ನೆಲೆಯಲ್ಲಿ ಕಂಡುಬರುವಂತ ಮೊದಲ ಜನಪದ ಕಲೆ ಇಲ್ಲಿಂದಲೇ ಪ್ರಾರಂಭವೆನ್ನಬಹುದು. ನೀಲಗಾರರು, ಮಂಟೇಸ್ವಾಮಿಯ ಒಕ್ಕಲಿನವರು ಹರಿಜನ, ಉಪ್ಪಾರ, ಗಂಟಕಾರ, ಗೌಡ, ಮಡಿವಾಳ, ಕುರುಬ, ಕುಂಬಾರ, ಆಚಾರಿ, ಲಿಂಗಾಯಿತ, ಅರಸು ಜಾತಿ ಹೀಗೆ ತಾಲ್ಲೂಕಿನಲ್ಲಿ ಹಂಚಿಹೋಗಿದ್ದಾರೆ. ಈ ಕಥೆಯನ್ನು ಕಟ್ಟಿ ಹಾಡುವವರು ಸಾಮಾಜಿಕವಾಗಿ ಹಿಂದುಳಿದವರಾದ ಹರಿಜನರು, ಉಪ್ಪಾರರು, ಮಡಿವಾಳರು, ಕುಂಬಾರರು ಮಾತ್ರ. ಉಳಿದ ಒಕ್ಕಲಿನವರು ಈ ನೀಲಗಾರರನ್ನು ಕರೆಸಿಕೊಳ್ಳುತ್ತಾರೆ.

'ಪದವ ಹೇಳೋ ನಾಲಿಗೆಗೆ ಒಲಿದು ಬಾಪ್ಪ.....' ಎಂದು ನೀಲಗಾರರು ಕಥಾಲೋಕವನ್ನು ಪ್ರವೇಶಿಸುವ ಮೊದಲು ಸ್ತುತಿ ಮಾಡುತ್ತಾರೆ. ಅನಕ್ಷರಸ್ಥರಾದವರ ಸ್ಮೃತಿ ಮತ್ತು ನಾಲಿಗೆಗೆ ಧರ್ಮಗುರುಗಳು ಒಲಿದು ವಾಲಾಡುತ್ತಾರೆ. ತಂಬೂರಿಯನ್ನು ಮೀಟಿ ಮತ್ತು ಗಗ್ಗರಗಳನ್ನು ಎಳೆದು ನಿರಂತರವಾಗಿ ಮೂರು ರಾತ್ರಿಗಳ ತನಕ ಹಾಡುವಂತ ಶಕ್ತಿ ಸಾಮರ್ಥ್ಯವಿದೆ. ಈ ಕಾವ್ಯವನ್ನು ತಾಳದಿಂದ ತುದಿಯವರೆಗೂ ಹಾಡಿಸುವ ಪರಿಪಾಠವನ್ನು ಪ್ರಸಂಗಗಳೋಪಾದಿಯಲ್ಲಿ ಈ ಕಥೆಯನ್ನು ಕೇಳುತ್ತಾರೆ. ಹೊಸ ಮನೆಗೆ ಹೋಗುವಾಗ ಸತ್ತು ಕೆಟ್ಟವರಿಗೆ ಅನ್ನ ಹಾಕುವಾಗ ಒಕ್ಕಲಿನವರು ನೀಲಗಾರರನ್ನು ಕರೆಸಿ ಈ ಕಥೆಯನ್ನು ಹಾಡಿಸುತ್ತಾರೆ. ಸಾಮಾಜಿಕವಾಗಿ ಯಾವುದೇ ಅಂತಸ್ತುಗಳಿಲ್ಲದ ಜನವರ್ಗ ಕಟ್ಟಿರುವ ಈ ಕಥೆಯನ್ನು ಒಕ್ಕಲಿಗ ಎಲ್ಲಾ ಜಾತಿಯವರು ಅಪಾರವಾದ ಭಕ್ತಿ ಗೌರವಗಳಿಂದ ಕೇಳುತ್ತಾರೆ. ಮೇಲುಜಾತಿಯವರ ಅಂತಸ್ತು ಸಿರಿತನ ಜಾತೀಯತೆಯನ್ನೆಲ್ಲಾ ಒಂದಾಗಿಸಿ ಬಿಡುವ ಕಲೆಗಾರಿಕೆ ಈ ಪರಂಪರೆಯ ಹಾಡುಗಾರರಿಗಿದೆ.

ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಹೆಚ್ಚು ಒಕ್ಕಲಿರುವುದರಿಂದ ಈ ಎರಡು ಜಿಲ್ಲೆಗಳಲ್ಲಿ ಹೆಚ್ಚು ಕಥೆ ಹಾಡುವ ನೀಲಗಾರರಿದ್ದಾರೆ. ಈ ಎರಡು ಸೀಮೆಗಳಲ್ಲಿ ಎರಡು ಗುರು ಪರಂಪರೆಗಳಿರುವುದು ಗೋಚರಿಸುವುದು. ಮಂಡ್ಯ ಜಿಲ್ಲೆಯ ನೀಲಗಾರರು ತಂಬೂರಿ, ಗಗ್ಗರ, ಢಕ್ಕೆಗಳನ್ನು ಪ್ರಧಾನವಾಗಿ ಬಳಸಿದರೆ, ಮೈಸುರು ಕಡೆ ತಂಬೂರಿ, ಗಗ್ಗರ ಮತ್ತು ದಮ್ಮಡಿಯನ್ನು ಬಳಸುತ್ತಾರೆ. ಮಂಡ್ಯ ಜಿಲ್ಲೆಯವರು ಮೇಳ ಮತ್ತು ನಾದಕ್ಕೆ ಪ್ರಾಮುಖ್ಯತೆ ಕೊಡುವುದರಿಂದ ವಾದ್ಯ ಪರಿಕರವನ್ನು ಹೆಚ್ಚು ಬಳಸುತ್ತಾರೆ. ಮೈಸೂರು ಜಿಲ್ಲೆಯವರು ಕಥೆಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು ಹಾಡುತ್ತಾರೆ. ವೃತ್ತಿಪರ ಗಾಯಕರಾದ ನೀಲಗಾರರು ಕಪ್ಪಡಿ ಜಾತ್ರೆಯ ಸಮಯದಲ್ಲಿ ಇಲ್ಲೇ ಇದ್ದು ರಾಚಪ್ಪಾಜಿ ಸನ್ನಿಧಿಯಲ್ಲಿ ಭಕ್ತರಿಗೆ ಕಥೆಯನ್ನು ಉಣಬಡಿಸಿ, ಜಾತ್ರೆ ಮುಗಿದ ಬಳಿಕ ತೆರಳುತ್ತಾರೆ. ಆ ಹಾಡಿನ ಮಾದರಿಯೊಂದು ಹೀಗಿದೆ.

ಗುರುವೇ ಸಿದ್ದು ಸಿದ್ದರುಗೆಲ್ಲಾ
ನೀವು ಅತಿ ಮಱದ್ದು ಘನ ನೀಲಿ
ಸಿದ್ದಯ್ಯ ಸ್ವಾಮಿ ಬನ್ನಿ
ಮಂಟೇದಾ
ಲಿಂಗಯ್ಯ ನೀವೇ ಬನ್ನಿ

ನನ್ನ ಪಾತಾಳ ಜ್ಯೋತಿ ಬಪ್ಪಾ
ನನ್ನ ಪರಂಜ್ಯೋತಿ ಎದ್ದು ಬನ್ನಿ
ಸಿದ್ದಯ್ಯ ಸ್ವಾಮಿ ಬನ್ನಿ
ಮಂಟೇದಾ ಲಿಂಗಯ್ಯ ನೀವೇ ಬನ್ನಿ
ಮಗ್ಗಮರಳಿ
ಹೆಗ್ಗಡದೇವನ ಕೋಟೆ
ಪಟ್ಟ ಪಾಲಹಳ್ಳಿ
ಸಂತೇ ಸರಗೂರು
ಅರಕೆರೆ ಬನ್ನೂರು
ತಂತ್ತಾಳ ರಾಜ್ಯ
ಬಕ್ಲು ಮೂಡಾ ಎಲ್ಲೆ
ಹಂಪಾಪುರದ ಗ್ರಾಮ
ಎಡತೊರೆ ಗ್ರಾಮ

ಚಂದಗಾಲದ ತೋಟ
ಚುಂಚನಕಟ್ಟೆ ತಾಲ್ಲೂಕು
ಮೈಸೂರು ದತರ ಲಟ್ಟೆ
ನಿನ್ನ ಒಕ್ಕಳು ಮೂಡದಾ ಎಲ್ಲೆ
ಕಪ್ಪಡಿ ಕೈಲಾಸ ಅಂತ
ನಾಮಕರಣ ಮಾಡುತೀನಿ

ಸಿದ್ದಯ್ಯ ಸ್ವಾಮಿ ಬನ್ನಿ
ಮಂಟೇದಾ ಲಿಂಗಯ್ಯ ಬನ್ನಿ॥

ಕಪ್ಪಡಿ ಜಾತ್ರೆ ಹಲವಾರು ಧರ್ಮ, ಕಲೆ, ಸಾಹಿತ್ಯ ಇವೆಲ್ಲವನ್ನು ಒಂದರೊಡನೊಂದು ಮೇಳವಿಸಿ ಒಂದು ಸಾಂಸ್ಕೃತಿಕವಾದ ಪರಿವೇಷವನ್ನು ತಂದುಕೊಟ್ಟಿದೆ. ಇಲ್ಲಿಗೆ ಬರುವ ಜನಪದ ಮೇಳಗಳು ಹಾಗೇ ನೀಲಗಾರರು ಹಾಡುವ ಹಾಡುಗಳು ಜನಪದ ಸಾಹಿತ್ಯವನ್ನು ಉಳಿಸಿಕೊಂಡು ಬರುವಲ್ಲಿ ತಮ್ಮದೇ ಆದ ಪಾತ್ರವಹಿಸಿದೆ.

ಕೃಷ್ಣರಾಜನಗರ ತಾಲ್ಲೂಕಿನ ಹಲವಾರು ಹಳ್ಳಿಗಳಲ್ಲಿ ಜಾನಪದ ಎನ್ನುವುದು ಅಲ್ಲಲ್ಲಿ ಸ್ವಲ್ಪಮಟ್ಟಿಗೆ ಕಾಣಸಿಗುತ್ತದೆ. ಕೆಲವರು ಪರಂಪರಾಗತವಾಗಿ ಉಳಿಸಿಕೊಂಡು ಎಲೆಮರೆಕಾಯಿಯ ಹಾಗೆ ತಮ್ಮ ಜಾನಪದ ಜ್ಞಾನವನ್ನು ಪಡೆದಿರುವರು. ಜಾನಪದ ಎನ್ನುವುದು ಪಾಶ್ಚಾತ್ಯರು ಅನುಕರಣೆಯಲ್ಲಿ ಬೇರೆಯವರಿಂದ ಎರವಲು ಪಡೆದಿದ್ದಲ್ಲ. ಈ ಮಣ್ಣಿನಲ್ಲಿಯೇ ಅಂತರ್ಗತವಾಗಿರುವಂತಹದು, ಕಥೆ, ಗೀತೆ, ಒಗಟು, ಹಾಡು, ಲಾವಣಿ ಇವತ್ತಿಗೂ ಕೂಡಾ ಅಲ್ಲಲ್ಲಿ ಚದುರಿಹೋಗಿದೆ.

ತಾಲ್ಲೂಕಿನ ಹೆಬ್ಬಾಳು ಕುಡಾ ಅನೇಕ ವಿಧದಲ್ಲಿ ಜನಪದೀಯ ಹಿನ್ನೆಲೆಯಲ್ಲಿ ಪ್ರಾಮುಖ್ಯತೆ ಗಳಿಸಿದೆ. ಹೆಬ್ಬಾಳು ಗ್ರಾಮದ ಅನೇಕ ಯುವಕ ಸಂಘಗಳು ಸಕ್ರೀಯವಾಗಿ ಜನಪದಗೀತೆ, ಕೋಲಾಟ, ಡೊಳ್ಳು ಕುಣಿತ, ವೀರಗಾಸೆಯಂತಹ ಜಾನಪದ ಹಿನ್ನೆಲೆಯ ಅನೇಕ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದೆ. 'ರಾಮಚಂದ್ರ ಯುವಕ ಸಂಘವೂ ೧೯೭೦ರಲ್ಲಿ ಸ್ಥಾಪನೆಗೊಂದು, ಪ್ರಸ್ತುತ ಪುಟ್ಟೇಗೌಡರು ಅಧ್ಯಕ್ಷರಾಗಿ ಮತ್ತು ದೈಹಿಕ ಶಿಕ್ಷಕ ಹೆಚ್.ಎಸ್.ಲೋಕೇಶ್‌ರಂತ ಕಲಾವಿದರ ಜೊತೆಗೂಡಿ ರಾಜ್ಯಾದ್ಯಂತ ಸುಮಾರು ಎಪ್ಪತ್ತಕ್ಕೂ ಹೆಚ್ಚು ಪ್ರದರ್ಶನವನ್ನು ನೀಡಿರುತ್ತಾರೆ. ಬೆಂಗಳೂರು, ಮಂಡ್ಯ, ಚಿಕ್ಕಮಂಗಳೂರು, ಕೊಡಗು ಮುಂತಾದೆಡೆ-ಯಲ್ಲಿ ಕಾರ್ಯಕ್ರಮಗಳನ್ನು ನೀಡಿರುತ್ತಾರೆ. ಜಾನಪದ ತಜ್ಞ ಪಿ.ಕೆ.ರಾಜಶೇಖರ್‌ರವರ

ಮಾರ್ಗದರ್ಶನವೂ ಇವರ ಪಾಲಿಗಿದೆ. ಕೋಲಾಟ, ಜಾನಪದ ನೃತ್ಯ, ವೀರಗಾಸೆಗಾಗಿ ಜಿಲ್ಲಾಮಟ್ಟದ ಮತ್ತು ಧಾರವಾಡದ ರಾಜ್ಯ ಮಟ್ಟದಲ್ಲಿಯೂ ಭಾಗವಹಿಸಿದ್ದು, ತಿರುವನಂತಪುರದಲ್ಲಿ ನಡೆದ ರಾಷ್ಟ್ರಮಟ್ಟದಲ್ಲಿಯು ಅರ್ಹತೆ ಪಡೆದುಕೊಂಡಿದ್ದರು. ಇವರು ತಮ್ಮ ವೀರಗಾಸೆ ಮತ್ತು ಡೊಳ್ಳುಕುಣಿತದಂತಹ ಕಾರ್ಯಕ್ರಮದಿಂದಾಗಿ ಅನೇಕ ಯುವಜನ ಮೇಳದಲ್ಲಿಯು ಭಾಗವಹಿಸಿ ಬಹುಮಾನ ಪಡೆದಿರುತ್ತಾರೆ. ಡೋಲಾಕ್, ತಮ್ಮಟೆ, ಹಲಗೆ, ತಂಬೂರಿಯಂತಹ ವಾದ್ಯ ಪರಿಕರಗಳನ್ನು ಪಡೆಯುತ್ತಾರೆ.

ಇದೇ ಹೆಬ್ಬಾಳು ಗ್ರಾಮದ 'ಬಸವೇಶ್ವರ ಯುವಕ ಸಂಘ'ವೂ ಕೂಡಾ ಇದೇ ರೀತಿ ತಮ್ಮನ್ನೂ ತೊಡಗಿಸಿಕೊಂಡಿದ್ದು, ಇವರ ಡೊಳ್ಳುಕುಣಿತ ತಂಡವು ರಾಜ್ಯದ ಅನೇಕ ಕಡೆ ತಮ್ಮ ಪ್ರದರ್ಶನವನ್ನು ನಡೆಸಿಕೊಂಡು ಬಂದಿರುತ್ತಾರೆ. ಸೊರಬ, ಮಂಗಳೂರು ಮುಂತಾದಡೆಯಲ್ಲಿ ಕೋಲಾಟ, ಜನಪದ ನೃತ್ಯ, ಭಜನೆ, ಗೀಗೀ ಪದ ಮತ್ತು ಡೊಳ್ಳು ಕುಣಿತ ಹೀಗೆ ನಾನಾ ಕಾರ್ಯಕ್ರಮಗಳನ್ನು ನಿಡುತ್ತಾ ಬಂದಿರುತ್ತಾರೆ. ಇವರ ಡೊಳ್ಳುಕುಣಿತ ಪ್ರದರ್ಶನ ಜನ ಮೆಚ್ಚುಗೆಗೆ ಪಾತ್ರವಾಗಿದೆ. ರಾಜ್ಯದ ಅನೇಕ ಮಹಾನ್ ಕಲಾವಿದರ ಮಾರ್ಗದರ್ಶನ ಪಡೆದುಕೊಂಡಿರುತ್ತಾರೆ. ಬಸವೇಶ್ವರ ಯುವಕ ಸಂಘಕ್ಕೆ ೨೦೦೮ರಲ್ಲಿ ರಾಜ್ಯಮಟ್ಟದ ಪ್ರಶಸ್ತಿಯನ್ನೂ ಪಡೆದುಕೊಂಡು ಕೃಷ್ಣರಾಜನಗರಕ್ಕೆ ಗೌರವದ ಕಾಣಿಕೆಯನ್ನು ಕೊಟ್ಟಿದ್ದಾರೆ.

ಕೃಷ್ಣರಾಜನಗರ ತಾಲ್ಲೂಕಿನ ತಿಪ್ಪೂರು ಗ್ರಾಮದ ಶ್ರೀ ಟಿ.ಎಸ್. ನರಸಿಂಹ ನಾಯಕರ ಹೆಸರು ಇಡೀ ಮೈಸೂರು ಜಿಲ್ಲೆಯಲ್ಲಿಯೇ ಚಿರಪರಿಚಿತ ಹೆಸರು. ಇವರು ಜಾನಪದ ಗ್ರಾಮೀಣ ಸೇವೆ, ಯುವಜನಸೇವೆ, ಕನ್ನಡನಾಡು ನುಡಿ ಹಾಗೂ ಸಮಾಜಸೇವೆ ಕ್ಷೇತ್ರಗಳಲ್ಲಿ ಕಳೆದ ಮೂವತ್ತು ವರ್ಷಗಳಿಂದಲೂ ಸೇವೆ ಸಲ್ಲಿಸುತ್ತಾ ಬಂದಿರುತ್ತಾರೆ. ಇವರಲ್ಲಿರುವ ಅಗಾಧವಾದ ಜಾನಪದ ವಿದ್ವತ್ ಬಹುಮುಖ-ವಾದುದು. ನಾಟಕ, ಕೋಲಾಟ, ಯಕ್ಷಗಾನ, ಸುಗ್ಗಿಕುಣಿತ ಮುಂತಾದ ಕಲೆಗಳನ್ನು ಕರಗತ ಮಾಡಿಕೊಂಡಿರುತ್ತಾರೆ. ಅರವತ್ನಾಲ್ಕನೇ ಇಳಿವಯಸ್ಸಿನಲ್ಲಿಯೂ ಇವರ ಸುಶ್ರಾವ್ಯ ಕಂಠದಿಂದ ಹೊಮ್ಮುವ ಕೋಲಾಟದ ಪದ, ಜನಪದ ಗೀತೆ , ಗೀತೆಗೆ ತಕ್ಕ ಹಾಗೆ ಹೆಜ್ಜೆ ಹಾಕುವ ಕೈಯಲ್ಲಿ ನಲಿದಾಡುವ ಕೋಲಾಟದ ಕೋಲುಗಳು ನೋಡುಗರನ್ನು ಆಶ್ಚರ್ಯ ಚಕಿತಗೊಳಿಸುತ್ತದೆ. ಪ್ರೌಢಶಾಲೆಯಲ್ಲಿದ್ದಾಗಲೇ ಪಕ್ಕದಲ್ಲಿಯೇ ಅಭ್ಯಾಸಮಾಡುತ್ತಿದ್ದ ಕೋಲಾಟದ ಶಬ್ಧ ಕಿವಿಯ ಮೇಲೆ ಬೀಳುತ್ತಿದ್ದೊಡನೆ ಇವರ ಗಮನ ಅತ್ತ ಕಡೆ ಸೆಳೆದು ಬಿಡುತ್ತಿತ್ತು. ಪುಸ್ತಕದ ಸರಸ್ವತಿ ಒಲಿಯದ ಕಾರಣ ಮಧ್ಯದಲ್ಲಿಯೇ ವಿದ್ಯಾಭ್ಯಾಸ ಮೊಟಕುಗೊಳಿಸಿ ಜನಪದ ಸರಸ್ವತಿಯನ್ನು ಒಲಿಸಿ-

ಕೊಂಡರು. ಅಂದಿನಿಂದ ಇಂದಿನವರೆಗೂ ತಮ್ಮದೇ ಆದ 'ಶ್ರೀರಾಮ ಕೋಲಾಟ ಕಲಾಸಂಘ'ದ ಮೂಲಕ ಆಧುನಿಕ ವಿದ್ವತ್ ಜನರನ್ನು ನಾಚಿಸುವಷ್ಟು ಅಗಾಧವಾದ ಜ್ಞಾನವನ್ನು ಪಡೆದಿದ್ದಾರೆ. ಇವರ ಗಾನ ಮಾಧುರ್ಯದ ಮೋಡಿಯನ್ನು ತಿಳಿದು ೧೯೭೬ರಲ್ಲಿ ಮೈಸೂರು ಆಕಾಶವಾಣಿಯವರು ನರಸಿಂಹನಾಯಕರ ಧ್ವನಿ ಪರೀಕ್ಷಿಸಿ ಬಿಂಬ ಕಾರ್ಯಕ್ರಮದ ಮುಖಾಂತರ ಪರಿಚಯಿಸಿ ೨೦೦೫ರ ವರೆಗೂ ಇವರ ಜಾನಪದೀಯ ಹಾಡುಗಳನ್ನು ಕೇಳುಗರಿಗೆ ರಂಜಿಸಿದ್ದಾರೆ.

ಸುಮಾರು ೨೫೦ ಹಾಡುಗಳನ್ನು ನಿರಂತರವಾಗಿ ಹಾಡುವಷ್ಟು ಪ್ರಾವಿಣ್ಯತೆ ಇದೆ. ಕೋಲಾಟದ ಪದಗಳಲ್ಲಿ ಜಾನಪದ ಗೀತೆಗಳು, ದೇವರ ಭಕ್ತಿಗೀತೆಗಳು, ಸುಗ್ಗಿಕುಣಿತದ ಹಾಡುಗಳು ಮುಖ್ಯವಾದವು. ಮಾದೇಶ್ವರನ ಮಹಿಮೆಯನ್ನು ಸಾರುವಂತಹ ಚಾಮುಂಡೇಶ್ವರಿ, ಎಲ್ಲಮ್ಮದೇವಿಯ ಹಾಡುಗಳನ್ನು ತಮ್ಮ ಕೋಲಾಟಕ್ಕೆ ಅಳವಡಿಸಿ-ಕೊಂಡಿದ್ದಾರೆ. ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದ ಯುವಜನ-ಮೇಳಗಳಲ್ಲಿ ಭಾಗವಹಿಸಿರುವುದಲ್ಲದೇ ರಾಜ್ಯದ ಆನೇಕ ಜಿಲ್ಲೆಗಳಲ್ಲಿ ತಮ್ಮ ತಂಡದೊಮದಿಗೆ ಪ್ರವಾಸಮಾಡಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಕಂಸಾಳೆ ಮಹದೇವಯ್ಯನವರು ಮತ್ತು ಗೊರೂರು ಪುಟ್ಟಮಲ್ಲಯ್ಯನವರಂತಹ ಶ್ರೇಷ್ಠ ಕಲಾವಿದ-ರೊಡನೆ ಇವರು ಕಾರ್ಯಕ್ರಮ ಕೊಟ್ಟಿರುವುದು ಮೆಚ್ಚುವಂತಹುದೆ. ಮೈಸೂರಿನ ರಂಗಾಯಣದಲ್ಲಿ ಮಕ್ಕಳಿಗೆ ಇವರಿಂದ ತರಬೇತಿಯನ್ನು ಕೊಡಿಸಿ ತಮ್ಮ ಅತ್ಯಮೂಲ್ಯ ಸೇವೆಯನ್ನು ಪರರಿಗೂ ಒಣಬಡಿಸಿರುತ್ತಾರೆ. ರಾಜೇಂದ್ರಜೆನ್ನಿ, ಗೊ.ರೂ.ಚನ್ನಬಸಪ್ಪ, ದೇಜಗೌರಂತಹ ಹಿರಿಯರೂ ಕೂಡಿ ಇವರ ಗಾನಮಾಧುರ್ಯವನ್ನು ಮೆಚ್ಚಿ ಅಭಿನಂದಿಸಿದ್ದಾರೆ.

ಇವರ ಕೋಲಾಟ ಮತ್ತು ಜಾನಪದ ಸೇವೆಯನ್ನು ಪರಿಗಣಿಸಿ ಕರ್ನಾಟಕ ಜಾನಪದ ಅಕಾಡೆಮಿಯು ಇವರಿಗೆ ರಾಜ್ಯಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸದ್ಯದಲ್ಲಿಯೇ ಮೈಸೂರಿನಲ್ಲಿ ನಡೆಯಲಿರುವ ರಾಜ್ಯಮಟ್ಟದ ವರಕವಿ ದ.ರಾ.ಬೇಂದ್ರೆ ಸಾಹಿತ್ಯೋತ್ಸವದಲ್ಲಿ ಗಣ್ಯ ಸಾಹಿತಿಗಳ ಸಮ್ಮುಖದಲ್ಲಿ 'ಸುವರ್ಣ ಕರ್ನಾಟಕ ಸೇವಾ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು. ರಾಜ್ಯಮಾನವ ಹಕ್ಕುಗಳ ಮಂಡಳಿ ಬೆಂಗಳೂರು ಜಿಲ್ಲಾಘಟಕ ಇವರ ಸಂಯುಕ್ತ ಆಶ್ರಯದಲ್ಲಿ ನಡೆಯುವ ರಾಜ್ಯಮಟ್ಟದ ಬಸವಶಾಂತಿ ಪ್ರಶಸ್ತಿಗೆ ಇವರನ್ನು ಆಯ್ಕೆಮಾಡಲಾಗಿದೆ. ಸದ್ಯದಲ್ಲಿಯೇ ನಡೆಯಲಿರುವ ಈ ಸಮಾರಂಭ ದಿನಾಂಕ ೯-೬-೨೦೧೧ರಂದು ಬಸವ ಶಾಂತಿ ಪ್ರಶಸ್ತಿ ಹಾಗೂ

೧೦-೦೬-೨೦೧೧ರಂದು ಭಾವೈಕ್ಯತ ಪ್ರಶಸ್ತಿಯನ್ನು ಶ್ರೀ ಕಂದಗಲ್ ಹನುಮಂತರಾಯ ರಂಗಮಂದಿರ ವಿಜಾಪುರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಇಂತಹ ಕಲಾವಿದರನ್ನು ಗುರುತಿಸಿ ಸೇವಾಸಂಸ್ಥೆಗಳು ಪ್ರಶಸ್ತಿ ನೀಡುತ್ತಾ, ಇವರ ಜಾನಪದ ಯುವಜನ ಸೇವೆಯನ್ನು ರಾಜ್ಯಮಟ್ಟದಲ್ಲಿಯೂ ಪರಿಗಣಿಸುತ್ತಿರುವುದು ಕೃಷ್ಣರಾಜನಗರಕ್ಕೆ ಸಂದ ಗೌರವ. ಇವರು ತಮ್ಮ ಜೀವನದ ಅನುಭವ, ಕೆಲಸಂದರ್ಭದ ವಿಚಾರಗಳನ್ನು "ಅನುಭವ" ಎಂಬ ಕೃತಿಯಲ್ಲಿ ವ್ಯಕ್ತಪಡಿಸಲು ಅಣಿಯಾಗುತ್ತಿದ್ದಾರೆ.

ತಾಲ್ಲೂಕಿನಾದ್ಯಂತ ಅನೇಕ ಹಳ್ಳಿಗಳಲ್ಲಿ ಕೆಲವರು ಜಾನಪದಕ್ಕೆ ಸಂಬಂಧಿಸಿದ ಕತೆಗಳನ್ನು, ಹಾಡುಗಳನ್ನು ಕೆಲ ಹಬ್ಬದ ಸಂದರ್ಭಗಳಲ್ಲಿ ಹಾಡುತ್ತಾ ಬಂದಿರುವುದು ಕಾಣಬಹುದಾಗಿದೆ. ಕುಂಬಾರ ಕೊಪ್ಪಲಿನ ಕುಮಾರ ಮತ್ತು ಸ್ವಾಮಿ ತಂಡದವರು ಕೆಲ ಜಾನಪದಕ್ಕೆ ಸಂಬಂಧಿಸಿದಂತೆ ಭಕ್ತಿಗೀತೆ, ಭಾವಗೀತೆಯನ್ನು ಹಾಡುವಂತ ಹವ್ಯಾಸವನ್ನಿಟ್ಟು ಕೊಂಡಿರುತ್ತಾರೆ. ಚಂದಗಾಲು ಗ್ರಾಮದ ಶಿವರುದ್ರಪ್ಪ ಮತ್ತು ಕೆಲವರು ಬಳೆ ಎಂಬ ವಾದ್ಯದ ಮುಖಾಂತರ ದೇವರ ಗೀತೆಗಳನ್ನು ಹಾಡುವರು. ನಂಬಿಕೆಯಂತೆ ಮೂರು ಅಥವಾ ಐದು ಚಿಕ್ಕವಯಸ್ಸಿನ ಹೆಣ್ಣುಮಕ್ಕಳಿಗೆ ತಲೆಯ ಮೇಲೆ ಕಳಸಹೊರಿಸಿ ಅವರ ಮೈಮೇಲೆ ದೇವರ ಅವಾಹನೆ ಮಾಡುವ, ಒಲಿದು ಬಾರೇ, ದೇವಿ ಒಲಿದು ಬಾರೇ ಎಂದು ಕೂಗುವ ಕೆಲ ಹಾಡುಗಳನ್ನು ಹೇಳುವ ಕಾಯಕವನ್ನು ಮುಂದುವರೆಸಿಕೊಂಡು ಬಂದಿರುತ್ತಾರೆ. ಸಿದ್ದಾಪುರ ಗ್ರಾಮದಲ್ಲಿ ಜಾನಪದ ವಾದ್ಯ ತಂಡವಿದ್ದೂ ಹಬ್ಬಹರಿದಿನಗಳಲ್ಲಿ ಪರಊರುಗಳಲ್ಲಿ ಕೊಂಬು, ಕಹಳೆ ಮುಂತಾದ ವಾದ್ಯಪರಿಕರಗಳನ್ನು ಬಳಸಿಹಾಡುವಂತ ಕಲೆಯನ್ನು ಪಡೆದಿರುತ್ತಾರೆ.

ಸಾಲಿಗ್ರಾಮದ ಅಂಕನಹಳ್ಳಿ ಪ್ರಸಿದ್ಧ ಯಕ್ಷಗಾನ ಕಲಾವಿದರ ತಂಡವೊಂದು ಇದ್ದೂ ಸದ್ಯದಮಟ್ಟಿಗೆ ಸ್ಥಗಿತಗೊಂಡಿದೆ. ಪಕ್ಕದ ದೇವಿತಂದ್ರೆಯಲ್ಲಿ 'ವೀರಭದ್ರೇಶ್ವರ ವೀರಗಾಸೆ' ತಂಡ ಕಳೆದ ಇಪ್ಪತ್ತು ವರ್ಷಗಳಿಂದ ನಿರಂತರ ಚಟುವಟಿಕೆಯಿಂದಿದ್ದೂ ಕೃಷ್ಣರಾಜನಗರ ಸೇರಿದಂತೆ ಮೈಸೂರಿನ ದಸರಾ ಮುಂತಾದೆಡೆ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದೆ. ಸುಮಾರು ಇಪ್ಪತ್ತು ಯುವಕರ ತಂಡವೊಂದು ಚಂದ್ರಪ್ಪ ಎಂಬುವವರ ಮಾರ್ಗದರ್ಶನದಲ್ಲಿ ಈ ವೀರಗಾಸೆ ಮೇಳವನ್ನು ಮುನ್ನೆಡಸಿಕೊಂಡು- ಬಂದಿದೆ. ರುದ್ರನಂತೆ ವೇಷಭೂಷಣ ಧರಿಸಿ ಚಮಾಳವೆಂಬ ವಾದ್ಯಬಾರಿಸುವ ವ್ಯಕ್ತಿಯ ಕತ್ತಿ ಹಿಡಿದು ಹಾಡಿಗೆ ತಕ್ಕಂತೆ ರೌದ್ರಾವೇಶದಿಂದ ಕುಣಿಯುವ ನೃತ್ಯವೇ ವೀರಗಾಸೆ. ಪುರಾಣಕತೆ, ಶಿವಶರಣರ ಕತೆಯೊಂದಿಗೆ ವೀರಭದ್ರನ ಅವತಾರಗಳನ್ನು

ಹಾಡುವುದುಂಟು. 'ಅಹಹರುದ್ರ, ಅಹಹದೇವ, ಅಹಹವೀರ, ಅಹಹಶಂಭುವೇ' ಮುಂತಾದ ಮಾತುಗಳಿಂದ ಕುಣಿಯುತ್ತಾರೆ.

ಒಟ್ಟಾರೆ ಭಾರತ ಹಳ್ಳಿಗಳ ದೇಶವಾದ್ದರಿಂದ ಪ್ರತಿಯೊಂದು ಹಳ್ಳಿಗಳಲ್ಲಿಯೂ ಒಂದೊಂದು ವಿಶಿಷ್ಟತೆ ಇದ್ದೇ ಇರುತ್ತದೆ. ಆಧುನಿಕ ನಾಗರಿಕತೆಯ ಗಾಳಿಬೀಸಿದರೂ ಪರಂಪರಾಗತ ಜಾನಪದೀಯ ಮೌಲ್ಯವನ್ನು ಇನ್ನೂ ಜೀವಂತವಾಗಿ ಉಳಿಸಿಕೊಂಡು ಬಂದಿರುವುದು ಮೆಚ್ಚಲೇಬೇಕಾದ ಸಂಗತಿ. ಕೃಷ್ಣರಾಜನಗರವೂ ಇದಕ್ಕೆ ಹೊರತೇನಲ್ಲ.

ಅಧ್ಯಾಯ – ೬

ಕೃಷಿ – ವ್ಯಾಪಾರ – ವಾಣಿಜ್ಯ – ಉದ್ದಿಮೆಗಳು

ಒಂದು ದೇಶದ ಆರ್ಥಿಕತೆಯ ಪ್ರಗತಿಯನ್ನು ನಿರ್ಧರಿಸುವುದು ಅಲ್ಲಿನ ಕೃಷಿ, ವ್ಯಾಪಾರ, ವಾಣಿಜ್ಯ ಮತ್ತು ಉದ್ಯಮಗಳಿಂದ. ಇವುಗಳಲ್ಲಿ ಬಹುಪಾಲು ಕೃಷಿ. ದೇಶದ ಆರ್ಥಿಕತೆಯ ಬೆನ್ನೆಲುಬಾದ ಕೃಷಿ ಪ್ರಮುಖ ಪಾತ್ರವಹಿಸುವಂತೆ, ಇಲ್ಲಿಯೂ ಕೂಡಾ ಶೇ. ೭೫ರಷ್ಟು ಜನರು ಕೃಷಿಯನ್ನಾಧರಿಸಿದ್ದಾರೆ.

ಕೃಷ್ಣರಾಜನಗರದ ಭೌಗೋಳಿಕ ವಿಸ್ತೀರ್ಣ ೬೮೯೭೬ ಹೆಕ್ಟೇರುಗಳು. ಇದರಲ್ಲಿ ಅರಣ್ಯದ ಪಾಲು ೧೬೬. ಸಾಗುವಳಿಗೆ ಯೋಗ್ಯವಾದ ಭೂಮಿ ೫೩೭೩೪. ಕೆರೆ, ಕಾಲುವೆ, ಕೊಳವೆ ಬಾವಿಗಳಿಂದ ನೀರಾವರಿಗೆ ಒಳಪಡುವ ಭೂಪ್ರದೇಶ ೩೫೭೦೭ ಹೆಕ್ಟೇರುಗಳು. ತಾಲ್ಲೂಕಿನಲ್ಲಿ ಅತಿಸಣ್ಣ, ಸಣ್ಣ, ಅರೆಮಧ್ಯಮ, ದೊಡ್ಡ ರೈತರು ಎಂದು ೪೨೩೦೭ ಹೆಕ್ಟೇರ್‌ಗೆ, ಒಟ್ಟು ಕೃಷಿ ಕಾರ್ಮಿಕರು ೨೯೨೮೧.

ಭೂಮೇಲ್ಮೈ ಲಕ್ಷಣ, ಮಣ್ಣು, ವಾಯುಗುಣ ಮತ್ತು ನೀರಾವರಿ ಸೌಲಭ್ಯಗಳಿಗೆ ಅನುಗುಣವಾಗಿ ತಾಲ್ಲೂಕಿನ ಕೃಷಿಯಲ್ಲಿ ವೈವಿಧ್ಯತೆಯನ್ನು ಕಾಣಬಹುದು. ಬತ್ತ ಇಲ್ಲಿನ ಪ್ರಮುಖ ಆಹಾರಬೆಳೆಯಾದರೆ, ಕಬ್ಬು, ರೇಷ್ಮೆ ಮತ್ತು ಹೊಗೆಸೊಪ್ಪು ಇಲ್ಲಿನ ವಾಣಿಜ್ಯ ಬೆಳೆಗಳಾಗಿವೆ. ಬೇಸಗೆಯ ಬೆಳೆಗಳಲ್ಲಿ ರಾಗಿ, ಜೋಳ, ಎಳ್ಳು, ಹಲಸಂದೆ, ಹುರುಳಿ ಸೇರಿದಂತೆ ಅನೇಕ ಬೆಳೆಗಳನ್ನು ಬೆಳೆಯಲಾಗುತ್ತದೆ. ಇನ್ನುಳಿದಂತೆ ತೆಂಗು, ಬಾಳೆ, ಅಡಿಕೆ ಮತ್ತು ವೀಳ್ಯೆದೆಲೆ ತೋಟದ ಬೆಳೆಗಳಾಗಿವೆ. ತಾಲ್ಲೂಕಿನ ಒಟ್ಟು ಬಿತ್ತನೆಯಾಗುವ ನಿವ್ವಳ ಪ್ರದೇಶ ಶೇ. ೬೦ರಷ್ಟು ಶೇ. ೭೦ರಷ್ಟು ಬತ್ತವನ್ನು ಬೆಳೆಯುವುದರಿಂದ 'ಬತ್ತದ ಕಣಜ'ವೆಂಬ ಹೆಸರು ಪಡೆದಿದೆ. ತಾಲ್ಲೂಕಿನ ಕೆಲಭಾಗಗಳಲ್ಲಿ ಬತ್ತವನ್ನು ವರ್ಷಕ್ಕೆ ಎರಡು ಫಸಲು ಬೆಳೆಯುವುದು ಕಂಡುಬರುತ್ತದೆ. ರೇಷ್ಮೆ ಮತ್ತು ಕಬ್ಬು ಪ್ರಮುಖ ವಾಣಿಜ್ಯ ಬೆಳೆಗಳಾಗಿದ್ದು ಇತ್ತೀಚೆಗೆ ಇದರ ಸ್ಥಾನವನ್ನು ಹೊಗೆಸೊಪ್ಪು ಆಕ್ರಮಿಸಿದೆ. ಒಂದು ಕಾಲದಲ್ಲಿ ರೇಷ್ಮೆ ಬೆಳೆಯುವ ಜಿಲ್ಲೆಯಲ್ಲಿಯೇ ಅರೇ ಹೆಚ್ಚು ಬೇಸಾಯದ ಬೆಳೆಯಾಗಿತ್ತು. ಆದರೆ ಕ್ರಮೇಣ ಕುಂಠಿತಗೊಂಡಿತು. ರೇಷ್ಮೆ ಕೃಷಿಕರಿಗೆ ತಮ್ಮ ಗೂಡುಗಳನ್ನು ಮಾರಾಟ ಮಾಡಲು ಮಾರುಕಟ್ಟೆಯ ಸೌಲಭ್ಯವಿಲ್ಲದೆ ನೆರೆಹೊರೆಯ ದೂರದ ಪ್ರದೇಶಗಳಿಗೆ ಒಯ್ಯಬೇಕಾಗಿತ್ತು.

ತಾಲ್ಲೂಕಿನ ವ್ಯಾಪಾರ ಮತ್ತು ವಾಣಿಜ್ಯವಾಗಲಿ ಅಷ್ಟೇನು ಮಹತ್ವವಿಲ್ಲ–ವೆನ್ನಬಹುದು. ನಗರದ ಬಜಾರ್ ರಸ್ತೆ ಮತ್ತು ವಾಣಿವಿಲಾಸ ರಸ್ತೆಗಳು ಪ್ರಮುಖ

ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರಗಳಾಗಿವೆ. ಗ್ರಾಮೀಣ ಭಾಗದ ಜನರು ತಮ್ಮ ಅವಶ್ಯಕ ಸಾಮಾಗ್ರಿಗಾಗಿ ಪಟ್ಟಣಕ್ಕೆ ಬರುತ್ತಾರೆ. ತಾಲ್ಲೂಕಿನಲ್ಲಿ ಪ್ರತಿ ಶುಕ್ರವಾರ ಸಂತೆ ನಡೆಯುತ್ತದೆ. ರೈತರು ತಾವು ಬೆಳೆದ ತರಕಾರಿಯನ್ನು ಮಾರಾಟ ಮಾಡುವುದರಿಂದ ನಗರ ಪ್ರದೇಶಗಳವರು ಅಂದು ರೈತರಿಂದ ನೇರವಾಗಿ ಕೊಂಡುಕೊಳ್ಳುವ ಸಂಭ್ರಮ. ಇನ್ನುಳಿದಂತೆ ರೈತಸಂಪರ್ಕ ಕೇಂದ್ರಗಳಾಗಿ ಕಸಬಾ, ಹೆಬ್ಬಾಳು, ಚುಂಚನಕಟ್ಟೆ, ಮಿರ್ಲೆ, ಸಾಲಿಗ್ರಾಮ ಮತ್ತು ಹೊಸ ಅಗ್ರಹಾರಗಳಲ್ಲಿ ಮಾರಾಟಕೇಂದ್ರಗಳಿವೆ. ರೈತರ ಬೆಳೆಗಳನ್ನು ಕೃಷಿ ಇಲಾಖೆಯಿಮದಲೇ ಮಾರುಕಟ್ಟೆ ವ್ಯವಸ್ಥೆಯ ಮೂಲಕ ಕೊಂಡುಕೊಳ್ಳುವಂತಹ ಅವಕಾಶನೀಡಿದೆ. ಆದರೆ ರೈತರು ಹೆಚ್ಚಿನ ಲಾಭಾಂಶದ ಆಸೆಯಿಂದ ಹೊರ ಊರುಗಳಿಗೆ ತಂದು ಮಾರಾಟಮಾಡುವರು. ದ್ವಿದಳ ಧಾನ್ಯಗಳಲ್ಲಿ ಹಲಸಂದೆ ಮತ್ತು ಹುರುಳಿ, ತೊಗರಿ, ಹೆಸರು ಉದ್ದು ಬೇಸಗೆ ಫಸಲುಗಳನ್ನಾಗಿ ಬೆಳೆಯುವುದು ಕಂಡುಬರುತ್ತದೆ. ಇವುಗಳನ್ನು ನಗರಪ್ರದೇಶದ ಅಂಗಡಿಗೆ ಮಾರಾಟ ಮಾಡುವರು. ಕುಪ್ಪೆ, ಅರ್ಜುನಹಳ್ಳಿ, ಸಾಲಿಗ್ರಾಮ, ಮಿರ್ಲೆ ಮತ್ತು ಬೇರ್ಯಗಳಲ್ಲಿ ವಾರದ ಸಂತೆಗಳು ನಡೆಯುತ್ತದೆ. ಸಾಮಾನ್ಯ ರೈತರು ಈ ವಾರದ ಸಂತೆಗಳಂದು ತಮ್ಮಲ್ಲಿ ಬೆಳೆದ ಅತ್ಯಲ್ಪ ಪ್ರಮಾಣದ ಕೃಷಿ ಉತ್ಪನ್ನಗಳನ್ನು ಮಾರಿ ತಮ್ಮ ನಿತ್ಯ ಬಳಕೆಯ ಸರಕುಗಳನ್ನು ಕೊಳ್ಳುವರು. ಅರ್ಜುನಳ್ಳಿಯ ಮಂಗಳವಾರದ ಸಂತೆಯಂದು ನಡೆಯುವ ಜಾನುವಾರಗಳ ಮಾರಾಟಕ್ಕಾಗಿ ಹೊರಜಿಲ್ಲೆಗಳಿಂದ ರೈತರು ಒಂದು ಹೆಚ್ಚಾಗಿ ಕುರಿಯ ವ್ಯಾಪಾರವನ್ನು ನಡೆಸುವರು. ತಾಲ್ಲೂಕಿನಲ್ಲಿರುವ ೮ ವಾಣಿಜ್ಯ ಮತ್ತು ೯ ಸಹಕಾರಿ ಗ್ರಾಮೀಣ ಬ್ಯಾಂಕುಗಳಿದ್ದು, ರೈತರಿಗೆ ಸಕಾಲಕ್ಕೆ ಸಾಲಸೌಲಭ್ಯವನ್ನು ನೀಡಿ ಅವರ ಸರ್ವೋತೋಮುಖ ಅಭಿವೃದ್ಧಿಗೆ ಸಹಕಾರಿಯಾಗಿದೆ.

ಕೃಷ್ಣರಾಜನಗರ ತಾಲ್ಲೂಕು ಕೃಷಿಪ್ರಧಾನವಾದುದರಿಂದ ಹೆಚ್ಚು ಜನರು ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನಾಧರಿಸುವರು. ಆ ಕಾರಣಕ್ಕಾಗಿ ತಾಲ್ಲೂಕಿನಲ್ಲಿ ಹೇಳಿಕೊಳ್ಳುವಂತಹ ಯಾವುದೇ ಬೃಹತ್ ಉದ್ಯಮದ ಕೈಗಾರಿಕೆಗಳು ಇಲ್ಲಿ ಕಂಡುಬರುವುದಿಲ್ಲ. ಇರುವುದರಲ್ಲಿ ಒಂದು ಸಕ್ಕರೆ ಕೈಗಾರಿಕೆ ಮತ್ತು ಕಾಗದದ ಕೈಗಾರಿಕೆಯೇ ತಾಲ್ಲೂಕಿನ ಪ್ರಮುಖ ಉದ್ದಿಮೆಗಳು.

೧೯೭೭ರಲ್ಲಿ ಪ್ರಾರಂಭವಾದ ಒಂದು ಸಕ್ಕರೆ ಕಾರ್ಖಾನೆಯು ಇಂದಿನವರೆಗೆ ಹಲವು ಸಮಸ್ಯೆಗಳನ್ನು ಎದುರಿಸುತ್ತಾ ಸಾಗಿ ಬಂದಿದೆ. ಕೃಷ್ಣರಾಜನಗರದ ಪ್ರಮುಖ ಉದ್ಯಮ ಎನ್ನಬಹುದು. ಆರಂಭದಲ್ಲಿ ೫೦ ಕಾರ್ಮಿಕರನ್ನು ಒಳಗೊಂಡು ಪ್ರಸ್ತುತ ೪೫೦ ಕಾಮಿಕರನ್ನು ಒಳಗೊಂಡಿದೆ. ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ಎಂಬ

ಹೆಸರಿನೊಂದಿಗೆ ಕಾರ್ಖಾನೆ ನಡೆದುಬಂದಿದ್ದು, ಇತ್ತೀಚಿನ ಕೆಲವು ವರ್ಷಗಳಲ್ಲಿ ಹಲವಾರು ತಾಂತ್ರಿಕ ಕಾರಣಗಳಿಂದ ನಷ್ಟದಲ್ಲಿದ್ದ ಕಾರಣ ಚೆನ್ನೈ ಮೂಲದವರೊಬ್ಬರು ಸದರಿ ಕಾರ್ಖಾನೆಯನ್ನು ಭೋಗ್ಯಕ್ಕೆ ಪಡೆದು ಅಂಬಿಕಾ ಷುಗರ್ಸ್ ಎಂದು ನಾಮಕರಣದೊಂದಿಗೆ ಚುಂಚನಕಟ್ಟೆಯಲ್ಲಿ ಕಂಡುಬರುತ್ತದೆ. ಈ ಕಾರ್ಖಾನೆಯು ದಿನವೊಂದಕ್ಕೆ ೧೨೫೦ ಟನ್ ಸಕ್ಕರೆಯನ್ನು ಉತ್ಪಾದಿಸುವ ಸಾಮರ್ಥ್ಯವಿದೆ. ಸುತ್ತಮುತ್ತಲಿನ ಗದ್ದೆಗಳಿಂದ ಸಾಕಷ್ಟು ಕಬ್ಬು ಉತ್ಪಾದನೆಯಿದ್ದರೆ ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಮತ್ತಿತರರ ಸಮಸ್ಯೆ ಹಾಗೇ ಹೊಗೆಸೊಪ್ಪು ಹೆಚ್ಚಾಗಿ ಬೆಳೆಯುತ್ತಿರುವುದರಿಂದ ವರ್ಷದಲ್ಲಿ ಎಂಟುತಿಂಗಳು ಮಾತ್ರ ಕಬ್ಬು ಅರೆಯುವ ಕಾರ್ಯ ನಡೆಯುವುದು. ತಾಲ್ಲೂಕಿನಿಂದ ಕಬ್ಬು ಸರಬರಾಜು ಕುಂಠಿತಗೊಂಡಾಗ ಹೊರಜಿಲ್ಲೆಯ ಕಡೆಯಿಂದ ಕಬ್ಬನ್ನು ಪಡೆದುಕೊಳ್ಳಲಾಗುತ್ತದೆ.

ಕೃಷ್ಣರಾಜನಗರದಿಂದ ಹುಣಸೂರಿಗೆ ಹೋಗುವ ಮಾರ್ಗದಲ್ಲಿ "ಅಸೋಸಿಯೇಟೆಡ್ ಪೇಪರ್ ಮತ್ತು ಸ್ಟ್ರಾಬೋರ್ಡ್" ಕಾಗದದ ಕಾರ್ಖಾನೆಯೊಂದು ೧೯೭೭ರಲ್ಲಿ ಸ್ಥಾಪನೆಗೊಂಡಿರುವ ಸಣ್ಣಪ್ರಮಾಣದ ಉದ್ದಿಮೆ. ವೇಸ್ಟ್‌ಪೇಪರ್ ಮತ್ತು ಬಿಸಾಡುವಂತಹ ವಸ್ತುವನ್ನೇ ಕಚ್ಚಾಪದಾರ್ಥವನ್ನು ಬಳಸಿಕೊಮಡು ಕ್ರಾಫ್ಟ್‌ಪೇಪರ್ ತಯಾರಿಸಲಾಗುತ್ತದೆ. ಇಲ್ಲಿ ತಯಾರಿಸಿದ ಕ್ರಾಫ್ಟ್‌ಪೇಪರನ್ನು ಶಿವಕಾಶಿ, ಚೆನ್ನೈ, ಮೈಸೂರು, ಮಂಗಳೂರು, ಕೇರಳಗಳಿಗೆ ಕಳಿಸಲಾಗುತ್ತದೆ.

ಚುಂಚನಕಟ್ಟೆಯ ಸೇತುವೆ ಬಳಿ 'ಗ್ರಾಫೈಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್' ಕಂಪನಿಯವರು ಜಲವಿದ್ಯುದ್‌ಗಾರವೊಮದು ಸ್ಥಾಪನೆಯಾಗಿದೆ. ಮಳೆಗಾಲದಲ್ಲಿ ಹೆಚ್ಚಾಗಿ ನೀರು ಬಂದಾಗ ಮಾತ್ರ ತನ್ನ ಕಾರ್ಯವನ್ನು ಪ್ರಾರಂಭಿಸಿ, ಇಲ್ಲಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ಬೆಂಗಳೂರು ಮತ್ತು ಇತರ ಕಡೆಗೆ ಸರಬರಾಜು ಮಾಡಲಾಗುವುದೆಂದು ತಿಳಿದುಬಂದಿದೆ.

ಬತ್ತದ ಕಣಜವೆಂದು ಖ್ಯಾತಿ ಪಡೆದ ಕೃಷ್ಣರಾಜನಗರ ಆರಂಭದಲ್ಲಿ ತಾಲ್ಲೂಕಿನಾದ್ಯಂತ ೬೦ಕ್ಕೂ ಹೆಚ್ಚು ಅಕ್ಕಿಗಿರಣಿಗಳನ್ನು ಹೊಂದಿದ್ದು, ನಗರದಲ್ಲಿಯೇ ೧೨ ಅಕ್ಕಿಗಿರಣಿಗಳು ಕೇಂದ್ರಿತವಾಗಿತ್ತು. ಇತ್ತೀಚಿನ ದಿನಗಳಲ್ಲಿ ಇಲ್ಲಿ ಬೆಳೆದ ಬತ್ತವನ್ನು ಹೊರರಾಜ್ಯಕ್ಕೆ ಮಾರಾಟಮಾಡುವುದು, ಹೆಚ್ಚು ಬೆಲೆ ಇದ್ದಾಗ ಮಾತ್ರ ಮಾರಾಟ ಮಾಡುವುದರಿಂದ ಅನೇಕ ಗಿರಣಿಗಳು ಸ್ಥಗಿತಗೊಂಡು ಕಲ್ಯಾಣಮಂಟಪಗಳಾಗಿ

ಪರಿವರ್ತನೆಗೊಂಡಿದೆ. ಅಲ್ಲದೆ ವಿದ್ಯುತ್ ಸಮಸ್ಯೆಯಿಂದ ಕೆಲಗಿರಣಿಗಳು ವರ್ಷದ ಕೆಲದಿನಗಳು ಮಾತ್ರ ಕಾರ್ಯನಿರ್ವಹಿಸುತ್ತದೆ.

ಮೈಸೂರು ರಸ್ತೆಯಲ್ಲಿ ಇದ್ದ (ಕುಂಬಾರ ಕೊಪ್ಪಲು ಬಳಿ) "ಎಸ್ಕೋ ಫರ್ ಫ್ಯೂಮ್ಸ್" ಎಂಬ ಸಣ್ಣಪ್ರಮಾಣದ ಸುಗಂಧ ದ್ರವ್ಯ ಉದ್ದಿಮೆ ಪ್ರಾರಂಭವಾಯಿತಾದರೂ ಒಂದೇ ವರ್ಷದಲ್ಲಿ ಸ್ಥಗಿತಗೊಂಡಿತು. ಚೆನ್ನೈ ಮೂಲದವರೊಬ್ಬರು ೨೦ ಮಂದಿ ಕಾರ್ಮಿಕರೊಂದಿಗೆ ಪ್ರಾರಂಭಿಸಿದ ಕಾರ್ಖಾನೆಯೂ, ಇಲ್ಲಿ ತಯಾರಿಸಲಾದ ಸುಗಂಧದ್ರವ್ಯವನ್ನು ಬೆಂಗಳೂರು, ಮಂಗಳೂರು ಮತ್ತಿತರರ ಕಡೆ ಕಳುಹಿಸಲಾಗುತ್ತಿತ್ತು. ಸದ್ಯಕ್ಕೆ ಅದು ಸ್ಥಗಿತಗೊಂಡಿದೆ.

ಮೈಸೂರು ರಸ್ತೆಯ ಅರಕೆರೆ ಎಂಬಲಲ್ಲಿ ಬೃಹತ್ ಕೋಳಿಸಾಗಾಣಿಕೆಯ ಕೇಂದ್ರಗಳಿದ್ದು ಇಲ್ಲಿ ಸಾಕಿದ ಕೋಳಿಗಳನ್ನು ಮತ್ತು ಮೊಟ್ಟೆಗಳನ್ನು ಹೊರಜಿಲ್ಲೆಗಳಿಗೆ ಸರಬರಾಜು ಮಾಡಲಾಗುತ್ತದೆ. ನಗರದ ಕಾಲೇಜು ಹಿಂಭಾಗ ತುಂಬಾ ಹಳೆಯ ಹತ್ತಿ ಶುದ್ಧೀಕರಿಸುವ ಉದ್ದಿಮೆ ಇದ್ದೂ, ಕಚ್ಚಾಹತ್ತಿಯನ್ನು ಪಡೆದು ಅದನ್ನು ಶುದ್ಧೀಕರಿಸಿ ಮಾರಾಟ ಮಾಡುವ ಸಣ್ಣ ಉದ್ಯಮವಾಗಿದೆ.

ನಗರದ ಬೆಳವಣಿಗೆಗೆ ಅಲ್ಲಿರುವ ಬೃಹತ್ ಉದ್ದಿಮೆಗಳು ಕಾರಣ. ದೊಡ್ಡ ದೊಡ್ಡ ಕೈಗಾರಿಕೆಗಳಿದ್ದಲ್ಲಿ, ಸಾವಿರಾರು ಉದ್ಯೋಗಿಗಳನ್ನು ಒಳಗೊಂಡು ಕೈಗಾರಿಕೋದ್ಯಮಗಳಿಂದ ನಗರದ ಆರ್ಥಿಕ ಬೆಳವಣಿಗೆಗೆ ಕಾರಣವಾಗಬಲ್ಲದು. ಆದರೆ ಕೃಷ್ಣರಾಜನಗರದಲ್ಲಿ ಹೇಳಿಕೊಳ್ಳುವಂತಹ ಯಾವುದೇ ಬೃಹತ್ ಉದ್ಯಮ ಕಂಡುಬರುವುದಿಲ್ಲ. ಇದರಿಂದ ಆರ್ಥಿಕವಾಗಿ ಸ್ವಲ್ಪ ಹಿನ್ನೆಡೆಯೆನ್ನಬಹುದು. ಇಲ್ಲಿ ಹೆಚ್ಚಾಗಿ ಬೆಳೆಯುವ ರೇಷ್ಮೆ ಮತ್ತು ಹೊಗೆಸೊಪ್ಪು ಮಾರಾಟಕ್ಕೆ ಸೂಕ್ತ ಮಾರುಕಟ್ಟೆ ಇಲ್ಲದೆ, ಹೊರಜಿಲ್ಲೆಗಳಿಗೆ ಹೋಗಬೇಕಾಗಿದೆ. ನಗರ ಮತ್ತು ಗ್ರಾಮೀಣ ಭಾಗದ ಯುವಕರು ಕೆಲಸವನ್ನರಸಿ ಮೈಸೂರು ಮತ್ತು ಬೆಂಗಳೂರು ಕಡೆ ವಲಸೆ ಹೋಗುವಂತಾಗಿದೆ. ಇದನ್ನು ತಪ್ಪಿಸಬೇಕಾದರೆ ನಗರಕ್ಕೆ ಒಂದೆರಡು ಬೃಹತ್ ಕೈಗಾರಿಕೆಗಳು ಮತ್ತು ಮಾರುಕಟ್ಟೆ ವ್ಯವಸ್ಥೆ ಅನಿವಾರ್ಯವಾಗಿದೆ.

ಮಾಹಿತಿ ಕೃಪೆ

೧. ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ, ಕೃಷ್ಣರಾಜನಗರ

೨. ಕ್ಷೇತ್ರ ಪರಿವೀಕ್ಷಕರು, ಶ್ರೀರಾಮ ಸಹಕಾರ ಸಕ್ಕರ ಕಾರ್ಖಾನೆ, ಕೃಷ್ಣರಾಜನಗರ

ಅಧ್ಯಾಯ – ೭

ಎಡತೊರೆಯ ರಾಜಕೀಯ ಕ್ಷೇತ್ರ – ಸ್ಥೂಲ ವಿಶ್ಲೇಷಣೆ

ಮೈಸೂರು ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಕೃಷ್ಣರಾಜನಗರ ಚಾರಿತ್ರಿಕ, ಐತಿಹಾಸಿಕ ಮತ್ತು ರಾಜಕೀಯವಾಗಿ ಅಭಿವೃದ್ಧಿಯ ಪಥದಲ್ಲಿರುವ ನಗರವಾಗಿದೆ. ೧೯೩೪ರಿಂದ ನುತನ ನಗರಕ್ಕೆ ಅಡಿಇಟ್ಟ ಮೇಲೆ ರಾಜಕೀಯವಾಗಿ ಅನೇಕ ಸ್ಥಿತ್ಯಂತರಗಳ ನಡುವೆ ಒಂದು ಪ್ರಬುದ್ಧ ನೆಲೆಯಾಗಿ ರೂಪುಗೊಂಡಿದೆ.

ಹೊಸನಗರಕ್ಕೆ ಬರುವ ಮೊದಲು "ಹೊಸನಗರ ನಿರ್ಮಾಣ ಸಮಿತಿ" ಎಂಬ ಸಮಿತಿ ೧೯೨೬ರಲ್ಲಿ ಅಸ್ತಿತ್ವದಲ್ಲಿತ್ತು. ಸರಕಾರಿ ಅಧಿಕಾರಿಗಳಾದ ಶ್ರೀ ಎ.ವಿ.ರಾಮ-ನಾಥನ್‌ನವರ ಅಧ್ಯಕ್ಷತೆಯಲ್ಲಿ ಅನೇಕ ಸದಸ್ಯರಾದರು. ಮಾಸ್ತಿಯವರು ಈ ಸಮಿತಿಯ ಅಧ್ಯಕ್ಷರಾಗಿದ್ದು ಸೇವೆಸಲ್ಲಿಸಿರುವುದು ಹೆಮ್ಮೆಯ ಸಂಗತಿ. ೧೯೩೪ರಲ್ಲಿ ಅಧಿಕೃತವಾಗಿ ನೂತನ ನಗರ ಉದ್ಘಾಟನೆಯಾಯಿತು. ೧೯೩೬ರಲ್ಲಿ ಈ ಸಮಿತಿ ಮುನ್ಸಿಪಲ್ ಕೌನ್ಸಿಲ್ ಆಗಿ ಪರಿವರ್ತನೆ ಆಗಿ ಬಿ.ವೆಂಕಟರಾಮರಾವ್ ಅಧ್ಯಕ್ಷ, ವೈ.ವಿ.ಗುಂಡುರಾವ್ ಉಪಾಧ್ಯಕ್ಷರಾದರು. ೧೯೪೬ರವರೆಗೆ ಸರ್ಕಾರಿ ಅಧಿಕಾರಿಗಳೆ ಅಧ್ಯಕ್ಷರಾಗಿ ಕಾರ್ಯ-ನಿರ್ವಹಿಸುತ್ತಿದ್ದರು. ಪ್ರಥಮ ಬಾರಿಗೆ ನಗರದ ನಾಗರಿಕ ಪ್ರತಿನಿಧಿಗಳಾದ ಶ್ರೀ ಬಳೆ ಬಸವರಾಜಪ್ಪನವರು ೧೯೪೬ರಲ್ಲಿ ಪುರಸಭಾ ಅಧ್ಯಕ್ಷರಾದರು. ಅಲ್ಲಿಂದ ಇಲ್ಲಿಯವರೆಗೆ ಸುಮಾರು ೩೦ಕ್ಕೂ ಹೆಚ್ಚು ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಕಂಡು ಕೃಷ್ಣರಾಜನಗರದ ಏಳಿಗೆಯಲ್ಲಿ ಪುರಸಭೆಯು ಮಹತ್ವದ ಪಾತ್ರವಹಿಸಿದೆ.

ಕೃಷ್ಣರಾಜನಗರ ತಾಲ್ಲೂಕಿನ ಒಟ್ಟು ವಿಸ್ತೀರ್ಣ ೬೦೫.೨ ಚ.ಕೀ.ಗಳು. ಈ ತಾಲ್ಲೂಕು ೧೮೦ ಗ್ರಾಮಗಳನ್ನು ಒಳಗೊಂಡಿದೆ. ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ ೬ ಹೋಬಳಿ ಕೇಂದ್ರಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ ಸಾಲಿಗ್ರಾಮ, ಮಿರ್ಲೆ, ಹೊಸ ಅಗ್ರಹಾರ, ಚುಂಚನಕಟ್ಟೆ, ಹೆಬ್ಬಾಳು ಮತ್ತು ಕಸಬಾ ಹೋಬಳಿಗಳು, ಅಧಿಕಾರ ವಿಕೇಂದ್ರೀಕರಣದ ನಿಮಿತ್ತ ೩೧ ಗ್ರಾಮ ಪಂಚಾಯ್ತಿಗಳು ಹಾಗೂ ೨೦ ತಾಲ್ಲೂಕು ಪಂಚಾಯಿತಿಗಳನ್ನು ೬ ಜಿಲ್ಲಾಪಂಚಾಯ್ತಿ ಕ್ಷೇತ್ರಗಳನ್ನು ಒಳಗೊಂಡಿದೆ.

ತಾಲ್ಲೂಕಿನ ಜನ ನಗರ ಮತ್ತು ಗ್ರಾಮೀಣ ಭಾಗದಲ್ಲಿ ರಾಜಕೀಯ ವಿಚಾರದಲ್ಲಿ ಹೆಚ್ಚು ಆಸಕ್ತಿಯುಳ್ಳವರು. ಚುನಾವಣದ ಸಮಯ ಬಂತೆಂದರೆ ಸಾಕು ಅಲ್ಲಲ್ಲಿ ಗುಂಪುಗುಂಪಾಗಿ ನಿಂತು ರಾಷ್ಟ್ರ, ರಾಜ್ಯ ರಾಜಕರಣದ ಬಗ್ಗೆ ಹರಟೆ ಶುರುಮಾಡುತ್ತಾರೆ.

"ನಮಗೆ ರಾಜಕೀಯದಲ್ಲಿ ಹೆಚ್ಚು ಆಸಕ್ತಿ. ಮಳೆಗಾಲ, ನಾಟಿ, ಕೊಯ್ಲು ಸಂದರ್ಭದಲ್ಲಿ ನಮ್ಮ ದೃಷ್ಟಿ ವರ್ಷಪೂರ್ತಿ ತುತ್ತಿನ ಚೀಲ ತುಂಬಿಸುವ ಹೊಲಗದ್ದೆಗಳ ಕಡೇ ನಮ್ಮ ಮಾತುಕತೆ. ಯಾರೇ ಗೆದ್ದರೂ ನಮ್ಮೂರಿನವರಲ್ಲವೇ, ನಮ್ಮ ಸೇವೆಗೆ ತಾನೇ ಅವರು ನಂಜಪ್ಪನವರು, ವಿಶ್ವನಾಥ್‌ರವರು ಮತ್ತು ಸಾ.ರಾ.ಮಹೇಶ್‌ರ ಕೆಲಸಗಳ ಬಗ್ಗೆ ತಮ್ಮದೇ ರೀತಿಯಲ್ಲಿ ಮಾತನಾಡುತ್ತಾ ಇರುತ್ತೇವೆ. ನಮ್ಮೂರ ಪಂಚಾಯ್ತಿಯಲ್ಲಿ ಕೆಲಸಕಾರ್ಯಕ್ಕಾಗಿ ಶಾಸಕರ ಜೊತೆ ಗುರುತಿಸಿಕೊಳ್ಳುತ್ತೇವೆ"[೧]

ಕೃಷ್ಣರಾಜನಗರದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತರು, ಜೈನರು ಮತ್ತು ವಿವಿಧ ಜಾತಿಗಳವರು ಸಾಕಷ್ಟು ಸಂಖ್ಯೆಯಲ್ಲಿದ್ದೂ, ರಾಜಕೀಯದಲ್ಲಿ ತಮ್ಮದೇ ಆದ ನಿಲುವು ಮತ್ತು ಮತ ಇವೆಲ್ಲವು ಚುನಾವಣೆಯ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ.

೧೯೫೨ರಿಂದ ಇಲ್ಲಿಯವರೆಗೆ (೨೦೧೧) ಕೃಷ್ಣರಾಜನಗರದಿಂದ ಅನೇಕ ಧುರೀಣರು ವಿಧಾನಸಭೆ, ವಿಧಾನಪರಿಷತ್ ಮತ್ತು ಲೋಕಸಭೆಗೆ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದಾರೆ. ಕೃಷ್ಣರಾಜನಗರ ೧೯೫೨ರಿಂದ ಮೈಸೂರು ಲೋಕಸಭಾಕ್ಷೇತ್ರಕ್ಕೆ ಸೇರಿದ್ದು, ಕ್ಷೇತ್ರ ಪುನರ್‌ವಿಂಗಡಣೆ ಆದನಂತರ ಮಂಡ್ಯ ಲೋಕಸಭೆಗೆ ಸೇರಿದೆ.

ಕೃಷ್ಣರಾಜನಗರದಿಂದ ಚುನಾಯಿತರಾದ ಜನಪ್ರತಿನಿಧಿಗಳು

೧. ಶ್ರೀ ತಮ್ಮಯ್ಯನವರು ಶಾಸಕರು – ಪಕ್ಷೇತರ (೧೯೫೨)

೨. ಶ್ರೀ ಹೆಚ್.ಎಂ.ಚನ್ನಬಸಪ್ಪ ಶಾಸಕರು – ಕಾಂಗ್ರೆಸ್ (೧೯೫೬)

೩. ಶ್ರೀ ಡಾ. ಕೆ.ಎಸ್.ಗೌಡಯ್ಯ ಶಾಸಕರು – ಪಕ್ಷೇತರ (೧೯೬೨)

೪. ಶ್ರೀ ಬಸವರಾಜು ಶಾಸಕರು – ಪಕ್ಷೇತರ (೧೯೬೭)

೫. ಶ್ರೀ ಹೆಚ್.ಬಿ.ಕೆಂಚೇಗೌಡ ಶಾಸಕರು – ಕಾಂಗ್ರೆಸ್ (೧೯೭೨)

೬. ಶ್ರೀ ಹೆಚ್.ವಿಶ್ವನಾಥ್ ಶಾಸಕರು – ಕಾಂಗ್ರೆಸ್ (೧೯೭೮)

---

೧. ಕೆ.ಸಿ.ಪರಮೇಶ್, ಮಾಜಿ ಗ್ರಾಮಪಂಚಾಯತ್ ಅಧ್ಯಕ್ಷರು, ಕಲ್ಯಾಣಪುರ, ಕೃಷ್ಣರಾಜನಗರ.

೭. ಶ್ರೀ ಎಸ್.ನಂಜಪ್ಪ – ಜನತಾಪಕ್ಷ (೧೯೮೩)
ಶಾಸಕರು

೮. ಶ್ರೀ ಎಸ್.ನಂಜಪ್ಪ – ಜನತಾಪಕ್ಷ (೧೯೮೫)
ಶಾಸಕರು

೯. ಶ್ರೀ ಹೆಚ್.ವಿಶ್ವನಾಥ್ – ಕಾಂಗ್ರೆಸ್ (೧೯೮೯)
ಶಾಸಕರು

೧೦. ಶ್ರೀ ಎಸ್.ನಂಜಪ್ಪ – ಜನತಾದಳ (೧೯೯೪)
ಶಾಸಕರು

೧೧. ಶ್ರೀ ಹೆಚ್.ವಿಶ್ವನಾಥ್ – ಕಾಂಗ್ರೆಸ್ (೧೯೯೯)
ಶಾಸಕರು

೧೨. ಶ್ರೀ ಮಂಚನಹಳ್ಳಿ ಮಹಾದೇವ – ಜನತಾದಳ (೨೦೦೪)
ಶಾಸಕರು

೧೩. ಶ್ರೀ ಸಾ.ರಾ.ಮಹೇಶ್ – ಜನತಾದಳ (೨೦೦೮)
ಶಾಸಕರು

೧. ಶ್ರೀ ಬಸವರಾಜು – ಲೋಕಸಭಾ ಸದಸ್ಯರು

೨. ಶ್ರೀ ಹೆಚ್.ವಿಶ್ವನಾಥ್ – ಲೋಕಸಭಾ ಸದಸ್ಯರು

೩. ಶ್ರೀ ಚಲುವರಾಯಸ್ವಾಮಿ – ಲೋಕಸಭಾ ಸದಸ್ಯರು

೧. ಶ್ರೀ ಟಿ.ಕೆ.ಚಿನ್ನಸ್ವಾಮಿ – ಶಾಸಕರು (೧೯೮೮–೧೯೯೪)
ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್

೨. ಶ್ರೀ ಕೆ.ಸಿ.ಪುಟ್ಟಸಿದ್ದಶೆಟ್ಟಿ – ಶಾಸಕರು (೧೯೯೪–೨೦೦೦)
ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್

೩. ಶ್ರೀ ತೋಂಟದಾರ್ಯ – ಶಾಸಕರು (೨೦೦೭)
ವಿಧಾನಪರಿಷತ್ ಸದಸ್ಯರು

ಇವರಲ್ಲಿ ಲೋಕಸಭೆಯ ಸದಸ್ಯರಾದ ಶ್ರೀ ಹೆಚ್.ವಿಶ್ವನಾಥ್‌ರವರು ಕೃಷ್ಣರಾಜ ನಗರದಿಂದ ವಿಧಾನಸಭೆಗೆ ಮೂರುಬಾರಿ ಆಯ್ಕೆಯಾಗಿ ಹಲವು ಸಚಿವ ಖಾತೆಗಳಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಶ್ರೀ ಎಂ.ವೀರಪ್ಪಮೊಯ್ಲಿಯವರ ಸಂಪುಟದಲ್ಲಿ ಕನ್ನಡ ಮತ್ತು ಸಂಸ್ಕೃತಿ, ಅರಣ್ಯ, ಶ್ರೀ ಎಸ್.ಎಂ.ಕೃಷ್ಣ ಸಂಪುಟದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಹಕಾರ ಸಚಿವರಾಗಿ ರಾಜ್ಯ ಮತ್ತು ನಗರಕ್ಕೆ ಅನೇಕ ಅಭಿವೃದ್ಧಿಯ ಕಾರ್ಯವನ್ನು ನಿರ್ವಹಿಸಿದ್ದಾರೆ.

ಎಸ್.ನಂಜಪ್ಪನವರು ಶ್ರೀ ಹೆಚ್.ಡಿ.ದೇವೇಗೌಡರ ಸಂಪುಟದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಯಾಗಿ ನಗರದ ನವರನಗರ ಬ್ಯಾಂಕ್‌ಸ್ಥಾಪನೆಗೆ ಕಾರಣರಾದರು.

ಹೀಗೆ ಈ ತಾಲ್ಲೂಕಿನ ರಾಜಕೀಯ ವಿಮರ್ಶೆ ಏನೇ ಇದ್ದರೂ ಅವರ ಸಾಧನೆ ಬಹುಮುಖವಾಗಿದೆ. ಪ್ರತಿಯೊಬ್ಬನು ಕಲ್ಯಾಣ ಕಾರ್ಯಗಳನ್ನು ನಿರ್ವಹಿಸಿ, ತಾನೂ ಕಲ್ಯಾಣವನ್ನು ಪಡೆಯಬೇಕೆಂಬುದು ಪ್ರತಿಯೊಬ್ಬರ ಆಶಯವಾಗಿದೆ.

ಅಧ್ಯಾಯ - ೮

ತಾಲ್ಲೂಕಿನ ಸಾಹಿತ್ಯ ಮತ್ತು ಪತ್ರಿಕೋದ್ಯಮ

ಒಂದು ರಾಷ್ಟ್ರ ಅಥವಾ ರಾಜ್ಯ ವಿವಿಧತೆಯಲ್ಲಿ ಸಂಪದ್ಭರಿತವಾಗಿದ್ದರೂ ಅಲ್ಲಿನ ಸಂಸ್ಕೃತಿ, ಭಾಷೆ, ಸಾಹಿತ್ಯವೂ ಕೂಡಾ ಒಂದಲ್ಲ ಒಂದು ರೀತಿಯಲ್ಲಿ ಪರಿಣಾಮಕಾರಿಯಾಗಿರುತ್ತದೆ. ಅಲ್ಲಿನ ವಿದ್ವಾಂಸರು, ಸಾಹಿತಿಗಳು, ಬರಹಗಾರರು ಆ ದೇಶದ ಸಂಸ್ಕೃತಿಯ ಶ್ರೀಮಂತಿಕೆಗೆ ಕಾರಣರಾಗಿರುತ್ತಾರೆ. ಅದಕ್ಕೆ ಕೃಷ್ಣರಾಜನಗರ ಹೊರತಲ್ಲ. ಪುರಾಣದ ಇತಿಹಾಸವುಳ್ಳ ಈ ನಗರವೂ ಕೂಡಾ ಅನೇಕ ವಿದ್ವಾಂಸರ, ಸಾಹಿತಿಗಳ ಆಗರವಾಗಿದೆ. ಆ ಒಂದು ಪಕ್ಷಿನೋಟ ಇಂತಿದೆ.

ಪ್ರಾಚೀನರಲ್ಲೆ ಸಂಸ್ಕೃತ ಲಾಕ್ಷಣಿಕ, ಛಂದೋನುಶಾಸನದ ಕರ್ತೃ ಹನಸೋಗೆಯ ಜೈನಮಠಕ್ಕೆ ಸೇರಿದ್ದವನೆಂಬುದು ತಿಳಿದುಬಂದಿದೆ. ಎಡತೊರೆ ಎಂದಾಕ್ಷಣ ಸಾಹಿತ್ಯಾಸಕ್ತರಿಗೆ ತಟ್ಟನೆ ಹೊಳೆಯುವುದು ಎಚ್ಚೆಸ್ಕೆ ಮತ್ತು ಸಿ.ಪಿ.ಕೆಯವರು. ಇವರ ಸಾಹಿತ್ಯ ಸರಸ್ವತಿ ನಗರವಲ್ಲದೆ ಇಡೀ ನಾಡಿಗೆ ಪಸರಿಸಿದೆ. ಇವರಲ್ಲಿ ಸಮೃದ್ಧ ಮತ್ತು ಸಮರ್ಥರೆಂದರೆ ಎಚ್ಚೆಸ್ಕೆಯವರು.

ನಾಲ್ವಡಿ ಕೃಷ್ಣನ ಮೈಸೂರು ಸಂಸ್ಥನದ ಕೃಷ್ಣರಾಜನಗರ ತಾಲ್ಲೂಕಿನ ಹಳೆಯೂರು ಎಂಬ ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯ ಅಧ್ಯಾಪಕರಾಗಿದ್ದ ಶ್ರೀನಿವಾಸ ಅಯ್ಯಾಂಗಾರ್‌ರವರ ಮಗನಾಗಿ ಹುಟ್ಟಿದವರು ಕೃಷ್ಣಸ್ವಾಮಿ ಅಯ್ಯಂಗಾರ್‌ರವರು. ಲೇಖಕ, ಪ್ರಬಂಧಕಾರ, ಕಾದಂಬರಿಕಾರ, ಪತ್ರಿಕೋದ್ಯಮಿ, ಅಂಕಣಕಾರ, ವಿಮರ್ಶಕ, ಅರ್ಥಶಾಸ್ತ್ರಜ್ಞ, ಶಿಕ್ಷಣವೇತ್ತರು. ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿ ಮಾಡಿದವರು. ಲೆಕ್ಕಪತ್ರಗಳನ್ನಿಡುವ ಗುಮಾಸ್ತ, ಪತ್ರಿಕೆಗಳಿಗೆ ವರದಿಗಾರ, ಎಡರನೆ ಮಹಾಯುದ್ಧ ಮತ್ತು ಸ್ವಾತಂತ್ರ್ಯ ಆಂದೋಲನದ ಕೊನೆಯ ಮಜಲಿನ ರೋಮಾಂಚಕಾರಿ ಹೋರಾಟಗಳನ್ನು ತಳಶೋಧನೆಮಾಡಿ ಪತ್ರಿಕೆಗಳಲ್ಲಿ ಪ್ರಕಟಿಸುವ ಎಚ್ಚೆಸ್ಕೆಯವರು ಸಾಹಿತ್ಯ ವಾಣಿಜ್ಯಶಾಸ್ತ್ರ, ಅರ್ಥಶಾಸ್ತ್ರದಲ್ಲಿ ಬಹುಮುಖ ಪ್ರತಿಭೆ. ಅಧ್ಯಯನ ಮತ್ತು ಲೇಖನ ಇವರ ಬದುಕಿನ ಎರಡು ಮುಖಗಳು.

“ರಾಮಾನುಜಚಾರ್ಯ, ಟಾಯ್ನ್‌ಬಿ, ಬರ್ನಲ್‌ರವರನ್ನು ಕುರಿತಂತೆ ಬರೆಯಬಲ್ಲವರು, ಎಫ್.ಆರ್.ಲಿವೀಸ್, ಗುನ್ನಾರ್ ಮಿರ್ದಾಲ್‌ರನ್ನು ಕುರಿತು ಬರೆಯಬಲ್ಲರು. ನವ್ಯಕಾವ್ಯವನ್ನು ವಿವೇಚಿಸುವಷ್ಟು ಸಮರ್ಥವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಸಮಸ್ಯೆಯಾಗಲಿ, ಆಸ್ತಿಯಹಕ್ಕಿನ ಸ್ವರೂಪವನ್ನು ವಿವೇಚಿಸಬಲ್ಲರು.

ಎಚ್ಚೆಸ್ಕೆಯವರ ಸಾಮರ್ಥ್ಯ ದೀರ್ಘಕಾಲದ ಅಧ್ಯಯನ, ಅನುಭವ, ಚಿಂತನ ಬರಹಗಳ ಫಲ"[೧]

ಇವರ ಬೃಹತ್ ಸಾಹಿತ್ಯರಾಶಿಯಲ್ಲಿ ಮುಕ್ತಿಮಾರ್ಗ, ಬಯಕೆಯ ಬೆಲೆ, ಕುರುಕ್ಷೇತ್ರ ಕಾದಂಬರಿ, ಶ್ರೀ ರಾಮಾನುಜ, ಅಂಬೇಡ್ಕರ್, ಜೆ.ಪಿ.ಯವರ ಜೀವನ ಚರಿತ್ರೆ, ಜೇಡನಬಲೆ, ಸುರಹೊನ್ನೆಯಂತಹ ಪ್ರಬಂಧಗಳು, ವ್ಯಾವಹಾರಿಕ ಕನ್ನಡ, ಆಡಳಿತ ಕನ್ನಡ, ವಿಡಂಬನ ಸಾಹಿತ್ಯ, ಭಾರತದ ಭಾಷಾಸಮಸ್ಯೆ ಮೊದಲಾದ ಗ್ರಂಥಗಳು, ದವನದ ಕೊನೆ ಎಂಬ ಕವನಸಂಕಲನ ಹೊರತಂದಿದ್ದಾರೆ.

'ಕನ್ನಡ ವಿಶ್ವಕೋಶ'ವೆಂಬ ಆಕರ ಗ್ರಂಥದ ಮಾನವಿಕ ವಿಭಾಗದ ಸಂಪಾದಕರಾಗಿ, ಮೈಸೂರು ವಿಶ್ವವಿದ್ಯಾನಿಲಯ 'ಮಾನವಿಕ ಕರ್ನಾಟಕ'ದ ಪ್ರೌಢ ಮತ್ತು ಶಾಸ್ತ್ರೀಯ ತ್ರೈಮಾಸಿಕ ಸಂಪಾದಕರಾಗಿ, ಖಾಸಗಿ ವಲಯದ 'ಬ್ಯಾಂಕಿಂಗ್ ಪ್ರಪಂಚ' ಹೀಗೆ ಅನೇಕ ಪತ್ರಿಕೆಗಳಲ್ಲಿ 'ವಾರದ ವ್ಯಕ್ತಿ' ಎಂಬ ಅಂಕಣದಿಂದ ಪ್ರಸಿದ್ಧರಾಗಿ ಕನ್ನಡ ಸಾಹಿತ್ಯವನ್ನು ಜೊತೆಗೆ ನಮ್ಮನಗರದ ಕೀರ್ತಿಯನ್ನು ಬೆಳಗಿಸಿದ್ದಾರೆ. ಇವರನ್ನು ಕುರಿತಂತೆ 'ಎಚ್ಚೆಸ್ಕೆ ಎಪ್ಪತ್ತು', ಸಮದರ್ಶಿ ಎಂಬ ಅಭಿನಂದನ ಗ್ರಂಥಗಳು ಇವರ ಅಭಿಮಾನಿಗಳು ಹೊರತಂದಿರುವರು.

ಸಿ.ಪಿ.ಕೆ. ಎಂದೇ ಚಿರಪರಿಚಿತರಾದ ಸಿ.ಪಿ.ಕೃಷ್ಣಕುಮಾರ್ ಕೃಷ್ಣರಾಜ ನಗರದ ಚಿಕ್ಕನಾಯಕನಹಳ್ಳಿಯವರು. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಯ ಸಾಹಿತ್ಯಗಳಿಗೆ ಅಪಾರಜ್ಞಾನವಿರುವ ಇವರು ಕವಿ, ವಿಮರ್ಶಕ, ಸಂಪಾದಕರು. ಭಾರತೀಯ ವಿದ್ಯಾ-ಭವನದಿಂದ 'ಸಂಸ್ಕೃತ ಕೋವಿದ' ಪದವಿ ಪಡೆದಿದ್ದಾರೆ. ಪ್ರಾಚ್ಯವಿದ್ಯಾ-ಸಂಶೋಧನಾಲಯದಲ್ಲಿದ್ದು ನಂತರ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ಮುಮದೆ ಮಾನಸಗಂಗೊತ್ರಿಯಲ್ಲಿ ರೀಡರ್ ಆಗಿ ಪ್ರಾಧ್ಯಾಪಕರಾಗಿ ನಿವೃತ್ತಿಗೊಮಡರು. 'ನಾಗವರ್ಮನ ಕರ್ನಾಟಕ ಕಾದಂಬರಿ – ಒಂದು ತೌಲನಿಕ ಮತ್ತು ವಿಮರ್ಶಾತ್ಮಕ ಅಧ್ಯಯನ' ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿ ಪಡೆದರು. ವಿಶ್ವವಿದ್ಯಾನಿಲಯ ಪ್ರಕಾಶನ – ಗ್ರಂಥ ಪ್ರಕಟ ಸಮಿತಿಯ ಅಧ್ಯಕ್ಷರಾಗಿ, 'ಪ್ರಬುದ್ಧ ಕರ್ನಾಟಕ' ಸಂಪಾದಕರಾಗಿ, ಪುಸ್ತಕಪ್ರಪಂಚ, ಸಮಗ್ರವಚನ ಸಂಪುಟ, ಗ್ರಂಥಾಲಯ ಪುಸ್ತಕ ಆಯ್ಕೆ ಸಮಿತಿ, ಪಂಪಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದರು. ಅನೇಕ ಸಾಹಿತ್ಯ

---

೧. ಹಾ.ಮಾ.ನಾಯಕ್, ಎಚ್ಚೆಸ್ಕೆಯವರ ಆಯ್ದಬರಹಗಳು, ಎಚ್ಚೆಸ್ಕೆಯವರ ಅಭಿಮಾನ ಬಳಗ, ಮೈಸೂರು, ೧೯೮೧.

ಸಮ್ಮೇಳನ, ಜಾನಪದ ಸಮ್ಮೇಳನ, ಕವಿಗೋಷ್ಠಿಗಳ ಅಧ್ಯಕ್ಷತೆ, ಲಕ್ನೋದಲ್ಲಿ ನಡೆದ (೧೯೯೪) ಅ.ಭಾ.ಕವಿಗೋಷ್ಠಿಯ ಕನ್ನಡ ಪ್ರತಿನಿಧಿಯಾಗಿದ್ದರು. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೃತಿರಚಿಸಿದ್ದಾರೆ. ಕಾವ್ಯವಿಮರ್ಶೆ, ಹಾಸ್ಯ, ಭಾಷಾಂತರ, ಶಿಶುಸಾಹಿತ್ಯ, ಜೀವನಚರಿತ್ರೆ, ಪ್ರಬಂಧ, ಸಣ್ಣಕತೆ, ನಾಟಕ ಮತ್ತು ಸಂಶೋಧನೆ ಇತ್ಯಾದಿ ಕುರಿತು ನೂರಕ್ಕೂ ಮಿಕ್ಕು ಕೃತಿಗಳನ್ನು ತಾವೇ ಸ್ವತಃ 'ಚಿತ್ರಬಾನು' ಪ್ರಕಾಶನದಲ್ಲಿ ಪ್ರಕಟಿಸಿದ್ದಾರೆ.

ಕನವರಿಕೆ, ಪ್ರಕೃತಿ, ಸಿ.ಪಿ.ಕೆ. ಸಮಗ್ರ ಕವಿತೆ, ಬೊಗಸೆ, ತಾರಾಸಖ ಕವನಸಂಕಲನ, ಅಧ್ಯಯನ, ಕುವೆಂಪು ಸಾಹಿತ್ಯಲೋಕ, ಕಾವ್ಯಗೌರವ, ಕಾವ್ಯ ವಿವೇಕ ಇವು ಅವರ ವಿಮರ್ಶಾ ಲೇಖನಗಳು. ಇಂಗ್ಲಿಷ್‌ನಿಂದ ಅನುವಾದಗೊಂಡವುಗಳಲ್ಲಿ ಸಾಹಿತ್ಯ ಪ್ರವೇಶ, ಪಾಶ್ಚಾತ್ಯಕಾವ್ಯಚಿಂತನ ಮತ್ತು ಸಾಹಿತ್ಯ ತತ್ವ ಸಂಸ್ಕೃತದಿಂದ ಅಭಿಜ್ಞಾನ ಶಾಕುಂತಲಾ, ಕುಮಾರಸಂಭವ, ಸೌಂದರ್ಯಲಹರಿ, ರಾಮಾಯಣ, ಊರುಭಂಗ ಮೊದಲಾದವುಗಳಾದರೆ ಇವರ ಗ್ರಂಥ ಸಂಪಾದನೆ ಕುಮಾರವ್ಯಾಸನ ಅರಣ್ಯಪರ್ವ, ಜನ್ನನ ಯಶೋಧರ ಚರಿತೆಗಳು.

ಇವರ ಸಾಧನೆಯ ಸಿದ್ಧಿಗೆ ಸಂದ ಪ್ರಶಸ್ತಿ ಅನೇಕ. ೧೯೭೭ರ ಕನ್ನಡ ಸಾಹಿತ್ಯ ಪರಿಷತ್‌ನ ವಜ್ರಮಹೋತ್ಸವ ಪ್ರಶಸ್ತಿ, ೧೯೯೧ರ ದಾವಣಗೆರೆ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಗೌರವ ಸನ್ಮಾನ, ೧೯೮೮ರ ಕನ್ನಡ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ೧೯೯೪ರ ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಜಾನಪದ ತಜ್ಞ ಪ್ರಶಸ್ತಿ, ೧೯೯೬ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೨೦೦೫ರ ವಿಶ್ವಮಾನವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇವರ ಅಭಿಮಾನಿಗಳು 'ಸಾರ್ಥಕ'ವೆಂಬ ಅಭಿನಂದನ ಗ್ರಂಥವನ್ನು ಅರ್ಪಿಸಿದ್ದಾರೆ.

ಹನಸೋಗೆಯವರಾದ 'ಪ್ರೊ. ಎಸ್.ಕೆ.ರಾಮಚಂದ್ರರಾವ್ ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರು. ಸಂಗೀತ, ಕಲೆಯಲ್ಲದೇ ಸಾಹಿತ್ಯದಲ್ಲೂ ಸಾಧನೆಗೈದವರು. ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ನೂರಾರು ಕೃತಿರಚಿಸಿದ್ದಾರೆ. ಚಿತ್ರ ಮತ್ತು ಶಿಲ್ಪಕಲೆ ಇವರ ಹವ್ಯಾಸ. ವೇದೋಪನಿಷತ್ತಲ್ಲದೇ ರಾಮಾಯಣ, ಮಹಾಭಾರತ, ಜೈನ-ಬೌದ್ಧ ಗ್ರಂಥಗಳು, ಆಯುರ್ವೇದಕ್ಕೆ ಸಂಬಂಧಿಸಿದಂತೆ ಅನೇಕ ಗ್ರಂಥಗಳನ್ನು ನೀಡಿದ್ದಾರೆ. ಕರ್ನಾಟಕ ಸಂಗೀತ ಮತ್ತು ವಾಗ್ಗೇಯಕಾರರು, ತ್ಯಾಗರಾಜರು, ಪುರಂದರದರ್ಶನ, ತಿರುಪತಿ ತಿಮ್ಮಪ್ಪ, ದಿ ಹಿಲ್ ಶ್ರಯನ್ ಆಫ್ ವೆಂಗಡವರ್

ಇವೆಲ್ಲವು ಸಂಗೀತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಚಿಸಿರುವ ಕೃತಿಗಳಾಗಿದ್ದ ನಗರದ ಸಾಹಿತ್ಯ ಸಾಧನೆಯ ಸಾಲಿನಲ್ಲಿ ಪ್ರಮುಖರು.

ಸಂಸ್ಕೃತ ಪ್ರಾಧ್ಯಾಪಕರಾಗಿದ್ದ 'ಪ್ರೊ. ಸಿ.ಜಿ.ಪುರುಷೋತ್ತಮ ಕನ್ನಡ, ಇಂಗ್ಲಿಷ್, ಸಂಸ್ಕೃತ ಸಾಹಿತ್ಯದಲ್ಲಿ ಅಪಾರಜ್ಞಾನ ಪಡೆದಿದ್ದವರು. ಕವಿ ಮತ್ತು ಅನುವಾದಕರು. ಕುವೆಂಪು ಅವರ ಭಾವಗೀತೆಗಳ ಸಂಸ್ಕೃತ ಅನುವಾದ ಕಾವ್ಯತರಂಗಿಣಿ ಭಾಘ ೧ರ ಕೃತಿ, ಸಂಸ್ಕೃತದಲ್ಲಿ ಕನ್ನಡ ಹಿಂದಿಕವಿಗಳ ಕಾವ್ಯಾನುವಾದವನ್ನು ಭಾಗ ೨ರಲ್ಲಿ, ಕುವೆಂಪುರವರ ಮಹಾಕಾವ್ಯವನ್ನು ಮೊದಲ ಎರಡು ಸಂಚಿಕೆಗಳನ್ನು ಸಂಸ್ಕೃತದಲ್ಲಿ ಅನುವಾದಿಸಿದ್ದಾರೆ. ಮಮಃ ಗೋಪಾಲ ಕುವೆಂಪು ನಾಟಕದ ಅನುವಾದ, ಸರ್ವಜ್ಞನ ೫೩೮ ವಚನಗಳನ್ನು ಸಂಸ್ಕೃತಕ್ಕೆ ಭಾಷಾಂತರಿಸಿದ್ದಾರೆ. ಮಹಾಭಾರತದ, ವೇದಗಳ, ಭಾರತೀಯ ಧರ್ಮಶಾಸ್ತ್ರಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿರುವುದಲ್ಲದೆ ವೇದಗಳ ಕಾಲದ ಒಕ್ಕಲಿಗರ ಜೀವನ ಮತ್ತು ಇತಿಹಾಸದ ಮೇಲೆ ಕೃತಿ ರಚಿಸಿದ್ದಾರೆ. ಶಾಸನಗಳನ್ನು ಆಧಾರವಾಗಿಟ್ಟುಕೊಂಡು 'ಕೃಷ್ಣರಾಜನಗರ' ಎಂಬ ಲೇಖನ, ಭೋಜರಾಜನ 'ಚಂಪೂರಾಮಾಯಣಂ' ಎಂಬ ಗ್ರಂಥ ರಚಿಸಿದ್ದಾರೆ.

ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಡಾ. ಕೆ.ವೈ.ಶಿವಕುಮಾರ್ ಕೃಷ್ಣರಾಜನಗರದವರು. ಜನ್ನ – ಒಂದು ಅಧ್ಯಯನ ಇದು ಅವರ ಸಂಶೋಧನ ಕೃತಿ. ಪ್ರತಿಕ್ರಿಯೆಯೆಂಬುದು ಇವರ ವಿಮರ್ಶಾಲೇಖನ. ಹರಿಶ್ಚಂದ್ರಕಾವ್ಯ ಸಂಗ್ರಹ–ಸಂಪಾದತಿ ಕೃತಿ. ಅನೇಕ ಜನಪದ ಕತೆಗಳು, ಕೃಷ್ಣರಾಜ ನಗರದ ಐತಿಹ್ಯಗಳ ಸಂಗ್ರಹದ ಜೊತೆಗೆ ಅನೇಕ ಲೇಖನವನ್ನು ಬರೆದಿರುವರು.

ಡಾ. ಕೆ.ಅನಂತರಾಮು – ಇವರು ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದವರು. ಉದಯರವಿ ನಾಡಿನಲ್ಲಿ – ಪ್ರವಾಸಕೃತಿ, ಸಕ್ಕರೆಯ ಸೀಮೆ ಮಂಡ್ಯಜಿಲ್ಲೆಯನ್ನು ಕುರಿತ ಕೃತಿ. ದೇವಬಿನ್ನಪ – ಸ್ವರಚಿತ ವಚನ ಸಂಕಲನ. ದಾಸಿಮಯ್ಯ ಮತ್ತು ಬ್ರಹ್ಮಶಿವನನ್ನೂ ಕುರಿತ ಗ್ರಂಥಗಳನ್ನು ರಚಿಸಿದ್ದಾರೆ.

ಡಾ. ಎಂ.ಎಸ್.ನಾಗರಾಜ್ ಅವರು ಇತಿಹಾಸಕಾರ ಮತ್ತು ಪ್ರಾಕ್ತ ಸಂಶೋಧಕ ವಿದ್ವಾಂಸರು. ಮೈಸೂರಿನ ಪ್ರಾಚ್ಯ ವಸ್ತುಸಂಗ್ರಹಾಲಯದ ಮುಖ್ಯಸ್ಥರಾಗಿದ್ದವರು. ಸ್ಟೋನ್‌ವಜ್ ಹಿಲ್‌ಡ್ವೆಲ್ಲರ್ಸ್ ಆಫ್ ತೆಕ್ಕಲಕೋಟ, ಪ್ರೊ. ಹಿಸ್ಟಾರಿಕ ಕಲ್ಚರ್ಸ್ ಆಫ್ ದಿ ತುಂಗಭದ್ರಾ ವ್ಯಾಲಿ ಎಂಬುದು ಇವರ ಸಂಶೋಧನಾ ಲೇಖನಗಳು.

ಮಿರ್ಲೆಯ 'ಕುಪ್ಪುಸ್ವಾಮಿ'ಯವರು, ಇತಿಹಾಸದಲ್ಲಿ ಅಪಾರ ಜ್ಞಾನವುಳ್ಳವರು. ಭಾರತ ಮತ್ತು ಮಧ್ಯಯುಗದ ಕರ್ನಾಟಕದ ಆರ್ಥಿಕ ಸ್ಥಿತಿಗತಿಗಳನ್ನು ಕುರಿತಂತೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

ಡಾ. ಕೆ.ವೀರತಪ್ಪ'ನವರು ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯ ಕೃತಿ ರಚಿಸಿರುವರು. ಹನಸೋಗೆಯ ಮಹಾದೇವಯ್ಯನವರು ಕವಿ, ಶಿಶುಸಾಹಿತ್ಯರಚಕರು. ಇವರು ನಿಘಂಟು ಕ್ಷೇತ್ರದಲ್ಲಿ ಸೇವೆಸಲ್ಲಿಸಿರುವುದಲ್ಲದೇ ಮೈವಿವಿಯ ಇಂಗ್ಲಿಷ್ ಕನ್ನಡ ನಿಘಂಟು ಯೋಜನೆಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಕನ್ನಡ – ಕನ್ನಡ ಸಮನಾರ್ಥಕ ಪದಕೋಶ, ಕನ್ನಡ ಶಬ್ದಸಾಗರಗಳೆಂಬ ಅಪರೂಪದ ಕೃತಿಗಳನ್ನು ಪ್ರಕಟಿಸಿರುತ್ತಾರೆ. ಅಳಿವು–ಉಳಿವು, ಕಲ್ಲುತೋಟ ಮೊದಲಾದವು ಇವರ ಇತರ ಗ್ರಂಥಗಳು.

ಹೊಸ ಅಗ್ರಹಾರದ ಎಚ್.ಎಸ್.ಅಚ್ಚಪ್ಪನವರು ಗಾದೆಗಳ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. ಕನ್ನಡದ ಸಾವಿರಾರು ಗಾದೆಗಳನ್ನು ಒಗ್ಗೂಡಿಸಿ, 'ಕನ್ನಡ ಗಾದೆಗಳು' ಎಂಬ ಬೃಹತ್ ಸಂಪುಟ, ಕನ್ನಡ ಪಡೆನುಡಿಗಳು, ಗ್ರಂಥಸ್ಥ ಗಾದೆಗಳು ಎಂಬ ಕೃತಿಗಳನ್ನು ಸಂಪಾದಿಸಿಕೊಟ್ಟಿದ್ದಾರೆ.

ಪ್ರಸ್ತುತ ಕೃಷ್ಣರಾಜನಗರ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಕನ್ನಡದ ಸಹ ಪ್ರಾಧ್ಯಾಪಕರಾಗಿರುವ ಡಾ. ಎಚ್.ಎನ್.ಮಂಜುರಾಜ್‌ರವರು ಬರೆಹಗಾರರಾಗಿ ಹತ್ತಕ್ಕೂ ಹೆಚ್ಚು ಕೃತಿಗಳನ್ನು ಹೊರತಂದಿದ್ದಾರೆ. "ಪ್ರಗತಿಶೀಲರ ಕತೆಗಳ ಅಧ್ಯಯನ"ವೆಂಬ ಸಂಶೋಧನ ಗ್ರಂಥವಲ್ಲದೇ ಯು.ಜಿ.ಸಿ.ಯ ಎಂ.ಆರ್.ವಿ.ಯೋಜನೆಯ ಅಡಿಯಲ್ಲಿ "ತೇಜಸ್ವಿ ಕತೆಗಳಲ್ಲಿ ಪ್ರಕೃತಿ" ಎಂಬ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ. 'ಶ್ವಾಸದೊಳಗಿನ ವಿಶ್ವಾಸ', 'ಮಾನವ್ಯದೊಡನಾಟ' ಎಂಬ ವಿಚಾರ ವಿಮರ್ಶೆಗಳು, 'ಜೀವಸಂವಾದ ಮತ್ತು ನೀರೆಲ್ಲಾ ಊ ತೀರ್ಥ' ಎಂಬುವ ಕವನ ಸಂಕಲನಗಳು, 'ನಂಬುಗೆಯ ಹಾದಿಯಲ್ಲಿ' ಶಾಸ್ತ್ರೀಯವಾಗಿ ಸಂಪಾದಿಸಿದ 'ಹೊಸಗನ್ನಡ ವ್ಯಾಕರಣದರ್ಪಣ', ಕಿರುಹೊತ್ತಗೆಯಲ್ಲಿ 'ಇವರಿಂಥವರು' ವ್ಯಕ್ತಿಚಿತ್ರಣ, 'ಹನಿಹನಿ ಇಬ್ಬನಿ, ನನ್ನಿಷ್ಟದ ಲೋಕ ವಿವೇಕ', ಚದುರಂಗರ ಕಥೆಗಳ ವಿಶ್ಲೇಷಣೆಯ 'ಸುಪ್ತಸಾಗರ', ಅದೇ ರೀತಿ ನಿರಂಜನರ ಕತೆಗಳನ್ನು ಕುರಿತು ವಿಶ್ಲೇಷಿಸಿದ 'ನಿರಂಜನ ಕಥನ' ಮುಂತಾದ ಹಲವು ಕೃತಿಗಳನ್ನು ಹೊರತಂದಿದ್ದಾರೆ. ಇವುಗಳಲ್ಲದೇ ಸುಮಾರು ಐವತ್ತಕ್ಕೂ ಹೆಚ್ಚು ಲೇಖನಗಳನ್ನು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗುವುದರೊಂದಿಗೆ, ಅನೇಕ ನಂಬಿಕೆಗಳಲ್ಲಿ ಇವರ ಬರೆಹಗಳು ಮೂಡಿಬಂದಿರುತ್ತದೆ. ೧೯೯೬ ಶ್ರೀ

ಶಿವರಾತ್ರೀಶ್ವರರ ಜಯಂತಿ ಅಂಗವಾಗಿ ಪ್ರಕಟಗೊಂಡ 'ಕಲ್ಯಾಣಪಥ' ಎಂಬ ಸಂಚಿಕೆಯಲ್ಲಿ "ಕೃಷ್ಣರಾಜನಗರ ತಾಲ್ಲೂಕಿನ ಸಾಹಿತ್ಯ - ಒಂದು ಅವಲೋಕನ"ದಲ್ಲಿ ಇಡೀ ನಗರದ ಸಮಸ್ತ ಸಾಹಿತಿಗಳ ಕೃತಿಮತ್ತವರ ಲೇಖನಗಳನ್ನೊಳಗೊಂಡ ಮಾಹಿತಿಯನ್ನು ವಿವರಿಸಿರುತ್ತಾರೆ. ತಾಲ್ಲೂಕಿನ ಅನೇಕ ಸಾಹಿತ್ಯಾಸಕ್ತರು ಮತ್ತು ಅವರ ಬರಹಗಳಿಗೆ 'ಮುನ್ನುಡಿ'ಯಾಗಿದ್ದಾರೆ.

'ಎಸ್.ಎನ್.ಕೃಷ್ಣಜೋಯಿಸ್'ರವರು ಸೂಪಶಾಸ್ತ್ರ, ಜಾತಕತಿಲಕ, ವಿಷ್ಣು-ಪುರಾಣಗಳ ಚಂಪೂಕೃತಿಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ. ಕರ್ತಾಶುವಿನ 'ಕ.ಪು.ಮಹಾದೇವಪ್ಪ' ಕನ್ನಡ ಪ್ರಾಧ್ಯಾಪಕರು. ಎ.ಎಸ್.ಜಯರಾಂರೊಡಗೂಡಿ ಕೇಶಿರಾಜನ ಶಬ್ಧಮಣಿದರ್ಪಣಂ ನೂರೊಂದು ಸೂತ್ರಗಳು ಎಂಬ ಕೃತಿಯನ್ನು ಹೊರತಂದಿದ್ದಾರೆ. ಕನ್ನಡ, ಇಂಗ್ಲಿಷ್, ಸಂಸ್ಕೃತದಲ್ಲಿ ಆಳವಾದ ಜ್ಞಾನವುಳ್ಳ 'ಆರ್.ಡಿ.ಹೆಗಡೆ'ಯವರು ವೇದ, ಉಪನಿಷತ್‌ಗಳನ್ನು ಕುರಿತಂತೆ, ಪ್ರಾಚೀನಕಾವ್ಯ ಪುರಾಣಗಳಲ್ಲಿ ಆಸಕ್ತಿ ಇವರಿಗೆ. ಬಟುಗನಹಳ್ಳಿಯ ಡಾ. ರಂಗನಾಥ್ ಮತ್ತು ಕೊಡಿಯಾಲದ ಮಲ್ಲಪ್ಪನವರು ಭೂಗೋಳಶಾಸ್ತ್ರದ ಪ್ರಾಧ್ಯಾಪಕರಾಗಿ ಯುರೋಪ್ ಮತ್ತು ಭಾರತದ ಪ್ರಾದೇಶಿಕ ಭೂಗೋಳಶಾಸ್ತ್ರ, ಮಾನವ ಭೂಗೋಳಶಾಸ್ತ್ರವನ್ನು ಕುರಿತ ಅನೇಕ ಗ್ರಂಥಗಳನ್ನು ಈರ್ವರು ಜೊತೆಗೂಡಿ ರಚಿಸಿರುವರು.

ಮುಖ್ಯೋಪಾಧ್ಯಾಯರಾಗಿ ಪ್ರಸ್ತುತ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಸೇವೆಸಲ್ಲಿಸುತ್ತಿರುವ 'ತೇಸಿವಿಶ್ವೇಶ್ವರಯ್ಯ'ನವರು ಸಾಹಿತ್ಯ, ಬರಹಗಾರ ಮತ್ತು ಅನೇಕ ಸಾಹಿತ್ಯ ಸಂಘಸಂಸ್ಥೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿರುವ ಸಂಘಟಕರು. ಮೈಸೂರು ಜಿಲ್ಲಾ ಘಟಕದ ಶರಣಸಾಹಿತ್ಯ ಪರಿಷತ್, ಕೃಷ್ಣರಾಜನಗರದ ಸಾಹಿತಿ ಕಲಾವಿದರ ಬಳಗ, ಜ್ಞಾನಬುತ್ತಿ ಸಂಸ್ಥೆ ಹೀಗೆ ಅನೇಕ ಸಂಸ್ಥೆಗಳಲ್ಲಿ ಸೇವೆಸಲ್ಲಿಸಿದ್ದಾರೆ. ನಮನ ಎಂಬ ಕವನಸಂಕಲನ ಸಾಂದರ್ಭಿಕ, ಸಂಚಯನ, ನಮ್ಮ ಸುತ್ತ ಇವರ ಲೇಖನ ಸಂಗ್ರಹಗಳು. ನಾಗತಿಹಳ್ಳಿ ದಯಾನಂದರ ಜೊತೆ ಕಡಲು ಎಂಬ ಕವನಸಂಕಲನ, ಗದ್ಯ ಸಾಹಿತ್ಯ ಸಮೀಕ್ಷೆ, ಎಚ್ಚೆಸ್ಕೆ ಎಪ್ಪತ್ತು, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ ಎಡತೊರೆ, ಕೃಷ್ಣರಾಜನಗರದ ಸುವರ್ಣ ಮಹೋತ್ಸವದ ಸಂದರ್ಭ (೧೯೮೬) 'ಸುವರ್ಣ ಸಂಚಿಕೆ' ಮತ್ತು ೧೯೯೬ರ ಶಿವರಾತ್ರೀಶ್ವರ ಜಯಂತಿಯ ಸಂದರ್ಭದಲ್ಲಿ ಸಂಪಾದಿಸಿಕೊಟ್ಟ 'ಕಲ್ಯಾಣಪಥ' ಸ್ಮರಣಸಂಚಿಕೆಯು ಇವರ ಬರಹಗಳಲ್ಲಿ ಕಾಣಬಹುದು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ 'ಕಾ.ತ.ಚಿಕ್ಕಣ್ಣ'ನವರು ಕೃಷ್ಣರಾಜನಗರದವರು. 'ಕನಕಕಿರಣ' ಎಂಬ ಸಂಪಾದನ ಗ್ರಂಥ, ಅನೇಕ ಕಥಾಸಂಕಲನಗಳನ್ನು ರಚಿಸಿರುವರು. ಅವುಗಳಲ್ಲಿ ಒಡಲುರಿ, ಬದುಕು, ಬಿಳಲುಬಿಟ್ಟ, ಮನಸ್ಸು-ಮುಗಿಲು. ಮುಂಜಾವು ಎಂಬುದು ಕಾದಂಬರಿ. ಇಂಗ್ಲಿಷ್ ಉಪನ್ಯಾಸಕ 'ಕನ್ನಂಬಾಡಿ ಶಿವಶಂಕರ್' ಕವಿ, ಕತೆಗಾರ, ಕಥಾನುವಾದಕ ಮತ್ತು ಪ್ರಬಂಧಕಾರ ಮತ್ತು ಮಲ್ಲಿಗೆ ಮತ್ತು ಅಕ್ಕ, ಎಡತೊರೆಯ ತೀರಕ್ಕೆ, ಮಲ್ಲಿಗೆ ದಂಡೆಯ ಮುಡಿಯುವುದೆಂದರೆ, ಬೆಟ್ಟದಾವರೆ ಗಿಡದ ಮೂವತ್ತೆರಡು ಹೂವುಗಳು ಎಂಬುದು ಇವರ ಪ್ರಕಟಿತಕತೆಗಳು. ಅಲೆಗ್ಸಾಂಡರ್ ಪುಷ್ಕಿನ್‌ನ ಕತೆಯ ಕನ್ನಡ ರೂಪ ಗುರಿ. ಸೇವಕನ ಟಿಪ್ಪಣಿಗಳು - ಇದು ಟಾಲ್‌ಸ್ಟಾಯ್ ಕತೆಯೊಂದರ ಅನುವಾದ ಬಾಲ್ಯದ ದಿನಗಳ ನೆನಪು ಮತ್ತು ಮುಸ್ಸಂಜೆ ಇವರ ಪ್ರಬಂಧಗಳು ಕ್ರಮವಾಗಿ ತಿಳಿಗಾಳಿ ಮತ್ತು ಜಲತರಂಗ ಸಂಕಲನಗಳಲ್ಲಿ ಕಾಣಿಸಿಕೊಂಡಿದೆ. ಗಂಧನಹಳ್ಳಿ ಕೊಪ್ಪಲಿನ ಜಿ.ಶ್ರೀನಿವಾಸ ಕವಿ ಮತ್ತು ಕತೆಗಾರ. ಹಕ್ಕಿಮರಿ ಎಂಬ ಕಥಾಸಂಕಲನ ಇಂದು ಹುಟ್ಟಿತು ಕವಿತೆ, ಅಪ್ಪ ಅಮ್ಮ ಮತ್ತು ವೃತ್ತಿಕವನಸಂಕಲನಗಳು. ಮಿರ್ಲೆಯ ಎಂ.ಆರ್.ಗಿರಿಧರ್, ಎಚ್.ಪಿ.ಶ್ರೀನಿವಾಸರು ಕಥಾನುವಾದಕರು. ರಾಮಾಪುರದ ರಾಮಣ್ಣ, ಕಂಚಿನಕೆರೆಯ ರವಿಕುಮಾರ್, ಹನಸೋಗೆಯ ವೆಂಕಟಾಚಲಪತಿ, ಸಿದ್ದನಕೊಪ್ಪಲು ತೋಟೇಗೌಡ, ಕಾಕೇನಹಳ್ಳಿ ಪುಟ್ಟರಾಜು, ಕಾಂತರಾಜು ಮಿರ್ಲೆ, ದೊಡ್ಡಹನಸೋಗೆಯ ಬಿ.ಜಿ.ರಮೇಶ್, ಎಂ.ಎಸ್.ಉಮೇಶ್ ಇವರೆಲ್ಲರ ಕೆಲವೊಂದು ಬರವಣಿಗೆಗಳು ಗಮನಾರ್ಹ ಕೊಡುಗೆಗಳಾಗಿವೆ.

ಕೃಷ್ಣರಾಜನಗರ ತಾಲ್ಲೂಕು ದರ್ಶನದ ಕ್ಷೇತ್ರಪುಸ್ತಿಕೆಯ ಎಡತೊರೆ ಉಮೇಶ್, ಶಿಶುಸಾಹಿತ್ಯಗಳನ್ನು ಪ್ರಕಟಿಸಿದ ಬಿ.ಜಿ.ರಮೇಶ ಮತ್ತು ಚಂದ್ರಕಾಂತ್ ಅನೇಕ ಹನಿಗವನಗಳನ್ನು ರಚಿಸಿದ್ದಾರೆ. ಬೇರ್ಯ ಪ್ರಸನ್ನಕುಮಾರರವರು ಎಂ.ಎಲ್.ಎ. ನಿರಾಸೆ, ಕೊನೆಗೂ ಇದೇ ಗತಿ, ಎಂಬ ಕಾದಂಬರಿಗಳ ಕರ್ತೃ. ಕೆ.ಎನ್.ಕೃಷ್ಣಮೂರ್ತಿಯವರ ಅಮೋದ ಕೃಷ್ಣ ಎಂಬ ಹೆಸರಿನ ನಾಟಕ ಭಕ್ತಿಗೀತೆಗಳ ಸಂಕಲನ, ಬೇರ್ಯ ಹರೀಶ್‌ರವರ ಕವನಸಂಕಲನಗಳು, ಹಂಗರಬಾಯನಹಳ್ಳಿ ಸಂಪತ್, ವೈ.ಎನ್.ಸುಬ್ರಮಣ್ಯ, ಅಪ್ಪಾಸ್ವಾಮಿಯವರು ಕೆಲವು ಬರಹಗಾರರು. ಅಪ್ಪಾಸ್ವಾಮಿಯವರ ಕೆಲವೊಂದು ಶಿಶುಗೀತೆಗಳು, ಇಂದಿರಾ ಪ್ರಿಯದರ್ಶಿನಿ ಎಂಬ ಕಿರುಹೊತ್ತಿಗೆ, ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕರ ಕುರಿತ ಪುಸ್ತಕ ರಚಿಸಿದ್ದಾರೆ. ಮಿ.ರಾ.ಲಿಂಗರಾಜು ಅವರ ಕೆಲವು ಸಂಕಲನಗಳು, ಪಿ.ಕೆ.ರಾಜಶೇಖರ್ ಅವರೊಡಗೂಡಿ ಬರೆದ ಅಭಿಜ್ಞಾನ ಶಾಕುಂತಲ ನಾಟಕ ಕಥೆ,

ವಚನಸಂಕಲನ, ಮೈಥಿಲಿ ಎಂಬ ಕಾದಂಬರಿ, ಕೆಲವೊಂದು ವಿಮರ್ಶಾ ಲೇಖನವನ್ನು ಪ್ರಕಟಿಸಿದ್ದಾರೆ. ಗಂಧನಹಳ್ಳಿ ಕೊಪ್ಪಲು ಸೋಮಶೆಟ್ಟಿ, ತಿಪ್ಪೂರು ಕೃಷ್ಣ, ಅರ್ಜುನ ಹಳ್ಳಿಯ ರವಿ, ಸಿ.ವಿ.ಗುಡಿಮಹೇಂದ್ರ, ಗಂಧನಹಳ್ಳಿಯ ನಾಗೇಂದ್ರಪ್ರಸಾದ್, ಕೃಷ್ಣರಾಜ ನಗರದ ಸುರೇಶ್ ಚವ್ಹಾಣ್, ಪ್ರಭಾಕರ್ ಹೆಗ್ಗಂದೂರು, ನಿವೃತ್ತ ಉಪನ್ಯಾಸಕ ವೀರಪ್ಪನವರು ಕೆಲವೊಂದು ವಚನಗಳನ್ನು ರಚಿಸಿರುವರು.

ಕೃಷ್ಣರಾಜನಗರದ ಕೆಲ ಮಹಿಳಾ ಸಾಹಿತಿಗಳು ಗಮನಾರ್ಹ ಕೊಡುಗೆ ನೀಡಿರುವರು. ಅವರಲ್ಲಿ ಹೊಸ ಅಗ್ರಹಾರದ ಲತಾರಾಜಶೇಖರ್ ಪ್ರಮುಖರು. ಕೋಗಿಲೆ ಕೂಗಿದಂತೆ, ಕೆಲವೊಂದು ಕವನಸಂಕಲನಗಳು. ಇತ್ತೀಚೆಗೆ ಅವರ ಕೆಲ ಬೃಹತ್ ಸಂಪುಟಗಳು ಪ್ರಕಟಗೊಂಡಿವೆ. ಕುವೆಂಪು ಮಹಾದರ್ಶನ, ಬುದ್ಧ ಮಹಾದರ್ಶನ ಮತ್ತು ಬಸವೇಶ್ವರ. ಮಹಾದರ್ಶನ ಇವು ಲತಾರಾಜಶೇಖರ್ ಮಹಾಕಾವ್ಯಗಳು. ಶರಣ ಸಾಹಿತ್ಯ ಕುರಿತಂತೆ ಶ್ರೀಮತಿ ಜಗದಾಂಬ ಮಲ್ಲದೇವರು, ಮೂವತ್ತೂರಿನ ಡಾ. ಎಂ.ನಂಜಮ್ಮಣಿ – ಅರಸು ಜನಾಂಗ ಒಂದು ಅಧ್ಯಯನ' ಎಂಬ ಸಂಶೋಧನಾ ನಿಬಂಧ, ಸಾಲಿಗ್ರಾಮದ ಕೌಶಲ್ಯ ಹಂಪಾಪುರದ ಸ್ವರೂಪರಾಣಿ, ನಾರಾಯಣಪುರದ ಲೀಲಾಂಬಿಕೆ ಮೊದಲಾದವರು ಇಲ್ಲಿ ಗಮನಾರ್ಹ.

ಸಮಾಜ ಅನೇಕ ಕ್ಷೇತ್ರಗಳಲ್ಲಿ ಮಹಾನ್ ಸಾಧನೆಗೈದ ಹಲವರು ತಮ್ಮ ಜೀವನ ಚರಿತ್ರೆಗಳನ್ನು ಬರೆಯುವುದು ರೂಢಿಯಲ್ಲಿದೆ. ಸಾಹಿತಿಗಳು, ಸಮಾಜ ಸುಧಾರಕರು, ಮಹಾನ್ ವ್ಯಕ್ತಿಗಳು, ಕೆಲ ರಾಜಕಾರಣಿಗಳು ಕೂಡಾ ತಮ್ಮ ಸಾಧನೆಗಳನ್ನು ಅನುಭವ-ಗಳನ್ನು ಪುಸ್ತಕರೂಪದಲ್ಲಿ ಹಿಡಿದಿಡುತ್ತಾರೆ. ಕೃಷ್ಣರಾಜನಗರದ ರಾಜಕಾರಣಿಗಳೂ ಇದಕ್ಕೆ ಹೊರತಲ್ಲ. ಕೃಷ್ಣರಾಜನಗರದ ಮಾಜಿ ಸಚಿವರು, ಸಂಸತ್ ಸದಸ್ಯರು ಆದ ಹೆಚ್.ವಿಶ್ವನಾಥ್‌ರವರು ತಮ್ಮ ಅನುಭವದ ಆಂತರ್ಯವನ್ನು "ಹಳ್ಳಿಹಕ್ಕಿಯ ಹಾಡು", ಪ್ರಜಾತಂತ್ರದ ಮೌಲ್ಯವನ್ನು ಕುರಿತಂತೆ 'ಮತಸಂತೆ'ಯಲ್ಲಿ ಹೇಳಿರುವರು. ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ ಸದಸ್ಯರಾಗಿದ್ದ ಟಿ.ಕೆ.ಚಿನ್ನಸ್ವಾಮಿಯವರ 'ಶಾಸನಸಭೆಗೆ ಶಿಕ್ಷಕನ ಪಯಣ' ಎಂಬ ಆತ್ಮಕಥೆ, ಆದರ್ಶಯುವಕನ ಸಾಹಸಗಾಥೆಯನ್ನು ಕುರಿತ 'ಆದರ್ಶಸೈನಿಕ' ಕೃತಿಗಳು ಗಮನಾರ್ಹ. ಇವರ 'ಪ್ರವಾಸ ಕಥನ' ಅಚ್ಚಿನಲ್ಲಿದೆ. ಎಂ.ಎಸ್.ವೀರಶೆಟ್ಟಿಯವರ 'ಶ್ರೀ ಗುರುಕೆಂಡಗಣ್ಣಸ್ವಾಮಿ ಚರಿತ್ರೆ', ತಿಪ್ಪೂರು ಕೃಷ್ಣರವರ 'ಅಪ್ಪ ಹೇಳಿದ ಕತೆ', ನಿವೃತ್ತ ಉಪನ್ಯಾಸಕ ಕೆ.ಸಿ.ಕೆಂಡಗಣ್ಣಪ್ಪನವರು ಕವಿ, ವಚನಕಾರರು. 'ಕೆಂಡಗಣ್ಣನ ಗುಡಿಹನಿಗಳು, ನುಡಿಬಿಂದುಗಳು, ನುಡಿದಳಗಳು (ಅಚ್ಚಿನಲ್ಲಿದೆ), ಹನ್ನೊಂದು ಕಥೆಗಳನ್ನೊಳಗೊಂಡ 'ಕಥಾಪ್ರಸಂಗಗಳು', ನಿವೃತ್ತ ಉಪನ್ಯಾಸಕ

ಶ್ರೀಕಂಠಯ್ಯನವರ ವಚನಸಂಕಲನ 'ಕಲಿಯಜ್ಞ' ಎಂಬ ಹೊತ್ತಗೆಯನ್ನು ಪ್ರಕಟಿಸಿದ್ದಾರೆ. ತಾಲ್ಲೂಕು, ಸೃಜನ ಲೇಖಕರು ಮತ್ತು ಕಲಾವಿದರ ಬಳಗದ ಅಧ್ಯಕ್ಷರಾದ ರಾ. ಸುರೇಶ್‌ರವರ 'ತುಡಿತ' ಮತ್ತು ೬೩ ಲೇಖನವುಳ್ಳ 'ಮಾನವತೆ' ಎಂಬ ಸಂಕಲನ ಪ್ರಕಟವಾಗಿವೆ. ಸಾಲಿಗ್ರಾಮದ ಎಸ್.ಬಿ.ವಸಂತರಾಜಯ್ಯನವರ 'ಸಂಕ್ಷಿಪ್ತ ಸಾಲಿಗ್ರಾಮ ದಶ್ನ' ಕೃತಿ ಸಾಲಿಗ್ರಾಮದ ಪರಿಚಯವನ್ನೊಳಗೊಂಡಿದೆ. ತಿಪ್ಪೂರು ಕೃಷ್ಣರವರ 'ತಿಪ್ಪೂರು' ತಿಪ್ಪೂರಿನ ಸಮಗ್ರದರ್ಶನವನ್ನು ಪರಿಚಯಿಸುತ್ತದೆ. ತಾಲ್ಲೂಕು ಸಾಕ್ಷರತಾ ಸಮಿತಿಯ ತ್ರಿವೇಣಿಯವರು ಮತ್ತು ಶಿಕ್ಷಕರಾದ ರಿಜ್ವಾನ್‌ರವರು ಅನೇಕ ಸಾಹಿತ್ಯಕವಾಗಿ ಕವನರಚನೆ ಮತ್ತು ಕವಿಗೋಷ್ಠಿಯಲ್ಲಿ ಭಾಗವಹಿಸುವ ಮೂಲಕ ತಮ್ಮನ್ನು ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಪತ್ರಿಕೋದ್ಯಮ

ಕೃಷ್ಣರಾಜನಗರ – ಪತ್ರಿಕೋದ್ಯಮದಲ್ಲಿ ಅಷ್ಟೇನು ಗಮನಾರ್ಹ ಕೊಡುಗೆ ಇಲ್ಲವಾದರೂ ಇರುವಲ್ಲಿಯ ಕೆಲವರ ಸಾಧನೆ ಗಣನೀಯವಾದುದು. ಪತ್ರಿಕಾ ವರದಿಗಾರರಾಗಿ ಮೊದಲು ಹೇಳತಕ್ಕ ಹೆಸರು ಎಚ್ಚೆಸ್ಕೆಯವರು. ಸ್ವಾತಂತ್ರ್ಯಪೂರ್ವದಲ್ಲಿಯೇ ತಾಯಿನಾಡು ಪತ್ರಿಕೆಯ ವರದಿಗಾರರಾಗಿ ಸೇವೆಸಲ್ಲಿಸಿದ್ದಾರೆ. 'ತಾಯಿನಾಡು' ಪತ್ರಿಕೆಯಲ್ಲಿ ತಮ್ಮ ಮೊದಲಸೇವೆ, ನಂತರ 'ಇಂದೂ' ಪತ್ರಿಕೆಯಲ್ಲಿ ನಿರಂತರವಾಗಿ ಅಂಕಣ ಬರೆದು ದಾಖಲೆ ಹೊಂದಿದವರು. ಸುಧಾಪತ್ರಿಕೆಯಲ್ಲಿ 'ವಾರದ ವ್ಯಕ್ತಿ', ಸಮದರ್ಶಿ, ಮೈಸೂರು ಮಿತ್ರ ದಿನಪತ್ರಿಕೆಯ ವಾರದಮಿತ್ರ ಪುರವಣಿಯಲ್ಲಿ ೫೦ಕ್ಕೂ ಹೆಚ್ಚು ಕನ್ನಡ ಕವಿಗಳ ಜೀವನ ಚರಿತ್ರೆಗಳನ್ನು ಬರೆದವರು. ಪ್ರಜಾವಾಣಿಯಲ್ಲಿ 'ಆರ್ಥಿಕ ಸಮೀಕ್ಷೆ', ವಾರದವ್ಯಕ್ತಿಯ ಸಾಹಸಗಾಥೆಯ 'ಬದುಕು ಬೆಳಕು'. ಹೀಗೆ ಹಲವಾರು ಲೇಖನಗಳನ್ನು ಪ್ರಕಟಿಸುವ ಮೂಲಕ ಪತ್ರಿಕಾರಂಗದಲ್ಲಿ ಅವರ ಸೇವೆ ಅನನ್ಯವಾಗಿದೆ.

೧೯೫೦ರ ಸುಮಾರಿನಲ್ಲಿ ಸಾಹಿತ್ಯಿಕ ಪತ್ರಿಕೆ 'ಹಂಸ', ಕೈಬರಹದ ಪತ್ರಿಕೆಯಾಗಿ ಸೀಮಿತ ಓದುಗರನ್ನು ಹೊಂದಿದ್ದಲ್ಲದೇ ನಾಡಿನ ಅನೇಕ ಹಿರಿಯ ಕವಿಗಳಿಂದ ಮೆಚ್ಚುಗೆಯನ್ನು ಕೂಡಾ ಪಡೆದಿತ್ತು. ಈ ಪತ್ರಿಕೆ ರಾಮಕೃಷ್ಣ ಸೋಮಾಯಾಜಿ ತಮ್ಮ ಅತೀವ ಶ್ರದ್ಧಾಸಕ್ತಿಯಿಂದ ರಾಜ್ಯಮಟ್ಟದ ನಾಟಕ ಸ್ಪರ್ಧೆ, ಸಣ್ಣಕಥಾಸ್ಪರ್ಧೆಯನ್ನು ನಡೆಸಿದ ಕೀರ್ತಿ ಇವರದು.

'ಉಪಧ್ಯಾಯವಾಣಿ' - ಇದು ಶಿಕ್ಷಣಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ಚಂದಗಾಲುವಿನ ಸಿ.ಕೆ.ಪುಟ್ಟಣ್ಣಯ್ಯಚಾರ್‌ರವರು ಆರಂಭಿಸಿದ ಪತ್ರಿಕೆ. ಇವರ ಮಗ ಸಿ.ಪಿ.ಗುರುಮೂರ್ತಿ 'ಉಪಧ್ಯಾಯ ಬಂಧು' ಮಾಸಿಕವನ್ನು ಹೊರತರುತ್ತಿದ್ದರು. ಕೃಷ್ಣರಾಜನಗರದಿಂದ ಪ್ರಕಟಗೊಂಡ 'ಶುಭವಾಣಿ' ಎಂಬ ದಿನಪತ್ರಿಕೆ ಜಗನ್ನಾಥರವರು ಸಂಪಾದಕರಾಗಿ ಹೊರತರುತ್ತಿದ್ದರು. ಇವರು ಬೆಂಗಳೂರಿನಿಂದ 'ಜಗನ್ನಾಥಪತ್ರಿಕೆ'-ಯನ್ನು ಪ್ರಕಟಿಸಿದರೂ ನಂತರ ಸ್ಥಗಿತಗೊಂಡಿತು.

ಕೃಷ್ಣರಾಜನಗರದಿಂದ ಅನೇಕ ಉತ್ಸಾಹಿ ಯುವಕರು ಅತ್ಯಂತ ಶ್ರಮಪಟ್ಟು ಅನೇಕ ಪತ್ರಿಕೆಗಳನ್ನು ಪ್ರಾರಂಭಿಸಿದ್ದರು. ಕೆಲವು ವರ್ಷಗಳು ಜನ ಮನ್ನಣೆ ಪಡೆದು ಪತ್ರಿಕೋದ್ಯಮದಲ್ಲಿ ಹೊಸ ಕ್ರಾಂತಿಗೆ ನಾಂದಿಹಾಡಿದ್ದರು. ಪಿ.ಸೋಮಶೇಖರ್‌ರವರ ಸಂಪಾದಕತ್ವದ 'ಎಡತೊರೆಪತ್ರಿಕೆ', ಸಾಲಿಗ್ರಾಮದ ಭಾಸ್ಕರ್‌ರವರ 'ಭಾಸ್ಕರಪ್ರಿಕೆ', ಕೆ.ಟಿ.ಮಂಜುನಾಥರ ಸಿನಿಮಾ ವಾರಪತ್ರಿಕೆಯಾದ 'ಚಿತ್ರಸಾರಥಿ' ಮತ್ತು ದಿನಪತ್ರಿಕೆ 'ನಗರದೂತ', ವೈ.ಆರ್.ಶಿವಕುಮಾರ್‌ರವರ 'ವಾರದಸಂಚಾರಿ', ಭೇರ್ಯ ರಾಮಕುಮಾರ್‌ರವರ 'ಪ್ರಜಾಸೌರಭ', ಶಾವಂದಪ್ಪನವರ 'ಕಬ್ಬಿನಗದ್ದೆ', ಕೆಂಪೇಗೌಡರ 'ಭತ್ತದಕಣಜ' ಹೀಗೆ ಹಲವು ಪತ್ರಿಕೆಗಳು ಪ್ರಾರಂಭಗೊಂಡರೂ, ಕೆಲವರ್ಷಗಳಲ್ಲಿ ಸ್ಥಗಿತಗೊಂಡವು. ಕೆ.ಟಿ.ಮಂಜುನಾಥರ ನಗರದೂತ ದಿನಪತ್ರಿಕೆ ಸುಮಾರು ಹತ್ತು ವರ್ಷಗಳಷ್ಟು ನಗರದಲ್ಲಿ ಮನ್ನಣೆ ಪಡೆದು ಮುದ್ರಣ ಮತ್ತು ತಾಂತ್ರಿಕತೆಯಲ್ಲಿ ಅವರ ಶ್ರಮ ಗಮನಾರ್ಹವಾದುದು.

ನಗರದಲ್ಲಿ ಪತ್ರಿಕೋದ್ಯಮದಲ್ಲಿ ಮಾರಾಟಗಾರರಾಗಿ, ವರದಿಗಾರರಾಗಿ ಕೆಲಸಮಾಡಿದವರು ಅನೇಕರು. ತಾಲ್ಲೂಕು ಪತ್ರಕರ್ತರ ಸಂಘ, ಜಿಲ್ಲಾಪತ್ರಕರ್ತರ ಸಂಘದಲ್ಲಿದ್ದು ಅನೇಕ ಸಮ್ಮೇಳನ, ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಇವರ ಅಪರೂಪದ ಸೇವೆ ಗಣನೀಯವಾದುದು. ಪ್ರಜಾವಾಣಿಯಲ್ಲಿ ಡಿ.ಪಿ.ಪರಮೇಶ್ ಮತ್ತು ರಾವಂದೂರಿನ ಆರ್.ಎ.ಜಗದೀಶ್, ಕನ್ನಡಪ್ರಭದಲ್ಲಿ ಮಹಾದೇವಪ್ಪ ಮತ್ತು ಹಾಡ್ಯದ ರೇಣುಕಪ್ರಸಾದ್, ಹಲಶ್ರೀಕಂಠಮೂರ್ತಿ ಪ್ರಮುಖರು.

ಪ್ರಸ್ತುತ ಕೃಷ್ಣರಾಜನಗರದಲ್ಲಿ ಇಂದು ಅನೇಕರು ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ ವರದಿಗಾರರಾಗಿ, ನಗರ ಸುದ್ದಿಗಳನ್ನು ಓದುಗರಿಗೆ ತಲುಪಿಸುವಲ್ಲಿ ನಿರತರಾಗಿದ್ದಾರೆ. ಪ್ರಜಾವಾಣಿ - ಪಮಡಿತ್ ನಾಟೀಕರ್, ಕನ್ನಡಪ್ರಭ ಕೆ.ಎಸ್.ನಾಗರಾಜ್, ಸಂಯುಕ್ತ ಕರ್ನಾಟಕ - ನಾಗೇಶ.ಕೆ, ವಿಜಯಕರ್ನಾಟಕ - ಎಡತೊರೆ ರಾಜೇಂದ್ರ,

ಉದಯವಾಣಿ – ಎ.ಚೈತನ್ಯ, ಹೊಸದಿಗಂತ– ಯೋಗಾನಂದ, ಸಂಜೆವಾಣಿ – ಪ್ರಸನ್ನ, ಮೈಸೂರು ಮಿತ್ರ – ಕೆ.ಟಿರಮೇಶ, ಆಂದೋಲನ – ಎಚ್.ಪಿ.ಶಿವಣ್ಣ – ಹೀಗೆ ಇವರ ಆಸಕ್ತಿ ಮತ್ತು ಪ್ರವೃತ್ತಿ ಮೆಚ್ಚುವಂತದ್ದು. ಕೆ.ಮಲ್ಲಿಕಾಚರಣವಾಡಿಯವರು ಉದಯವಾಣಿ ದಿನಪತ್ರಿಕೆಯಲ್ಲಿ ಹಿರಿಯ ಉಪಸಂಪಾದಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ವಿಜಯಕರ್ನಾಟಕ ಮತ್ತು ಪ್ರಜಾನುಡಿಯಲ್ಲಿ ಸೇವೆಸಲ್ಲಿಸಿದ ಚಿಕ್ಕವಡ್ಡರ ಗುಡಿಯ ಸಿ.ಕೆ.ಮಹೇಂದ್ರ ೨೦೧೧ರ ಸಾಲಿನಲ್ಲಿ ಮೈಸೂರು ಜಿಲ್ಲಾಪತ್ರಕರ್ತರ ಸಂಘದ ನೂತನ ಅಧ್ಯಕ್ಷರಾಗಿದ್ದೂ ಕೃಷ್ಣರಾಜನಗರದವರು ಎಂಬುದು ಹೆಮ್ಮೆಯ ವಿಷಯ. ನಗರದ ಕೆ.ಪಿ.ಹರೀಂದ್ರ ವಿಜಯಕರ್ನಾಟಕದ ಕಾರ್ಯಾಲಯದಲ್ಲಿ ಸೇವೆಸಲ್ಲಿಸುತ್ತಿದ್ದಾರೆ.

ದೃಶ್ಯಮಾಧ್ಯಮದಲ್ಲಿ ಚಂದಗಾಲು ನಾಗೇಂದ್ರವರು 'ಅಮೋಘ' ಚಾನೆಲ್‌ನಲ್ಲಿ, ಸಿ.ಕೆ.ಮಹೇಂದ್ರರವರು ಅಮೋಘ ಸುದ್ದಿವಾಹಿನಿಯ ಸಂಪಾಕರಾಗಿದ್ದೂ ಇವರನ್ನು ಬಿಟ್ಟರೆ ದೃಶ್ಯಮಾಧ್ಯಮಕ್ಕೆ ಕೃಷ್ಣರಾಜನಗರದ ಕೊಡುಗೆ ಕಡಿಮೆ ಎನ್ನಬಹುದು.

ಪ್ರಸ್ತುತ ತಾಲ್ಲೂಕು ಪತ್ರಕರ್ತರ ಸಂಘ (೨೦೧೧)ದ ಆಡಳಿತ ಮಂಡಳಿಗೆ ಅಧ್ಯಕ್ಷರಾಗಿ ಪ್ರಜಾವಾಣಿಯ ವರದಿಗಾರ ಪಂಡಿತ್ ನಾಟಿಕರ್, ಉಪಾಧ್ಯಕ್ಷರಾಗಿ ಸಂಯುಕ್ತ ಕರ್ನಾಟಕದ ನಾಗೇಶ್, ಪ್ರಧಾನಕಾರ್ಯದರ್ಶಿಯಾಗಿ ಹೊಸದಿಗಂತದ ಎಸ್.ಯೋಗಾನಂದ, ಖಜಾಂಚಿಯಾಗಿ ಉದಯವಾಣಿಯ ಎ.ಚೈತನ್ಯ, ಸಹ–ಕಾರ್ಯದರ್ಶಿಯಾಗಿ ಮೈಸೂರು ಮಿತ್ರದ ಡಿ.ಮಂಜುನಾಥ, ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಕೆ.ಎಸ್.ನಾಗರಾಜ್, ಕೆ.ಟಿ.ಮಂಜುನಾತ್, ರಾಮಕೃಷ್ಣೇಗೌಡ, ರಾಜೇಂದ್ರ, ರಾ.ಸುರೇಶ್, ಶಂಕರ್ ಆಯ್ಕೆಯಾಗಿದ್ದಾರೆ.

ಒಟ್ಟಿನಲ್ಲಿ ಕೃಷ್ಣರಾಜನಗರ, ಎಚ್ಚೆಸ್ಕೆ ಮತ್ತು ಸಿ.ಪಿ.ಕೆ.ಯಂತಹ ಹಿರಿಯ ಕವಿಗಳನ್ನು ಅವರ ಹಾದಿಯಲ್ಲಿ ಸಾಗಿಬಂದ ನೂರಾರು ಬರಹಗಾರರನ್ನು ಸಾಹಿತ್ಯಾಸಕ್ತರನ್ನು ಪತ್ರಿಕೋದ್ಯಮದಲ್ಲಿಯೂ ಎಚ್ಚೆಸ್ಕೆಯವರಂಥ ಹಿರಿಯರು, ನಗರದ ವರದಿಗಾರರು ಹೀಗೆ ಇವರ ಕ್ರಿಯಾಶೀಲ ಚಟುವಟಿಕೆಗಳಿಂದ ಸಾಹಿತ್ಯ ಮತ್ತು ಪತ್ರಿಕೋದ್ಯಮ ಶ್ರೀಮಂತವಾಗಿದ್ದು ತಾಲ್ಲೂಕಿನ ಯಶಸ್ಸಿಗೆ ಕಾರಣವಾಗಿದ್ದಾರೆ.

ಪರಾಮರ್ಶನ ಲೇಖನಗಳು:

೧. ಲೇಖನ: ಕೃಷ್ಣರಾಜನಗರ – ಸಾಹಿತ್ಯ ಒಂದು ಅವಲೋಕನ
ಲೇಖಕರು: ಡಾ. ಎಚ್.ಎನ್.ಮಂಜುರಾಜ್, ಸಂಗ್ರಹ ಕಲ್ಯಾಣಪಥ
೨. ಲೇಖನ: ಪತ್ರಿಕೋದ್ಯಮ
ಲೇಖಕರು: ಕೆ.ಸಿ.ವಿಶ್ವೇಶ್ವರಯ್ಯ, ಸಂಗ್ರಹ: ಕಲ್ಯಾಣಪಥ
೩. ಪರಿಚಿತರಿಂದ ಸಂಗ್ರಹಿಸಿದ ಮಾಹಿತಿಗಳು

ಅಧ್ಯಾಯ – ೯

ತಾಲ್ಲೂಕಿನ ಚಾರಿತ್ರಿಕ ಮತ್ತು ಪ್ರೇಕ್ಷಣಿಯ ಸ್ಥಳಗಳ ಸಮೀಕ್ಷೆ

ಕಾವೇರಿ ನದಿಯ ಎರಡೂ ದಂಡಗಳ ಮೇಲೆ ವಿಶಾಲವಾಗಿ ಹರಡಿ, ಹಸಿರುಮಯ ಬಯಲು ನಡುವೆ ಇರುವ ಕೃಷ್ಣರಾಜನಗರ ತನ್ನದೇ ಆದ ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ಅಲ್ಲದೆ ಚಾರಿತ್ರಿಕವಾಗಿ ಅನೇಕ ಪ್ರೇಕ್ಷಣೀಯ ಸ್ಥಳವನ್ನೊಳಗೊಂಡಿದೆ. ನಮ್ಮ ತಾಲ್ಲೂಕಿನಲ್ಲಿ ಪ್ರಮುಖವಾಗಿ ಸಾಲಿಗ್ರಾಮ, ಚುಂಚನಕಟ್ಟೆ, ಕಪ್ಪಡಿ, ಬೇರ್‍ಯ, ಮಿರ್ಲೆ, ಚಿಕ್ಕಹನಸೋಗೆ, ಡೋರ್ನಹಳ್ಳಿ, ಇತ್ಯಾದಿಗಳು ಇಂದು ಚಾರಿತ್ರಿಕವಾಗಿ ತನ್ನದೇ ಇತಿಹಾಸವನ್ನು ಒಳಗೊಂಡು ಮೈಸೂರು ಜಿಲ್ಲೆಯಲ್ಲಿಯೇ ಪ್ರೇಕ್ಷಣೀಯ ಸ್ಥಳಗಳಾಗಿದೆ.

ಕೃಷ್ಣರಾಜನಗರದ ಹಿಂದಿನ ಎಡತೊರೆ, ಜನರ ಬಾಯಲ್ಲಿ ಇಂದಿಗೂ ಹಳೆ ಎಡತೊರೆ ಎಂದೇ ಹೇಳುವ ಈ ಕ್ಷೇತ್ರ ಪ್ರಮುಖ ಧಾರ್ಮಿಕವಾಗಿಯಲ್ಲದೇ ಚಾರಿತ್ರಿಕ ಹಿನ್ನೆಲೆಯುಳ್ಳದ್ದಾಗಿದೆ. ತಾಲ್ಲೂಕು ಕೇಂದ್ರದಿಂದ ಎರಡು ಕಿಲೋಮೀಟರ್ ದೂರವಿದ್ದು ಸೂರ್ಯನಿಗೆ ಅಂಟಿದ ಕಳಂಕ ನಿವಾರಣೆಗಾಗಿ ಭೂಲೋಕದ ಕರ್ಮ ಭೂಮಿ ಎಡತೊರೆಗೆ ಬಂದು ಸ್ನಾನಘಟ್ಟ ಜಲವುಳ್ಳ ಪುಷ್ಕರಣಿಯನ್ನು ನಿರ್ಮಿಸಿ ಒಂದು ತಿಂಗಳು ಶಿವನ ಪೂಜೆ ಮಾಡಿ ವರವನ್ನು ಪಡೆದಂತ ಪುಣ್ಯ ಭೂಮಿ ಈ ಎಡತೊರೆಯ ಅರ್ಕಕ್ಷೇತ್ರ. ಕಾವೇರಿನದಿಯ ದಂಡೆಯಲ್ಲಿದ್ದೂ, ದೇವಾಲಯದ ಪಕ್ಕದಲ್ಲಿ ಮೈಸೂರು – ಹಾಸನ ಹೆದ್ದಾರಿಯ ಡಾಂಬರ್ ರಸ್ತೆ ಅದಕ್ಕೊಂದು ಮೆರಗನ್ನು ನೀಡಿದೆ. ಶ್ರೀ ಅರ್ಕೇಶ್ವರ ಸ್ವಾಮಿ ದೇವಲಯದ ಪರಿಸರ ಶಾಂತತೆಯ ಪ್ರತೀಕವಾಗಿದೆ. ದೇವಾಲಯದ ಪ್ರವೇಶದ್ವಾರದ ರಾಜಗೋಪುರ ಮೈಸೂರು ಅರಸ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಿರ್ಮಾಣಗೊಂಡಿದೆಂದು ಹೇಳುತ್ತಾರೆ. ಸುಮಾರು ೫೦ ಅಡಿ ಎತ್ತರದ ವಿವಿಧ ದೇವತೆಗಳ ಚಿತ್ರ ಸಹಿತ ಶಿವನ ವಿವಿಧ ಅವತಾರಗಳನ್ನು ಉಳ್ಳ ಈ ರಾಜಗೋಪುರದ ತುದಿಯಲ್ಲಿ ಪಂಚಲೋಹದ ಮೂರು ಕಳಸವನ್ನು ಇಡಲಾಗಿದೆ.

ದೇವಾಲಯದ ಪ್ರವೇಶದ್ವಾರದ ಮುಂದೆ ಗರುಡ ಗಂಭವಿದ್ದು ೪೦ ಅಡಿ ಎತ್ತರದ್ದಾಗಿರುತ್ತದೆ. ತಳಭಾಗದಲ್ಲಿ ಗಣೇಶ, ನಂದಿ, ಶಿವ ಮತ್ತು ಸೂರ್ಯನ ಕೆತ್ತನೆಯುಳ್ಳ ನಂದಿ ವಿಗ್ರಹವಿದೆ. ದೇವಾಲಯದ ಸುತ್ತಲೂ ವಿಶಾಲವಾದ ಜಗುಲಿಯ

ಮಾದರಿಯಿದ್ದು, ದಕ್ಷಿಣದ ದ್ವಾರವೂ ಸೇರಿದಂತೆ ಪೂರ್ವ ಮತ್ತು ಉತ್ತರದಲ್ಲಿ ಮತ್ತೆರಡು ದ್ವಾರಗಳಿವೆ. ದೇವಾಲಯದ ಒಳಗಡೆ ವಿಶಾಲವಾದ ಪ್ರಕಾರವಿದ್ದು ಮಧ್ಯದಲ್ಲಿ ಅರ್ಕೇಶ್ವರ ಲಿಂಗವನ್ನು ಒಳಗೊಂಡ ಗರ್ಭಗುಡಿ ಇದೆ. ಇದು ಸಹ ವಿಶಾಲವಾಗಿದ್ದು, ಸೂರ್ಯನಿಂದ ಪ್ರತಿಷ್ಠಾಪಿಸಲ್ಪಟ್ಟ ಪ್ರಕಾಶಮಾನವಿದೆ. ಶಿವಲಿಂಗವಿದೆ. ಈ ಪ್ರಧಾನ ಗರ್ಭಗುಡಿಯ ಪಕ್ಕದಲ್ಲಿ ಗೌರಮ್ಮ ಮತ್ತು ಕಾಮಾಕ್ಷಮ್ಮನವರ ಸನ್ನಿದಾನವಿದ್ದು ಒಳಪ್ರಕಾರದಲ್ಲಿ ೪೦ ಲಿಂಗಗಳಿವೆ. ದೇವಾಲಯದ ಪ್ರವೇಶ ದ್ವಾರದ ಎಡಭಾಗದಲ್ಲಿ ಸೂರ್ಯ ಈಶಾನ್ಯ ಭಾಗದಲ್ಲಿ ಯಾಗ ಶಾಲೆ, ಅರ್ಕೇಶ್ವರ, ಮೀನಾಕ್ಷಮ್ಮ, ಹಿಂಭಗದಲ್ಲಿ ಚಂಡೀಕೇಶ್ವರ, ದಕ್ಷಿಣಮೂರ್ತಿ, ಗಿರಿಜಾಕಲ್ಯಾಣ ಮಂಟಪಗಳನ್ನು ಹೊಂದಿದೆ.

ಶಿವರಾತ್ರಿಯಂದು ಈ ಭಾಗದ ಜನರು ಭಕ್ತಿಪೂರ್ವಕವಾಗಿ ಶಿವಪೂಜೆಯಲ್ಲಿ ತೊಡಗುತ್ತಾರೆ. ರಾತ್ರಿಪೂರ ಜಾಗರಣೆ, ಧ್ಯಾನದಲ್ಲಿದ್ದು ಶಿವರಾತ್ರಿಯ ಬೆಳಿಗ್ಗೆ ಸೂರ್ಯನ ಕಿರಣ ಗರ್ಭಗುಡಿಯ ಲಿಂಗದ ಮೇಲೆ ಬೀಳುವುದನ್ನು ನೋಡಲು ಭಕ್ತಿಯಿಂದ ಜನ ಕಾದಿರುತ್ತಾರೆ. ಭಾಸ್ಕರನೇ ಶಿವನ ಪೂಜೆಗೆಂದು ತನ್ನ ಪ್ರಥಮ ಕಿರಣಗಳನ್ನು ಲಿಂಗದ ಮೇಲೆ ಸೂಸುತ್ತಾನೆಂದು ಜನರ ನಂಬಿಕೆಯಿದೆ.

ಪ್ರತಿವರ್ಷ ಮಾಘಶುದ್ಧ ರಥಸಪ್ತಮಿಯಂದು ನಡೆಯುವ ರಥೋತ್ಸವದ ಜಾತ್ರೆಗೆಂದು ಸ್ಥಳೀಯ ಗ್ರಾಮಸ್ಥರು ಸಂಭ್ರಮ ಸಡಗರದಿಂದ ಭಾಗವಹಿಸುತ್ತಾರೆ. ಮಾರನೆಯ ದಿನ ತೆಪ್ಪೋತ್ಸವ ನಡೆಯುತ್ತದೆ. ಇತ್ತೀಚೆಗೆ ಪುರಸಭೆಯಿಂದ ದನಗಳ ಜಾತ್ರೆಯಲ್ಲಿ ಉತ್ತಮ ರಾಸುಗಳಿಗೆ ಬಹುಮಾನದ ವ್ಯವಸ್ಥೆ ಮಾಡಲಾಗಿದೆ.

ಎಡತೊರೆಯ "ಶ್ರೀ ಅರ್ಕೇಶ್ವರ ದೇವಾಲಯ'ವು ಐತಿಹಾಸಿಕ ದೃಷ್ಟಿಯಿಂದ ಮತ್ತು ಕ್ಷೇತ್ರದ ಮಹಿಮೆಯಿಂದ ಮೈಸೂರು ಜಿಲ್ಲೆಯ ಪ್ರಮುಖ ದೇವಾಲಯಗಳಲ್ಲಿ ಒಂದಾಗಿ ವಿಶಿಷ್ಟ ಜನಪ್ರಿಯತೆಯನ್ನು ಪಡೆದಿದೆ.

ಚುಂಚನಕಟ್ಟೆ: ಕಾವೇರಿ ನದಿಯ ದಂಡೆಯಲ್ಲಿರುವ ಒಂದು ಪ್ರಮುಖ ಹಾಗೂ ಕೃಷ್ಣರಾಜನಗರ ಪ್ರಮುಖ ಪ್ರೇಕ್ಷಣೀಯ ಸ್ಥಳ– ಇಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಸೇತುವೆ ಇದೆ. ಕಾವೇರಿ ನದಿ ಬಂಡೆಗಳ ನಡುವೆ ಹರಿದು ಸುಮಾರು ಮೂವತ್ತು ಅಡಿಗಳ ಎತ್ತರದಿಂದ ದುಮ್ಮಿಕ್ಕುತ್ತಾ ಜಲಪಾತವನ್ನು ನಿರ್ಮಿಸುವುದರೊಂದಿಗೆ ಪ್ರೇಕ್ಷಣೀಯ ಸ್ಥಳವಾಗಿ ಮಾರ್ಪಟ್ಟಿದೆ. ಇಲ್ಲಿರುವ ಕೋದಂಡರಾಮ ದೇವಾಲಯ ವಿಜಯನಗರ ಶೈಲಿಯಲ್ಲಿದ್ದು ಗರ್ಭಗೃಹದಲ್ಲಿ ರಾಮ, ಲಕ್ಷ್ಮಣ, ಸೀತೆಯರ ವಿಗ್ರಹಗಳಿವೆ. ಮಕರ ಸಂಕ್ರಾಂತಿಯವರೆಗೆ ಒಂದು ವಾರಗಳ ದನಗಳ ಜಾತ್ರೆಗೆಂದು

ರಾಜ್ಯದ ನಾನಾ ಭಾಗಗಳಿಂದ ತಮ್ಮ ರಾಸುಗಳನ್ನು ತಂದು ಮಾರಾಟಮಾಡುತ್ತಾರೆ. ಇಲ್ಲಿ ನಡೆಯುವ ರಥೋತ್ಸವವವನ್ನು ನೋಡಲು ಜಿಲ್ಲೆಯ ನಾನಾ ಭಾಗಗಳಿಂದ ಜನರು ಧಾವಿಸುತ್ತಾರೆ.

"ಕಪ್ಪಡಿ" ಕೃಷ್ಣರಾಜನಗರ ಪ್ರಮುಖ ಧಾರ್ಮಿಕ ಮತ್ತು ಜಪದ ಹಿನ್ನೆಲೆಯುಳ್ಳ ಪ್ರೇಕ್ಷಣೀಯ ಸ್ಥಳ. ನಗರದಿಂದ ಆರು ಕಿಲೋಮೀಟರ್ ದೂರದಲ್ಲಿರುವ ಕಾವೇರಿನದಿಯ ದಂಡೆಯಲ್ಲಿರುವುದಲ್ಲದೇ ಮೈಸೂರಿನ ಪ್ರಭಾವಿ ಧಾರ್ಮಿಕ ಕೇಂದ್ರವಾಗಿದೆ. ರಾಚಪ್ಪಾಜಿಯವರ ಗದ್ದುಗೆ ಭಕ್ತರ ಕೇಂದ್ರ ಬಿಂದು. ಶಿವರಾತ್ರಿಯಿಂದ ಯುಗಾದಿಯವರೆಗೆ ಒಂದು ತಿಂಗಳು ಕಾಲನಡೆಯುವ ಜಾತ್ರೆಗೆ ರಾಜ್ಯದ ನಾನಾ ಭಾಗಗಳಿಂದ ಬರುವ ಭಕ್ತರು ಧಾರ್ಮಿಕ ನಂಬಿಕೆಗೆ ಅನುಗುಣವಾಗಿ ತಮ್ಮ ಹರಕೆಯನ್ನು ಸಲ್ಲಿಸಿ ಪುನೀತರಾಗುತ್ತಾರೆ. ಪರಂಪರೆಯಂತೆ ಮಳವಳ್ಳಿ ಮತ್ತು ಬೊಪ್ಪನಗೌಡನಪುರದ ಗುರುಮನೆತನದವರು ವರ್ಷಕ್ಕೊಮ್ಮೆ ಜಾತ್ರೆಯ ಪೂಜಾದಿಗಳನ್ನು ನಡೆಸಿಕೊಡುತ್ತಾರೆ. ತನ್ನದೇ ಆದ ಜಾನಪದ ಹಿನ್ನೆಲೆಯುಳ್ಳ ಕಪ್ಪಡಿಯಲ್ಲಿ ಸಿದ್ದಾಪ್ಪಾಜಿ, ಚೆನ್ನಮ್ಮನವರ ಸಮಾದಿಗಳಿವೆ. ತಾಲ್ಲೂಕಿನ ಜನತೆ ತಮ್ಮ ವ್ಯವಹಾರಗಳಲ್ಲಿ ಅನೇಕ ಪ್ರಕರಣಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೆ ಗದ್ದುಗೆಯ ಮುಂದೆ ಪ್ರಮಾಣ ಮಾಡುವುದು ವಿಶೇಷವಾಗಿದೆ.

"ಡೋರ್ನಹಳ್ಳಿ": ಇದು ತಾಲ್ಲೂಕಿನ ಪ್ರಮುಖ ಯಾತ್ರಾಸ್ಥಳಗಳಲ್ಲಿ ಒಂದಾಗಿದೆ. ಕ್ರಿಶ್ಚಿಯನ್ ಸಮುದಾಯದವರೆ ಹೆಚ್ಚಾಗಿರುವ ಕಾರಣ "ಕ್ರಿಶ್ಚಿಯನ್ ಕೊಪ್ಪಲು" ಎಂದು ಕರೆಯಲಾಗುತ್ತದೆ. ಇಲ್ಲಿರುವ ಪ್ರಸಿದ್ಧ "ಸಂತ ಅಂತೋಣಿಯವರ ಚರ್ಚ್" ಇನ್ನಷ್ಟು ಮೆರಗನ್ನು ನೀಡಿದೆ. ಒಂದು ಐತಿಹ್ಯದ ಪ್ರಕಾರ ಹೊಲವನ್ನು ಉಳುತ್ತಿದ್ದಾಗ ನೇಗಿಲ ಕೊರಡಿಗೆ ಸಿಕ್ಕ ಮನುಷ್ಯಾಕೃತಿಯ ಪ್ರತಿಮೆಯಿಂದ ಇಲ್ಲಿನ ಹಿನ್ನೆಲೆ ಪ್ರಾರಂಭವಾಗುತ್ತದೆ. ಕ್ರೈಸ್ತ ಗುರುವೊಬ್ಬನ ಆಗಮನ ಹೀಗೆ ಕಥೆ ಮುಂದುವರಿದಂತೆ ಪ್ರತಿಮೆ ಸಿಕ್ಕ ಸ್ಥಳದಲ್ಲಿ ಪುಣ್ಯಕ್ಷೇತ್ರವಾಗಿ ಚರ್ಚ್‌ವೊಂದರ ನಿರ್ಮಾಣವಾಯಿತು. ಅನೇಕ ಜನರು ಹರಕೆ ಹೊತ್ತು ತಮ್ಮ ಸಂಕಷ್ಟಗಳನ್ನು ಪರಿಹರಿಸಿಕೊಂಡ ಕಾರಣ ದಿನಕಳೆದಂತೆ ತಂಡೋಪತಂಡವಾಗಿ ಭಕ್ತರ ಆಗಮನದಿಂದ ಇಂದು ಕೃಷ್ಣರಾಜನಗರದ ಪ್ರಮುಖ ಪ್ರೇಕ್ಷಣೀಯ ಸ್ಥಳವಾಗಿ ಮಾರ್ಪಟ್ಟಿದೆ.

ಪ್ರತಿವರ್ಷ ಜೂನ್ ತಿಂಗಳಲ್ಲಿ ಒಂದು ವಾರ ನಡೆಯುವ ಜಾತ್ರೆಗೆಂದು ಕನಾಟಕವಲ್ಲದೇ ಕೇರಳ, ತಮಿಳುನಾಡು, ಆಂಧ್ರದಿಂದಲೂ ಜನರು ಪಾಲ್ಗೊಂಡು ಬಲಿಪೂಜೆ, ವಿಶೇಷ ಪ್ರಾರ್ಥನೆಯಲ್ಲಿ ಸೇರುತ್ತಾರೆ.

"ಸಾಲಿಗ್ರಾಮ" ತಾಲ್ಲೂಕಿನ ಪ್ರಮುಖ ಚಾರಿತ್ರಿಕ ಸ್ಥಳ. ವಐಷ್ಣವರ ಧಾರ್ಮಿಕ ಕೇಂದ್ರವಾಗಿದ್ದು, ರಾಮಾನುಜರ ಆಗಮನದ ಬಗ್ಗೆ ಉಲ್ಲೇಖಗಳಿವೆ. ಇಲ್ಲಿರುವ ಯೋಗಾನರಸಿಂಹ, ರಾಮಾನುಜ, ಶಂಭುಲಿಂಗೇಶ್ವರ, ಜ್ಯೋತಿರ್ಮಯೇಶ್ವರ ದೇವಾಲಯಗಳು ವೈಷ್ಣವರಿಗೆ ಸಂಬಂಧಿಸಿದ್ದರೆ, ಅನಂತನಾಥ, ನೇಮಿನಾಥ, ಪಾರ್ಶ್ವನಾಥರ ಬಸದಿಗಳು ಜೈನರಿಗೆ ಸಂಬಂಧಿಸಿದೆ. ಇಲ್ಲಿರುವ ಮಸೀದಿಗಳಿಂದ ಸಾಲಿಗ್ರಾಮವು ಹಿಂದೂ, ಜೈನ ಮತ್ತು ಮುಸ್ಲಿಂಮರಿಗೆ ಚಾರಿತ್ರಿಕವಾಗಿ ಪ್ರಮುಖ ಸ್ಥಳವಾಗಿದೆ.

"ಮಿರ್ಲೆ" ಕೃಷ್ಣರಾಜನಗರದಿಂದ ಹತ್ತು ಕಿಲೋಮೀಟರ್ ದೂರದಲ್ಲಿದ್ದು, ಹೊಯ್ಸಳರ ಕಾಲದ ಚನ್ನಕೇಶವ, ಯೋಗ ನರಸಿಂಹ ಮತ್ತು ಕೋದಂಡರಾಮ ದೇವಾಲಯಗಳು ಹದಿನೈದನೇ ಶತಮಾನದ ಚಂಗಾಳ್ವರ ಆಳ್ವಿಕೆಯ ಕಾಲದೆಂದು ಹೇಳಲಾಗಿದೆ.

ಹಂಪಾಪುರ ಮತ್ತು ಬೇರ್ಯದಲ್ಲೂ ಕ್ರಮವಾಗಿ ದುರ್ಗಾಪರಮೇಶ್ವರಿ ಹಾಗೂ ಚನ್ನಕೇಶವ ದೇವಾಲಯಗಳು ಹೊಯ್ಸಳರ ಕಾಲದೆಂದು ಹೇಳಲಾಗಿದೆ. ಶಿವರಾತ್ರಿ ಸಮಯದಲ್ಲಿ ಇಲ್ಲಿ ದೊಡ್ಡ ಜಾತ್ರೆ ನಡೆಯುವುದು ವಿಶೇಷ.

"ಚಿಕ್ಕಹನಸೋಗೆ" ತಾಲ್ಲೂಕಿನಲ್ಲಿರುವ ಇನ್ನೊಂದು ಜೈನಕ್ಷೇತ್ರ. ಹತ್ತನೇ ಶತಮಾನದ ದಾಖಲೆಯಲ್ಲಿ ಇದರ ಉಲ್ಲೇಖವಿದೆ. ಚೆಂಗಾಳ್ವರ ಕಾಲದೆಂದು ಹೇಳಲಾದ ಆದಿನಾಥ ಅಥವಾ ಅಭಯ ಜಿನಾಲಯ ವೀರ ರಾಜೇಂದ್ರನ ಕಾಲದಾಗಿದ್ದು ಸುಂದರ ಕೆತ್ತನೆಯಲ್ಲಿ ಅಲಂಕರಿಸಲಾಗಿದೆ. ಶಾಂತಿನಾಥ ಗರ್ಭಗೃಹದ ಕಲ್ಲಿನ ತೊಲೆಯೊಂದರ ಶಾಸನದ ಪ್ರಕಾರ ಹನಸೋಗೆ ಜೈನಮುನಿ ಪರಂಪರೆಯಲ್ಲಿ ಪ್ರಭಾವಿ ಕೇಂದ್ರವಾಗಿತ್ತೆಂದು ಹೇಳಬಹುದಾಗಿದೆ.

"ಜಪದಕಟ್ಟೆ": ಇದು ನಗರದ ಸಾಲಿಗ್ರಾಮ ಬಳಿ ಇರುವ ಹೆಬ್ಬೂರು ಗ್ರಾಮದ ಒಂದು ಸುಂದರ ತಾಣ. ಕಾವೇರಿಯ ದಕ್ಷಿಣಾಭಿಮುಖವಾಗಿ ಹರಿಯುವ ಈ ಸ್ಥಳ ಸ್ಕಂದ ಪುರಾಣದಲ್ಲಿ ಜಪ್ಯೇಶ್ವರ ಕ್ಷೇತ್ರವೆಂದು ಕರೆಯಲಾಗಿದೆ. ಈ ಸ್ಥಳದಲ್ಲಿ ಜಾಬಾಲಿ ಮಹರ್ಷಿಗಳು ಶ್ರೀರಾಮನಿಗೆ ತತ್ತ್ವೋಪದೇಶ ನೀಡಿದರೆಂದು ಶಿವೋಪನಿಷತ್‌ನಲ್ಲಿ ಉಲ್ಲೇಖವಿದೆ. ಇತ್ತೀಚೆಗೆ ನಗರದ ಎಡತೊರೆ ಯೋಗಾನಂದೇಶ್ವರ ಮಠದವರು ತಮ್ಮ ಸುಪರ್ದಿಗೆ ಪಡೆದು ಗುರುಭವನ, ಗೋಶಾಲೆ, ವಾಸಗೃಹ ಸೇರಿದಂತೆ ಅನೇಕ ಸೌಲಭ್ಯಗಳನ್ನು ಒದಗಿಸಿರುತ್ತಾರೆ.

ಒಟ್ಟಿನಲ್ಲಿ ಮೈಸೂರು ಜಿಲ್ಲೆಯ ಕೃಷ್ಣರಾಜನಗರ ಕಾವೇರಿ ತಟದ ಅನೇಕ ಭಾಗಗಳು ಪವಿತ್ರ ಧಾರ್ಮಿಕ ಕ್ಷೇತ್ರಗಳನ್ನು ಒಳಗೊಂಡು ತನ್ನದೇ ಆದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಂದ ಪ್ರೇಕ್ಷಣೀಯ ಸ್ಥಳವಾಗಿದೆ.

ಶಾಸನಗಳು:

ಯಾವುದೇ ಪ್ರದೇಶದ ನಿನ್ನೆಯ ದಿನಗಳ ಬಗ್ಗೆ ಎಂದರೆ ಚರಿತ್ರೆಯ ಬಗ್ಗೆ ಬರೆಯಲು ಶಾಸನಗಳೇ ಸರಿಯಾದ, ಸಾಧುರೂಪದ ದಾಖಲೆಗಳು. ಶಾಸನಗಳನ್ನು ಸಮಕಾಲೀಸಾಕ್ಷಿಗಳೆಂದು ಹೇಳುತ್ತಾರೆ. ಅಲ್ಲಿನ ಜನರ ಭಾಷೆ, ಸಾಹಿತ್ಯ, ಸಂಸ್ಕೃತಿ, ವಾಸ್ತುಶಿಲ್ಪ ಹಾಗೂ ಇತಿಹಾಸ ಇತ್ಯಾದಿಗಳನ್ನು ತಿಳಿಸಿಕೊಡುವ ಅಮೂಲ್ಯ ಸಾಧನಗಳು. ಕನ್ನಡನಾಡಿನ ಬಗ್ಗೆ ಅದರಂತರ್ಗತ ಎಡತೊರೆ ನಾಡಿನಲ್ಲೂ ಶಾಸನ ಸಂಪತ್ತು ಹೇರಳವಾಗಿದೆ. ಇಲ್ಲಿ ೧೮೦ ಗ್ರಾಮಗಳಿದ್ದು ಸುಮಾರು ೩೧ ಗ್ರಾಮಗಳಲ್ಲಿ ಶಾಸನಗಳು ದೊರಕಿದ್ದು ದಾಖಲೆಗೊಂಡಿವೆ. ತಾಲ್ಲೂಕುಗಳ ವಿಂಗಡಣೆಯ ಕಾಲದಲ್ಲಿ ಗ್ರಾಮಗಳ ಸೇರ್ಪಡೆಯಲ್ಲಿ ನಾಮಸದೃಶದಿಂದ ಇನಿತುಗೊಂಡು ಆಗಿರಲೂಬಹುದು. ಒಮ್ಮೊಮ್ಮೆ ಒಂದೇ ಹೆಸರಿನ ಎರಡು ಊರುಗಳು ಅಕ್ಕಪಕ್ಕದ ಎರಡೂ ತಾಲ್ಲೂಕು-ಗಳಲ್ಲಿಯೂ ಕಂಡುಬರುವುದುಂಟು. ಹೀಗಾಗಿಯೂ ಗೊಂದಲಕ್ಕೆ ಎಡಕೊಟ್ಟಿರಬಹುದು. "ಅಡಗೂರು" ಎಂಬ ಗ್ರಾಮವನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಕರ್ನಾಟಕ ಗ್ರಾಮಸೂಚಿಯಲ್ಲಿ ಕೃಷ್ಣರಾಜನಗರ ಮತ್ತು ಪಿರಿಯಾಪಟ್ಟಣ ಎರಡೂ ತಾಲ್ಲೂಕುಗಳಲ್ಲಿ ಈ ಹೆಸರಿನ ಗ್ರಾಮಗಳಿವೆ. ಪ್ರಸ್ತುತ ಕೃಷ್ಣರಾಜನಗರ ತಾಲ್ಲೂಕಿನಲ್ಲಿ ೧೧೯ ಶಾಸನಗಳು ದೊರಕಿ ಉಲ್ಲೇಖಗೊಂಡಿವೆ. ಎಡತೊರೆ ನಾಡು [ಎ(ಯೆ)ಡ(ಡೆ)ತೊ(ದೊ)ರೆ(ಱೆ) ನಾಡು], ಎಡತೊಱೆನಾಡು ಸಾಸಿರ ಮತ್ತೆ ಎಡೆನಾಡು ಮುಂತಾಗಿ ಕಾವೇರಿ ಎಡಭಾಗದ ಪ್ರದೇಶ ಒಂದು ಆಡಳಿತ ವಿಭಾಗವಾಗಿ ಬಹಳ ಕಾಲದಿಂದಲೂ ಪ್ರಸಿದ್ಧ.

ಕೃಷ್ಣರಾಜನಗರ ತಾಲ್ಲೂಕಿನಲ್ಲಿ ದೊರೆತ ಶಾಸನಗಳು ಗಂಗ, ಚೋಳ, ಹೊಯ್ಸಳ, ವಿಜಯನಗರ, ಕೊಂಗಾಳ್ವರು, ಚಂಗಾಳ್ವರು, ಉಮ್ಮತ್ತೂರು, ಬೇಲೂರು ಮತ್ತು ಮೈಸೂರು ಒಡೆಯರ ಮನೆತನಗಳ ಆಡಳಿತಕ್ಕೆ ಸಂಬಂಧಿಸಿದವು. ಗಂಗರ ಆಡಳಿತಕ್ಕೆ ಸಂಬಂಧಿಸಿದಂತೆ ಅತ್ಯಂತ ಪ್ರಾಚೀನ ದಾಖಲೆಯೆಂದರೆ ಶ್ರೀಪುರುಷ ಮಹಾರಾಜನ ಶಾಸನ (ಕೃನ ೪೮). ಇದು ಅವನ ಪಟ್ಟಾಭಿಷೇಕದ ಸಂಗತಿಯನ್ನು ತಿಳಿಸಿ ಆ ಸಂದರ್ಭದಲ್ಲಿ ನೀಡಿದ ದತ್ತಿಯನ್ನು ದಾಖಲಿಸಿದೆ. ದತ್ತಿಪಡೆದ ವ್ಯಕ್ತಿ ವಾತಾಪಿಯ ನಾಗಶರ್ಮನ ಪುತ್ರ ಬಾಣಶರ್ಮ, ದತ್ತಿ ನೀಡಿದ ಗ್ರಾಮವು ತೇಗಟ್ಟೂರು

ವಿಷಯದಲ್ಲಿ 'ಬಾರದೂರು' ಎಂದು ಅಭಿದಾನವನ್ನು ಹೊಂದಿತು. ಶ್ರೀಪುರುಷನ ಸಿಂಹಾಸನರೋಹಣವನ್ನು ದಾಖಲಿಸಿ ತನ್ನಷ್ಟಕ್ಕೆ ಇದೊಂದು ಅತಿ ಮಹತ್ವದ ದಾಖಲೆಯಾಗಿದೆ ಗಂಗರ ಇತಿಹಾಸದಲ್ಲಿ. ಇಂತಹುದೇ ಇನ್ನೊಂದು ಶಾಸನ ಗಂಗ ರಾಚಮಲ್ಲನ ಪೆರ್ಜರಂಗಿಯ ದಾನಶಾಸನ (ಕೃನ ೪೯). ಗಳಿಗೆಕೆರೆ ಗ್ರಾಮದಲ್ಲಿ ದೊರೆತ ಗಂಗರ ಶಾಸನವು (ಕೃನ ೧೦೫) ಕೂಟಶಾಸನವಾಗಿದೆ. ಗಂಗರ ಕೂಟ ಶಾಸನಗಳ ಬಗ್ಗೆ ಬೇರೆ ಕಡೆಗೆ ಸಾಕಷ್ಟು ಬಂದಿದೆ.

ಚೋಳರ ಅಧೀನಕ್ಕೊಳಕ್ಕಾಗಿ ಆಡಳಿತ ನಡೆಸಿದವರು ಕೊಂಗಾಳ್ವರು ಮತ್ತು ಚಂಗಾಳ್ವರು. ಮೂಲತಃ ಚಂಗಾಳ್ವ ವಂಶಕ್ಕೆ ಸಂಬಂಧಪಟ್ಟ ಹೊಯ್ಸಳರು ಗಂಗರ ಜೊತೆಗೆ ಸೇರಿ ಚೋಳರ ವಿರೋಧಿಗಳಾದರು. ಹೊಯ್ಸಳರಲ್ಲೇ ವಿನಯಾದಿತ್ಯ ಹೊಯ್ಸಳರು ಚಾಳುಕ್ಯ ಚಕ್ರವರ್ತಿ ಅಹವಮಲ್ಲ ಸೋಮೇಶ್ವರ ದೊರೆಯ ಜೊತೆಗೆ ಲಗ್ನ ಸಂಬಂಧಗಳ ಮೂಲಕ ತಮ್ಮ ರಾಜ್ಯಕ್ಕೆ ಭದ್ರವಾದ ಅಡಿಪಾಯವನ್ನು ಹಾಕಿದರು. ಹೊಯ್ಸಳರ ಶಾಸನಗಳಲ್ಲಿ ಚಿಕ್ಕ ಹನಸೋಗೆಯ ಒಂದು ಸಾಸನ (ಕೃ.ನ. ೩೯) ಮುಮ್ಮಡಿ ಬಲ್ಲಾಳನಿಗೆ ಹಂಪೆವೊಡೆಯ ಎಂಬ ಮಗನಿದ್ದುದ್ದಾಗಿ ತಿಳಿಸುತ್ತದೆ. ಈತ ವಿರೂಪಾಕ್ಷ ಬಲ್ಲಾಳ ಆಗಿರಬಹುದೇ? ಇದು ವಿಚಾರಣೀಯ. ಬೇರೆಯಾದರೆ ಇವನು ಇನ್ನೊಬ್ಬ ಮಗ.

ಚಂಗಾಳ್ವರ ಆಳ್ವಿಕೆಯಲ್ಲಿ ಹುಟ್ಟಿದ ಚಿಕ್ಕಹನಸೋಗೆಯ ತ್ರಿಕೂಟ ಬಸದಿ ಹಲವು ಶಾಸನಗಳನ್ನು ಹೊಂದಿದೆ. ಇವು ಜೈನಧರ್ಮದ ಬಗ್ಗೆ ಅದರ ಒಂದು ಗುರುಪರಂಪರೆಯ ಬಗ್ಗೆ ವಿಶೇಷ ಬೆಳಕನ್ನು ಬೀರುತ್ತದೆ. ಇಲ್ಲಿನ ಶಾಸನಗಳು ಜಯಕೀರ್ತಿ ಅವರ ನಾಮಧೇಯ ಚಂದ್ರಿಯಣದೇವ ಕನ್ನಡ ಸಾಹಿತ್ಯಕ್ಕೆ ಒಂದು ಅಮೂಲ್ಯ ಕೊಡುಗೆಯನ್ನು ಕೊಟ್ಟ ವ್ಯಕ್ತಿ. ಈ ಛಂದೋನುಶಾಸನವನ್ನು ಬರೆದಿರುವನು. ಕ್ರಿ.ಶ.೧೧೦೦ನೆಯ ವರ್ಷದ ಫೆಬ್ರವರಿಯಲ್ಲಿ ಬರೆಯಲಾದ (ಕೃನ ೨೩) ಶಾಸನದ ಪ್ರಕಾರ ದಿವಾಕರಣಂದಿ ಯತಿಗಳ ಶಿಷ್ಯ (ಕೃನ ೩೩) ಈ ಎಲ್ಲ ಶಾಸನಗಳ ಅಧ್ಯಯನದಿಂದ ಈ ಗುರುಪರಂಪರೆಯನ್ನು ಹೀಗೆ ಗುರುತಿಸಬಹುದು.

ಪೂರ್ಣಚಂದ್ರ

ದಾಮನಂದಿ

ಶ್ರೀಧರಾಚಾರ್ಯ

ಮಲಧಾರಿದೇವ

ಚಂದ್ರಕೀರ್ತಿಬ್ರತಿ

ದಿವಾಕರಣಂದಿಸಿದ್ಧಾಂತದೇವ

ಜಯಕೀರ್ತಿ/ಚಂದಾರುದುಣೀದೇವ

ದಿವಾಕರಣಂದಿ ಸಿದ್ಧಾಂತರು ಸಂಸ್ಕೃತ ಕನ್ನಡ ಹಾಗೂ ಪ್ರಾಕೃತ ಭಾಷೆಗಳಲ್ಲಿ ಪಂಡಿತರು. ಅವರು ಕನ್ನಡದಲ್ಲಿ ಬರೆದ ಪ್ರಥಮರು. ಅವರ ಶಿಷ್ಯರಾದ ಜಯಕೀರ್ತಿ ಛಂಧೋನುಶಾಸನವನ್ನು ಬರೆದ ಅದರಲ್ಲಿ ಕನ್ನಡ ಛಂದೋಬಂಧಗಳಿಗೆ ಒತ್ತುಕೊಟ್ಟು ಒಂದು ಅಧಿಕರಣವನ್ನೇ ಬರೆಸಿದ್ದಾರೆ. ಕನ್ನಡ ಛಂದಸ್ಸಿನ ಅಧ್ಯಯನಕ್ಕೆ ಹೊಸ ಆಯಾಮವನ್ನೇ ತೆರೆದಿದ್ದಾರೆ. ಆ ಕೃತಿಯಲ್ಲಿ ಕನ್ನಡ ಛಂದೋಬಂಧಗಳಿಗೆ ಮೂಲ "ಅಕ್ಕರ" (ಪಿರಿಯಕ್ಕರ) ಎಂಬುದನ್ನು ತಿಳಿಸಿದ್ದಾರೆ. ಛಂದಶಾಸ್ತ್ರದ ಅಧ್ಯಯನದಲ್ಲಿ ಛಂದೋನುಶಾಸನಕ್ಕೆ ಒಂದು ವಿಶಿಷ್ಟಸ್ಥಾನವಿದೆ. ಚಿಕ್ಕಹನಸೋಗೆಯ ಯತಿ ಪರಂಪರೆ ಆ ಮುಂದೆ ಇಡೀ ಕರ್ನಾಟಕದ ಜೈನಧರ್ಮದ ಪ್ರಾಂಗಣದಲ್ಲಿ ತನ್ನದೇ ಆದ ಒಂದು ಅಂಕಣವನ್ನು ಹೊಂದಿದೆ. ಗಂಗರ ಕಾಲದಿಂದಲೂ ಜೈನಧರ್ಮ ಇಲ್ಲಿ ತನ್ನ ಹಿರಿಮೆ ಗರಿಮೆಗಳನ್ನು ಸ್ಥಾಪಿಸಿಕೊಂಡಿದೆ.

ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಒಂದು ಸಾಲಿನ ಶಾಸನ (ಕೃನ ೩೨) "ಶ್ರೀ ದೇಶೀಸಗಗಣ ಪುಸ್ತಕಗಚ್ಚದ ಬಸದಿ ಈ ಊರಲಿ ೬೪" ಎಂಬುದರಿಂದ ೩೯೭ ಪಂಕ್ತಿಗಳನ್ನು ಹೊಂದಿರುವ ದೊಡ್ಡಶಾಸನ (ಕೃನ ೧೧೮) ಸ್ವರೂಪದ ಭಿನ್ನ ಭಿನ್ನ ಬಗೆಯ ಶಾಸನಗಳಿವೆ. ಅವುಗಳಲ್ಲಿ ಅಡಗಿರುವ ಧಾರ್ಮಿಕೋ ಸಾಮಾಜಿಕ - ಸಾಂಸ್ಕೃತಿಕ ಅಧ್ಯಯನ ಆಗಬೇಕು.

ಸಹಾಯಕ ಲೇಖನಗಳು:

೧. ಲೇಖನ: ನಗರದ ಚಾರಿತ್ರಿಕ ಸ್ಥಳಗಳು
ಲೇಖಣ – ಕನ್ನಂಬಾಡಿ ಶಿವಶಂಕರ್, ಸಂಚಿಕೆ - ಕಲ್ಯಾಣಪಥ, ಪ್ರಕಾಶಕರು: ಶ್ರೀ ಶಿವರಾತ್ರೀಶ್ವರ ಜಯಂತಿ ಮಹೋತ್ಸವ ಸಮಿತಿ, ಕೃಷ್ಣರಾಜನಗರ.

೨. "ಸ್ನೇಹಸಂಪದ" ಬೆಳ್ಳಿಹಬ್ಬದ ಸ್ಮರಣಸಂಚಿಕೆ, ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘ, ಕೃಷ್ಣರಾಜನಗರ ಶಾಖೆ.

ಅಧ್ಯಾಯ - ೧೦
ನಗರದ ಏಳಿಗೆಗೆ ದುಡಿದ ಮಹನೀಯರು

ಎಡತೊರೆ ಕೃಷ್ಣರಾಜನಗರವಾಗಿ ೧೯೩೪ರಲ್ಲಿ ನೂತನವಾಗಿ ನಗರ ನಿರ್ಮಾಣಗೊಂಡಿತು. ಅಲ್ಲಿಂದ ಇಲ್ಲಿಯವರೆಗೆ ಸುಮಾರು ೭೫ ವರ್ಷಗಳಲ್ಲಿ ನಗರ ಸಾಕಷ್ಟು ಮುನ್ನಡೆದು ಇಂದು ಸರ್ವ ರೀತಿಯಿಂದಲೂ ಪ್ರಗತಿಯ ಪಥದಲ್ಲಿದೆ. ಈ ಹಾದಿಯಲ್ಲಿ ನಗರ ಅನೇಕ ಮಹನೀಯರ ಕೊಡುಗೆ ಅಸದೃಶವಾದುದು. ನಾಲ್ವಡಿ ಕೃಷ್ಣರಾಜ ಒಡೆಯರವರ ಆಶೀರ್ವಾದ, ಮಿರ್ಜಾ ಇಸ್ಮಾಯಿಲ್‌ರ ಬುದ್ಧಿಚಾತುರ್ಯ, ವಿಶ್ವೇಶ್ವರಯ್ಯನವರ ದೂರದೃಷ್ಟಿಯ ಫಲ ಮತ್ತು ಜರ್ಮನಿಯ ತಾಂತ್ರಿಕ ಶಿಲ್ಪಿ ಕ್ರೆಂಬಿಗಲ್‌ನ ನಿಮದಿತ ಕೃಷ್ಣರಾಜನಗರದ ಅಭಿವೃದ್ಧಿಯ ಪಥಕ್ಕೆ ಅಡಿಪಾಯವಾಗಿದೆ.

ಕನ್ನಡದ ಹಿರಿಯ ಕವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಮಾಸ್ತಿ ವೆಂಕಟೇಶ್ ಅಯ್ಯಂಗಾರ್‌ರವರು "ಹೊಸನಗರ ನಿರ್ಮಾಣ ಸಮಿತಿ"ಯ ಅಧ್ಯಕ್ಷರಾಗಿ (೧೯೨೮-೧೯೨೯) ನೂತನ ನಗರದ ರೂಪುರೇಷೆಗಳನ್ನು ಸಿದ್ಧಪಡಿಸಿದರು. ನವರತ್ನ ರಾಮರಾಯರು ಎಡತೊರೆ ತಾಲ್ಲೂಕು ಅಮಲ್ದಾರರಾಗಿದ್ದವರು. ನಾಡಿನ ಪ್ರಸಿದ್ಧ ವಿದ್ವಾಂಸರಾದ ಖ್ಯಾತ ಅಂಕಣಕಾರ, ಸಾಹಿತಿ ಎಚ್ಚೆಸ್ಕೆ, ಸಿಪಿ.ಕೆ. ಸಾಕಷ್ಟು ಜನ ಸಾಹಿತಿಗಳನ್ನು, ಸಾಂಸ್ಕೃತಿಕ ಸಂಪನ್ನರನ್ನು ಹೊಂದಿರುವ ನಗರ, ಮಹನೀಯರ ತವರಾಗಿದೆ.

ಕೃಷ್ಣರಾಜನಗರದ ನಿವಾಸಿಗಳು ಹತ್ತೂ ಜನದ ಒಂದು ಬಸವೇಶ್ವರ ಸ್ವಾಮಿಯ ದೇವಾಲಯವನ್ನು ಮತ್ತು ಮದುವೆ ಮುಂತಾದ ಕಾರ್ಯಗಳಿಗೆಂದು ಉಚಿತವಾಗಿ ನೀಡಿದ ಶ್ರೀ ಸಿದ್ದಲಿಂಗಪ್ಪನವರು 'ಛತ್ರದ ಸಿದ್ದಲಿಂಗಪ್ಪ' ಎಂದೇ ಪರಿಚಿತರು. ಇದಕ್ಕೆ ಆರ್.ಬಿ.ಶೀರಪ್ಪನವರ ಪ್ರೋತ್ಸಾಹ ಕೂಡ ಇದೆ.

ಸುಮಾರು ವರ್ಷಗಳ ಹಿಂದೆ ಬಳೆನಂಜುಂಡಶೆಟ್ಟರು, ಎಂ.ಮಲ್ಲಿಕಾರ್ಜುನಪ್ಪ ನವರು, ಕುಂದೂರಪ್ಪ, ವೈ.ಎನ್.ನಂಜುಂಡಪ್ಪ, ಆರ್.ಬಿ.ಸೋಮಪ್ಪ, ಆರ್.ಟಿ.ಗುರುಕಾರ್ ಮುಂತಾದ ಮಹನೀಯರ ಆಸಕ್ತಿಯಿಮದ ಶ್ರೀಮದ್ ರಂಭಾಪುರಿ ಅಡ್ಡಪಲ್ಲಕ್ಕಿ ಉತ್ಸವ ನಡೆಸಿ ನಗರಕ್ಕೆ ಅನೇಕ ಸಾಂಸ್ಕೃತಿಕ ಕಾರ್ಯ ಕ್ರಮಗಳನ್ನು ಉಣಬಡಿಸಿದರು. ಶ್ರೀ ಆರ್. ಚಿಕ್ಕಬಸಪ್ಪ, ಎಂ.ಎಂ.ಮಲ್ಲಿಕಾರ್ಜುನಪ್ಪನವರ ಶ್ರಮದ ಫಲವಾಗಿ ಮದುವೆ

ಅನೇಕ ಕಾರ್ಯಕ್ರಮಕ್ಕೆಂದು ಶಿವಾನುಭವ ಮಂಟಪವನ್ನು ನಿರ್ಮಿಸಿದರು. ಇಂತಹ ಭಕ್ತಿ ಕಾರ್ಯದ ಜೊತೆಗೆ ಶ್ರೀ.ಬಿ.ಎಸ್.ತೋಂಟದಾರ್ಯ, ವೈ.ಆರ್.ಬಸವರಾಜುರವರ ಶ್ರಮದಿಂದ ರಾಜ್ಯಮಟ್ಟದ ಬಾಲ್‌ಬ್ಯಾಟ್‌ಮಿಂಟನ್ ಸ್ಪರ್ಧೆ, ರಾಜ್ಯಮಟ್ಟದ ನಾಟಕ ಸ್ಪರ್ಧೆ ಏರ್ಪಡಿಸಿದ್ದರು.

ಬಳೆಸಿದ್ದಲಿಂಗಶೆಟ್ಟರು ತಮ್ಮ ತಾಯಿಯ ಹೆಸರಿನಲ್ಲಿ ಒಂದು ಬೃಹತ್ ಹೆರಿಗೆ ಆಸ್ಪತ್ರೆಯನ್ನು ಕಟ್ಟಿಸಿ ಮೈಸೂರು ರಾಜರಿಂದ "ಲೋಕಾಸೇವಾನಿರತ" ವೆಂಬ ಬಿರುದಿಗೆ ಪಾತ್ರರಾದರು. ಈಗಿರುವ ಗೌರಿಶಂಕರ ಚಿತ್ರಮಂದಿರ ಬಳೆ ಬಸವರಾಜಪ್ಪನವರ ಕೊಡುಗೆ. ಬಳೆಸಿದ್ದಲಿಂಗಶೆಟ್ಟರ ಮಕ್ಕಳಾದ ಬಿ.ಎಸ್. ಮಾದಪ್ಪನವರು ಐ.ಎ.ಎಸ್. ಅಧಿಕಾರಿಯಾಗಿ ಗಣ್ಯ ಹುದ್ದೆಗಳಲ್ಲಿ ಸೇವೆಸಲ್ಲಿಸಿರುವರು. ಅಲ್ಲದೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಜೈಲು ವಾಸ ಅನುಭವಿಸಿದವರು.

ದಿವಂಗತರುಗಳಾದ ದೇವೋಜಿರಾವ್, ವೈ.ಟಿ.ಗುಂಡುರಾವ್, ಬಳೆಬಸವ ರಾಜಪ್ಪ, ವೈಆರ್.ಪುಟ್ಟಣ್ಣಯ್ಯ, ಕೆ.ಎಸ್.ಗೌಡಯ್ಯನವರು ತಮ್ಮ ಜೀವನವನ್ನೇ ನಗರದ ಅಭಿವೃದ್ಧಿಗೆ ಮುಡಿಪಾಗಿಟ್ಟಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ೧೯೩೦ರಿಂದೀಚೆಗೆ ನಮ್ಮ ನಗರದ ಅನೇಕರು ಹುರುಪಿನಿಂದ ಕೆಲಸಮಾಡಲು ಪ್ರಾರಂಭಿಸಿದರು. ವಾಣಿಜ್ಯೋದಮಿಗಳಾದ ಆರ್.ಬಿ.ಪುಟ್ಟಬಸಪ್ಪನವರು, ಸಾಲಿಗ್ರಾಮದ ಗಣಪತಿಶಾಸ್ತ್ರಗಳು ಯುವಕರನ್ನು ಒಂದು ಕಡೆ ಕಲೆ ಹಾಕಿ ಸ್ವಾತಂತ್ರ್ಯಕ್ಕೋಸ್ಕರ ಕೆಲಸ ಮಾಡಲು ಪ್ರೇರೇಪಿಸಿದರು. ನಗರದ ಅನೇಕ ಮಹನೀಯರು ಜೈಲುಪಾಲಾದರು. ಅವರಲ್ಲಿ ಟಿ.ಸಿದ್ದಲಿಂಗಯ್ಯ, ಎಚ್.ತಮ್ಮಯ್ಯ, ವೈ.ಎಸ್. ತೊಟಪ್ಪ, ಆರ್.ಬಿ.ಶಿವಪ್ಪ, ಕೆ.ಎಂ.ಮಲ್ಲಪ್ಪ ಮೊದಲಾದವರು. ೧೯೪೭ರ ಮೈಸೂರು ಚಳುವಳಿಯಲ್ಲಿ ನಮ್ಮ ನಗರದ ಅನೇಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅವರಲ್ಲಿ ಬ್ರಿಟೀಷರ ಗುಂಡಿಗೆ ಬಲಿಯಾದ ಕೋಗಿಲೂರಿನ ಶಂಕರಪ್ಪನೂ ಒಬ್ಬ.

ಕೃಷ್ಣರಾಜನಗರಕ್ಕೆ ಭತ್ತದ ಕಣಜವೆಂಬ ಹೆಸರು ಬರಲು ಪಟೇಲ್ ರುದ್ರಪ್ಪ, ರಾವಂದೂರು ಕುಂದೂರು ಬಸಪ್ಪನವರ ಹೆಸರು ಸ್ಮರಣೀಯ. ಜನೋಪಯೋಗಿ ಕಾರ್ಯದಲ್ಲಿ ಆರ್.ಬಿ.ಶಿವಪ್ಪನವರು ಬಸವ ಜಯಂತಿಯ ಉತ್ಸವದಂದು ನಾಡಿನ ಹೆಸರಾಂತ ಸಾಹಿತಿಗಳಾದ ಅ.ನ.ಕೃ. ಬಸವರಾಜಕಟ್ಟೀಮನೀ, ಚಿದಾನಂದಮೂರ್ತಿ ಯವರನ್ನು, ಸಂಗೀತ ಕಲಾವಿದರಾದ ಟಿ.ಚೌಡಯ್ಯ, ಹೊನ್ನಪ್ಪ ಭಾಗವತಾರ್‌ರವರನ್ನು ರಾಜ್ಯ ನಾಯಕರಾದ ಕೆಂಗಲ್‌ಹನುಮಂತಯ್ಯ, ಎಸ್. ನಿಜಲಿಂಗಪ್ಪನವರು, ಬಿ.ಡಿ.ಜತ್ತಿ,

ಎಚ್.ಎಂ.ಚನ್ನಬಸಪ್ಪನವರು ಭಾಗವಹಿಸಿ ನಮ್ಮ ನಗರದ ಬೆಳವಣಿಗೆಗೆ ಸಹಾಯಕ-ರಾಗಿದ್ದಾರೆ.

೧೯೪೭ರಲ್ಲಿ ಪ್ರಥಮ ಪುರಸಭೆಗೆ ಶ್ರೀ ಬಳೆಬಸವರಾಜಪ್ಪನವರು ಅಧ್ಯಕ್ಷ-ರಾದರು. ಇಲ್ಲಿಯವರೆಗೆ ೨೦ಕ್ಕೂ ಹೆಚ್ಚು ಮಂದಿ ಪುರಸಭಾ ಅಧ್ಯಕ್ಷರಾಗಿ ಕೃಷ್ಣರಾಜ ನಗರದ ಸರ್ವೋತೋಮುಖ ಅಭಿವೃದ್ಧಿಗೆ ಸಹಕರಿಸಿರುವರು. ೧೯೫೨ರಿಂದ ಇಲ್ಲಿಯವರೆಗೆ ಅನೇಕ ಶಾಸಕರನ್ನು ಕಂಡಿದೆ. ನಗರದ ಹಿರಿಯ ರಾಜಕಾರಣಿಗಳಾದ ಎಸ್.ನಂಜಪ್ಪನವರು, ಎಚ್.ವಿಶ್ವನಾಥರವರು ಹಲವಾರು ಬಾರಿ ಈ ಕ್ಷೇತ್ರದಿಂದ ಶಾಸಕರಾಗಿ ಹಲವಾರು ಖಾತೆಗಳಲ್ಲಿ ಸಚಿವರಾಗಿ ನಗರದ ಬೆಳವಣಿಗೆಗೆ ಪಾಲು ನೀಡಿರುವರು.

ಯಾವುದೇ ಒಂದು ಊರು ಪ್ರವರ್ಧಮಾನಕ್ಕೆ ಬರಬೇಕಾದರೆ ಅಲ್ಲಿಯ ಜನರ ಅಭಿಮಾನ, ಅವರ ಸಾರ್ಥಕ ಸೇವೆ, ಅನೇಕ ಮಹನೀಯರುಗಳ ಅನುಪಮ ಸೇವೆ ಬಹು ಅಮೂಲ್ಯವಾದುದು.

ಸ್ವಾತಂತ್ರ್ಯ ಸಮರದಲ್ಲಿ ನಮ್ಮ ನಗರ

ಭಾರತ ಪ್ರಾಕೃತಿಕ ಸಂಪತ್ತಿನಿಂದ ಕೂಡಿದ ದೇಶ. ಇದಕ್ಕೆ ಸಾವಿರಾರು ವರ್ಷಗಳ ಭವ್ಯ ಇತಿಹಾಸವಿದೆ. ಅನ್ಯರ ಆಕ್ರಮಣಕ್ಕೆ ತುತ್ತಾದ ಭಾರತದಲ್ಲಿ ಆಂಗ್ಲರು ತಳವೂರಿ ಸರ್ಕಾರ ಮಾಡಿದರು. ಭಾರತೀಯರನ್ನು ಎರಡನೆಯ ದರ್ಜೆ ಪ್ರಜೆಗಳಾಗಿ ಆಂಗ್ಲರು ಕಾಣುತ್ತಿದ್ದರು. ೧೮೫೭ರಲ್ಲಿ ಭಾರತೀಯರು ದಂಗೆ ಎದ್ದರು. ಅನೇಕ ದೇಶೀಯ ರಾಜರು ಸೇರಿದರು. ಇದು ಭಾರತದ ಮೊದಲ ಸ್ವಾತಂತ್ರ್ಯಸಂಗ್ರಾಮ. ೧೮೫೭ರಿಂದ ೧೯೪೭ರವರೆಗೆ ವಿವಿಧ ನೆಲೆಯಲ್ಲಿ ಭಾರತೀಯರು ತಾಯಿನಾಡಿನ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿ ತ್ಯಾಗ ಬಲಿದಾನ ಮಾಡಿದರು. ಮಹಾತ್ಮ ಗಾಂಧೀಜಿಯವರ ಮುಂದಾಳತ್ವದಲ್ಲಿ ಸತ್ಯಧರ್ಮ ಅಹಿಂಸೆಯ ಅಸ್ತ್ರಹಿಡಿದು, ಸ್ವಾತಂತ್ರ್ಯ ಹೋರಾಟಗಾರರು ಅಸಹಕಾರ ಚಳುವಳಿ ನಡೆಸಿ ಭಾರತೀಯರಲ್ಲಿ ಸಾಕಷ್ಟು ರಾಜಕೀಯ ಪ್ರಜ್ಞೆ, ರಾಷ್ಟ್ರಪ್ರೇಮ ಸ್ವದೇಶಾಭಿಮಾನ ಬೆಳೆಸಿದರು.

ಈ ಪ್ರಯತ್ನದಲ್ಲಿ ಮೈಸೂರು ಜಿಲ್ಲೆಯ ಹಲವಾರು ಪ್ರತಿನಿಧಿಗಳು ತಮ್ಮ ತ್ಯಾಗ ಮನೋಭಾವದಿಂದ ಧೈರ್ಯಸ್ಥೈರ್ಯಗಳಿಂದ ಸ್ವಾತಂತ್ರ್ಯ ಚಳುವಳಿಯ ಯಶಸ್ಸಿಗೆ ಕಾರಣರಾಗಿದ್ದಾರೆ. ಮಾನ್ಯ ಎಲ್.ವಿ.ರಾಜಗೋಪಾಲ್, ಸುಬ್ಬರಾವ್, ಉಪಾಧ್ಯ, ತಾತಾಚಾರ್, ಹೆಚ್.ಸಿ.ದಾಸಪ್ಪನವರು, ಸೀತಾರಾಮು, ತಗಡೂರು ರಾಮಚಂದ್ರರಾವ್,

ಸಾಹುಕಾರ್ ಚೆನ್ನಯ್ಯ, ಡಿ.ಬನುಮಯ್ಯ, ಎಂ.ಎನ್.ಜೋಯಿಸ್, ಶ್ರೀಮತಿ ಸುಬ್ಬಮ್ಮ ಜೋಯಿಸ್ ಮುಂತಾದವರಿದ್ದಾರೆ.

ಕೃಷ್ಣರಾಜನಗರ ತಾಲ್ಲೂಕಿನ ವಿದ್ಯಾರ್ಥಿ ಮುಖಂಡ ಕೋಳೂರು ಶಂಕರಪ್ಪನವರು ಪೊಲೀಸರ ಲಾಟಿ ಏಟಿನಿಂದ ಮೃತಪಟ್ಟದ್ದು ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಎಂಬುದು ಉಲ್ಲೇಖನಿಯವಾಗಿದೆ. ಶಂಕರಪ್ಪ ಕೋಳೂರು ಗ್ರಾಮದ ಪಟೇಲ ಚನ್ನಪ್ಪ ಮತ್ತು ಕೆಂಪಮ್ಮನವರ ಎರಡನೆಯ ಮಗನಾಗಿ ೧೯೧೯ರಲ್ಲಿ ಜನಿಸಿದರು. ಬಾಲ್ಯದಲ್ಲಿ ಹನಸೋಗೆ ಶಾಲೆಯಲ್ಲಿ ಡಾ. ಎಚ್.ಎಲ್.ತಿಮ್ಮೇಗೌಡ ರಜತಾದ್ರಿ ಮುಂತಾದವರೊಡನೆ ವ್ಯಾಸಂಗ ಮಾಡಿದವರು. ಮೈಸೂರಿನ ಮರಿಮಲ್ಲಪ್ಪ ಪ್ರೌಢಶಾಲೆಯಲ್ಲಿ ವ್ಯಾಸಂಗಕ್ಕೆ ಸೇರಿದರು. ವಿದ್ಯಾರ್ಥಿ ನಾಯಕರಾಗಿ ರೂಪುಗೊಂಡರು. ದೃಢವಾದ ಮೈಕಟ್ಟಿನ ಮೃದುಭಾಷೆಗಳಾದ ಶಂಕರಪ್ಪ ತಮ್ಮ ಊರು ಮತ್ತು ಸುತ್ತಲಿನ ಗ್ರಾಮಗಳ ಯುವಜನರಲ್ಲಿ ಅಪಾರ ಗೌರವ ಪಡೆದಿದ್ದರು.

೧೯೪೨ರ ಸ್ವಾತಂತ್ರ್ಯ ಚಳುವಳಿ ಕಾಳ್ಗಿಚ್ಚಿನಂತೆ ನಾಡಿನಲ್ಲಿ ಹಬ್ಬಿಕೊಂಡಿತು. ಮೈಸೂರಿನ ವಿದ್ಯಾರ್ಥಿ ಸಮೂಹ ಕೃಷ್ಣರಾಜನಗರ ಸೇರಿದಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಮೆರವಣಿಗೆ, ಧರಣಿ ಮಾಡಿಕೊಂಡು ಮೈಸೂರು ನಗರ ತಲುಪಿತು. ಅಲ್ಲಿಯ ಜನರನ್ನು ಹುರಿದುಂಬಿಸುವ ಕೆಲಸ ಮಾಡುತ್ತಾ ಮೆರವಣಿಗೆ ನಡೆಸಿತು. ಸ್ವಾತಂತ್ರ್ಯ ಆಂದೋಲನದ ವಿದ್ಯಾರ್ಥಿ ಸಮೂಹಕ್ಕೆ ಅನೇಕರು ಬಹಿರಂಗವಾಗಿಯೇ ಸೇರಿಕೊಂಡರು. ಮತ್ತೆ ಕೆಲವರು ಗೋಪ್ಯವಾಗಿಯೂ ಪ್ರೋತ್ಸಾಹ ನೀಡಿದರು. ಜನರ ಸಹಾನುಭೂತಿ ಮತ್ತು ಸಹಕಾರ ದೊರೆಯಿತು. ಮೈಸೂರು ಅರಸರ ಆಳ್ವಿಕೆ ಮತ್ತು ಜಡತ್ವಕ್ಕೆ ಹೊಂದಿಕೊಂಡಿದ್ದವರು. ವಿದ್ಯಾರ್ಥಿಗಳನ್ನು ಗೇಲಿ ಮಾಡಿದರೂ ಹಿಡಿದ ಛಲಬಿಡದೆ ಗಾಂಧಿಯವರ ಮಾರ್ಗದರ್ಶನದಂತೆ ಎಲ್ಲಾ ಕಡೆ ಸಭೆ ಮೆರವಣಿಗೆ ನಡೆದವು. ವಿದ್ಯಾರ್ಥಿನಾಯಕ ಶಂಕರಪ್ಪನವರು ಮೈಸೂರು ಸುಬ್ಬರಾಯನ ಕೆರೆ ಏರಿಯ ಮೇಲೆ ಸಭೆ ಉದ್ದೇಶಿಸಿ ಆಂಗ್ಲ ಸರಕಾರವನ್ನು ಕಟುವಾಗಿ ಟೀಕಿಸಿದರು. ಇದನ್ನು ಸಹಿಸದ ಆಂಗ್ಲ ಅಧಿಕಾರಿಗಳು ದಸ್ತುಗಿರಿ ಮಾಡಿದರು. ಜೈಲಿನಲ್ಲಿ ಪೊಲೀಸ್‌ರಿಗೆ ಕ್ಷಮಾಪಣಾ ಪತ್ರ ನೀಡಿದರೆ ಬಿಡುವ ಭರವಸೆ ನೀಡಿದರು. ಶಂಕರಪ್ಪ ಬಿಡುಗಡೆ ಹೊಂದಲು ಒಪ್ಪಲಿಲ್ಲ. ಕೊನೆಗೆ ಜೈಲಿನಲ್ಲಿ ವಿನಾಕಾರಣ ಲಾಠಿ ಪ್ರಹಾರ ಮಾಡಿದರು. ಜೈಲಿನಲ್ಲಿಯೇ ಶಂಕರಪ್ಪ ವಾದ ಮಾಡುತ್ತಾ ಏಟು ತಿಂದನು. ೩೦ ಅಕ್ಟೋಬರ್ ೧೯೪೨ರಂದು ಹುತಾತ್ಮನಾದನು. ಜೈಲಿನಲ್ಲಿ ಆಗ ಎಚ್.ವೈ.ಶಾರದಾ ಪ್ರಸಾದ್, ವ್ಯಾಸತೀರ್ಥ, ಗಫಾರ್, ಡಾ. ತಿಮ್ಮೇಗೌಡ ಮುಂತಾದವರಿದ್ದರು.

ಕೃಷ್ಣರಾಜನಗರದಿಂದ ಪ್ರಜಾಪ್ರತಿನಿಧಿಯ ಸಭೆಗೆ ಸದಸ್ಯರಾಗಿದ್ದು, ಕೆಲಕಾಲ ಪುರಸಭಾಧ್ಯಕ್ಷರಾಗಿದ್ದ ಹಿರಿಯ ರಾಜಕಾರಣಿ ವೈ.ಎನ್.ನಂಜುಂಡಪ್ಪನವರು. ಇವರೊಡನೆ ದಿವಂಗತರಾದ ಬಿ.ವೈ.ಸೋಮಾಜಿರಾವ್, ಎಸ್.ಚನ್ನಮಲ್ಲಶೆಟ್ಟಿ, ಆರ್.ಬಿ.ಶಿವಪ್ಪ, ಜೆ.ಬಿ.ಮಲ್ಲಪ್ಪಶೆಟ್ಟಿ, ಎಸ್.ರಾಮಚಂದ್ರರಾವ್, ಎ.ಎಸ್.ಸಿದ್ದಲಿಂಗಪ್ಪ, ಕೆ.ಎಸ್.ಕೋಳಪ್ಪ, ಕೆ.ಆರ್.ನಿಲಕಂಠ ಇವರೆಲ್ಲಾ ಅಂದು ಎಡತೊರೆಯಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಕರ್ನಾಟಕ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ದಿವಂಗತ ಡಾ. ಎಚ್.ಎಲ್.ತಿಮ್ಮೇಗೌಡ, ಹೊಸ ಅಗ್ರಹಾರದ ಲಿಂಗರಾಜು, ಸಾಲಿಗ್ರಾಮದ ಎಸ್.ಬಿ.ಜವರೇಗೌಡ, ಮೂಡಲಬೀಡಿನ ಎಂ.ಬಿ.ಮುದೀಗೌಡ, ಎಂ.ಬಿ.ತಮ್ಮಯ್ಯ, ಹಳೆಯೂರಿನ ಹಾಲೇಗೌಡ, ದೊಡ್ಡಕೊಪ್ಪಲಿನ ಹಲಗೇಗೌಡ ಸೇರಿದಂತೆ ೩೦ಕ್ಕೂ ಹೆಚ್ಚು ವಿದ್ಯಾರ್ಥಿಸಮೂಹ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ೧೯೪೨ ಆಗಸ್ಟ್ ೯ರಿಂದ ೧೮ನೇ ತಾರೀಖಿನವರೆಗೆ ಚಳುವಳಿ ನಡೆಸಿದರು. ಅಷ್ಟರಲ್ಲಿ ಹೊಸ ಅಗ್ರಹಾರದಿಂದ ರೈಲಿನಲ್ಲಿ ಬರುವಾಗ ಎಲ್ಲರನ್ನು ಬಂಧಿಸಿದರು. ಹಳ್ಳಿಹಳ್ಳಿಗಳನ್ನು ಸುತ್ತಿ ಸ್ವಾತಂತ್ರ್ಯ ಆಂದೋಲನದ ಬಗೆಗೆ ಜನರಿಗೆ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದರು.

೧೩೩೭-೩೮ರಲ್ಲಿ ಸ್ವಾತಂತ್ರ್ಯಕೋಸ್ಕರ ಹುರುಪಿನಿಂದ ಕೆಲಸ ಆರಂಭವಾಯಿತು. ಕೃಷ್ಣರಾಜನಗರದಿಂದ ಆರ್.ಬಿ.ಪುಟ್ಟಬಸಪ್ಪನವರು ಪ್ರಥಮಜಿಲ್ಲಾ ಬೋರ್ಡ್ ಮತ್ತು ಶಾಸಕಾಂಗಕ್ಕೆ ಕಾಂಗ್ರೆಸ್‌ಪರ ಚುನಾವಣೆಗೆ ನಿಂತು ಅದ್ಭುತ ಜಯಗಳಿಸಿದರು. ಸಾಲಿಗ್ರಾಮದ ಗಣಪತಿಶಾಸ್ತ್ರಗಳು ವಿದ್ಯಾರ್ಥಿ ಸಮೂಹದಲ್ಲಿ ಚೈತನ್ಯದಾಯಕ ಶಕ್ತಿ ನೀಡುತ್ತಿದ್ದರು. ವೈ.ವಿ.ಅನಂತಯ್ಯ, ವೈ.ಎಸ್.ಅಶ್ವಥನಾರಾಯಣ, ದಿ॥ ಎಸ್.ಚನ್ನಮಲ್ಲ-ಶೆಟ್ಟಿ, ಸೋನೋಜಿರಾವ್, ವೈ.ಎಸ್.ಸಿದ್ದಲಿಂಗಶೆಟ್ಟಿ, ವೈ.ಎಸ್.ತೋಟಪ್ಪ, ಸಿ.ಕೆ.ಬಸಪ್ಪ, ಬಿ.ಎಸ್.ಮಾದಪ್ಪ, ಬೆಸಗರಹಳ್ಳಿ ನಂಜಪ್ಪ ಹಾಗೂ ಆರ್.ಬಿ.ಶಿವಪ್ಪ, ಕೆ.ಎಂ.ಮಲ್ಲಪ್ಪ ಮುಂತಾದವರು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ದುಡಿದವರು.

೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತರೂ ಮೈಸೂರಿಗೆ ದೊರೆಯಲಿಲ್ಲ. ಮೈಸೂರು ಚಲೆಜಾವ್ ಚಳುವಳಿಯಲ್ಲಿ ಅನೇಕ ಯುವಕರು ಕೃಷ್ಣರಾಜನಗರದಿಂದ ಪಾಲ್ಗೊಂಡಿದ್ದರು.

ವಿ.ಲಕ್ಕಯ್ಯ, ಎಂ.ಸಿ.ಪುಟ್ಟಣ್ಣಯ್ಯ, ಟಿ.ಪುಟ್ಟಣ್ಣ, ಆರ್.ಟಿ.ಗುರುಕಾರ್, ವೈ.ಎ.ಸುಬ್ಬಯ್ಯಶೆಟ್ಟಿ, ಎಂ.ಆರ್.ಆನಂದರಾಮರಾವ್, ಕೆ.ಆರ್.ನೀಲಕಂಠಯ್ಯ,

ವೈ.ಎಸ್.ರಾಮನಾಥಶೆಟ್ಟಿ, ಜಿ.ಎ.ವಾಹಿದ್‌ಖಾನ್, ವೈ.ಎ.ತಮ್ಮಯ್ಯ, ಆರ್.ಬಿ.ತೋಟಪ್ಪ, ವೈ.ಎಸ್.ಸತ್ಯಮೂರ್ತಿ, ಎಂ.ಎನ್.ನಂಜಪ್ಪ, ಕೆ.ಟಿ.ರುಕ್ಮಾಂಗದ, ಆರ್.ಬಿ.ಸೋಮಪ್ಪ, ಸಿ.ಎ.ಕರೀಗೌಡ, ವೈ.ಸಿ.ರೇವಣ್ಣ, ಎಸ್.ವಿರೂಪಾಕ್ಷ ಮುಂತಾದವರು ಮೈಸೂರು ಚಲೇಜಾವ್ ಚಳವಳಿಯಲ್ಲಿ ಜೈಲು ಅನುಭವಿಸಬೇಕಾಯಿತು.

ಸ್ವಾತಂತ್ರ್ಯ ಚಳುವಳಿಯೊಡನೆ ಕರ್ನಾಟಕ ಏಕೀಕರಣ ಚಳುವಳಿಯು ನಡೆಯುತ್ತಿತ್ತು. ವರಕವಿ ಬೇಂದ್ರೆ ಸೇರಿದಂತೆ ಎಲ್ಲಾ ಕವಿಗಳು ಕಲಾವಿದರು ಕೃಷ್ಣರಾಜ ನಗರದ ಜನರಲ್ಲಿ ಅರಿವು ಮೂಡಿಸುವ ಉಪನ್ಯಾಸ ನೀಡಿದ್ದಾರೆ. ಕೃಷ್ಣರಾಜ ನಗರದ ಜನತೆಯು ತಮ್ಮ ಮಿತಿಯಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿಸಿಕೊಂಡಿದೆ. ಅಲ್ಲದೇ ಸ್ವಾತಂತ್ರ್ಯ ಭಾರತದ ಕನಸಿನಲ್ಲಿಯೇ ಕಣ್ಮರೆಯಾದ ದಿವಂಗತ ಕೋಳೂರು ಶಂಕರಪ್ಪ ನಮ್ಮ ತಾಲ್ಲೂಕಿನ ಹೆಮ್ಮೆಯ ಪುತ್ರ ಎನ್ನುವುದನ್ನು ಮರೆಯುವಂತಿಲ್ಲ.

ಭಾರತ ಸ್ವಾತಂತ್ರ್ಯ ಸಮರದಲ್ಲಿ ತಮ್ಮನ್ನು ತೊಡಗಿಸಿಕೊಂಡು, ತಮ್ಮ ಮಿತಿಯಲ್ಲಿ ಕೆಲಸ ಮಾಡಿದ ದೇಶಪ್ರೇಮಿಗಳು, ಇಂದೂ ಹಲವಾರು ನಮ್ಮೊಡನಿದ್ದಾರೆ. ಅವರ ನೆನಪು ದೇಶಪ್ರೇಮ ನಮ್ಮಲ್ಲಿಯೂ ಆದರ್ಶವಾಗಿರಲೆಂದು ಆಶಿಸುತ್ತೇನೆ.

ಅಧ್ಯಾಯ – ೧೧

ಅಧ್ಯಯನದ ಫಲಿತಗಳು

ಎಡತೊರೆಯನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡುವುದೆಂದರೆ ಇಲ್ಲಿನ ಭೌಗೋಳಿಕ, ಚಾರಿತ್ರಿಕ ಮತ್ತು ಐತಿಹಾಸಿಕವಾಗಿ ಅದರ ಹಿನ್ನೆಲೆ ಮತ್ತು ಮುನ್ನೆಲೆಗಳನ್ನು ಕುರಿತ ಶಾಸ್ತ್ರೀಯ ಅಧ್ಯಯನ ಎಂತಲೇ ಹೇಳಬೇಕಾಗುತ್ತದೆ. ಐತಿಹಾಸಿಕ ಮಹತ್ವದ ಜೊತೆಗೆ ಪ್ರಾಚೀನ ಪರಂಪರೆಯನ್ನು ಪರಿಚಯಿಸುವುದಾಗಿದೆ. ದಕ್ಷಿಣ ಭಾರತದ ಭಾಗೀರಥಿ ಎಂದು ಕರೆಯುವ ಕಾವೇರಿ ನದಿಯ ದಂಡೆಯಲ್ಲಿರುವ ಪುರಾಣ ಪ್ರಸಿದ್ಧಿ ಪಡೆದ ಅರ್ಕೇಶ್ವರನ ಆರಾಧ್ಯ ದೇವತೆಯನ್ನಾಗಿ ಹೊಂದಿದ ಎಡತೊರೆ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿದೆ. ಚುಂಚನಕಟ್ಟೆ, ಕಪ್ಪಡಿ ಮತ್ತು ಡೋರ್ನಹಳ್ಳಿಯಂತ ಪುರಾಣ ಪ್ರಸಿದ್ಧ ಕ್ಷೇತ್ರಗಳನ್ನು ಪಡೆದ ಕೃಷ್ಣರಾಜನಗರ ಸಂಸ್ಕೃತಿ ಕೇಂದ್ರಿತ ನಗರವಾಗಿರುವುದರಿಂದ ಸಂಶೋಧನೆಯ ದೃಷ್ಟಿಯಿಂದ ಅಧ್ಯಯನ ನಡೆಸಲು ಯೋಗ್ಯವಾದ ಸ್ಥಳವಾಗಿದೆ.

ಮೈಸೂರು ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾದ 'ಕೃಷ್ಣರಾಜನಗರಕ್ಕೆ ಮೊದಲಿದ್ದ ಹೆಸರೆ 'ಎಡತೊರೆ'. ಪ್ರವಾಹದ ಕಾರಣ ಎಡತೊರೆಯಿಂದ ಎರಡು ಕಿಲೋಮೀಟರ್ ದೂರದ ಉತ್ತರದ ಭಾಗಕ್ಕೆ ಸ್ಥಳಾಂತರಗೊಂಡ ಮೇಲೆ ೧೯೩೪ರಲ್ಲಿ ಕೃಷ್ಣರಾಜನಗರವೆಂದು ನಾಮಕರಣ ಮಾಡಲಾಯಿತು. ಎಡತೊರೆಗೆ ಆವರ್ತಪುರ, ಆರ್ಕಕ್ಷೇತ್ರವೆಂದೂ ಒಂಬತ್ತನೇ ಶತಮಾನದ ಗಂಗರ ಶಾಸನದಲ್ಲಿ ಹೇಳಿರುವುದಲ್ಲದೇ ಪುರಾಣಗಳಲ್ಲಿ ಅರ್ಕೇಶ್ವರ ಪುರಾಣವು ಒಂದಾಗಿದೆ. ಇಲ್ಲಿ ತೊರೆಯು ಎಡಕ್ಕೆ ಬಾಗಿ ಹರಿಯುವ ಕಾರಣ ಎಡತೊರೆ ಎಂಬ ಹೆಸರು ಬರಲು ಮೂಲ ಕಾರಣ ಎಂಬ ಅಭಿಪ್ರಾಯವಿದೆ. ಈ ಸ್ಥಳದ ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆಯಲ್ಲಿ ಹೇಳುವ ಪ್ರಕಾರ, ಸೂರ್ಯನು ತನಗಂಟಿದ ಪಾಪವನ್ನು ಕಳೆಯಲು ಭೂಲೋಕದ ಕರ್ಮಭೂಮಿಯಾದ ಎಡತೊರೆಗೆ ಬಂದು ಲಿಂಗವೊಂದನ್ನು ಪ್ರತಿಷ್ಠಾಪಿಸಿ ಒಂದು ತಿಂಗಳು ಪ್ರಾರ್ಥನೆ ಸಲ್ಲಿಸಿ ಶಿವನಿಂದ ವರವನ್ನು ಪಡೆಯುವ ಮುಖಾಂತರ ಶಾಪವಿಮೋಚನೆ ಪಡೆದನೆಂಬುದು ಈ ಪುರಾಣ ಕತೆಯ ಹಿನ್ನೆಲೆ. ಇಲ್ಲಿರುವ ಸ್ನಾನಘಟ್ಟ ಮತ್ತು ಪುಷ್ಕರಿಣಿ ಇದಕ್ಕೆ ಜ್ವಲಂತ ಸಾಕ್ಷಿಯಾಗಿದೆ.

ಭಾಸ್ಕರನ ತಪೋಭೂಮಿಯಾಗಿ, ದೇವತೆಗಳ ಋಷಿಮುನಿಗಳ ನೆಲೆಯಾಗಿ, ಪರಶುರಾಮನ ಮಾತೃಹತ್ಯಾ ಪಾಪ ಈ ತೀರ್ಥಸೇವನೆಯಿಂದ ಪರಿಹೃತವಾಯಿತೆಂಬ ಪೌರಾಣಿಕ ಹಿನ್ನೆಲೆಯುಳ್ಳ ಎಡತೊರೆಯ ಅರ್ಕಕ್ಷೇತ್ರ, ಇಂದು ಮೈಸೂರು ಜಿಲ್ಲೆಯ ಪ್ರಮುಖ ದೇವಾಲಯಗಳಲ್ಲಿ ಒಂದಾಗಿದೆಯೆನ್ನಬಹುದು.

ಎಡತೊರೆ ಕೃಷ್ಣರಾಜನಗರವೆಂಬ ನಾಮಾಂತರಕ್ಕೆ ೧೯೨೪ರ ಪ್ರವಾಹದ ಕಾರಣ. ಕನ್ನಂಬಾಡಿಕಟ್ಟೆಯ ನಿರ್ಮಾಣದ ಕಾರಣದಿಂದ ಹಿನ್ನೀರಿನ ಪ್ರವಾಹಕ್ಕೆ ಸಿಲುಕಿದ ಎಡತೊರೆ ಕೃಷ್ಣರಾಜ ಒಡೆಯರ ಕೃಪೆ, ದಿವಾನರಾದ ಮಿರ್ಜಾ ಸಾಹೇಬರು, ಇಂಜಿನಿಯರ್ ಆಗಿದ್ದ ವಿಶ್ವೇಶ್ವರಯ್ಯನವರು ಮತ್ತು ಜರ್ಮನಿಯ ತಾಂತ್ರಿಕ ಶಿಲ್ಪಿ ಕ್ರೇಂಬಿಗಲ್ ಯೋಜನೆಯಂತೆ ನೂತನ ನಗರ ೧೯೩೪ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇಲ್ಲಿರುವ ನೇರವಾದ ರಸ್ತೆಗಳು ಕರ್ನಾಟಕದಲ್ಲಿ ಎಲ್ಲೂ ಕಂಡುಬರುವುದಿಲ್ಲ ಎಂದೂ ಶ್ರೀ ವೀರೇಂದ್ರಪಾಟೀಲರು ಹೇಳಿದ್ದ ಇಲ್ಲಿನ ಯೋಜನಾಬದ್ಧನಗರಕ್ಕೆ ಪುಷ್ಟಿಯಾಗಿದೆ. ಹೊಸನಗರ ನಿರ್ಮಾಣ ಸಮಿತಿಯ ಅಧ್ಯಕ್ಷರಾಗಿ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ಶ್ರಮಿಸಿದ್ದಾರೆ. ಇವರ ಶ್ರಮದ ಫಲವಾಗಿ ಇಂದು ಬತ್ತದ ಕಣಜವಾಗಿ, ಮೈಸೂರು ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾಗಿದ್ದು ಮೈಸೂರು, ಹಾಸನದ ಹೆದ್ದಾರಿಯಲ್ಲಿದೆ. ಮೈಸೂರು, ಮಂಡ್ಯ ಮತ್ತು ಹಾಸನಜಿಲ್ಲೆಯ ಗಡಿಯನ್ನು ಉಳ್ಳ, ಸಮುದ್ರಮಟ್ಟದಿಂದ ೭೦೦ ಮೀ ಎತ್ತರ ಪ್ರದೇಶದಿಂದ ಕೂಡಿದೆ. ಕಾವೇರಿ ನದಿಯು ಕೃಷ್ಣರಾಜನಗರಕ್ಕೆ ಜೀವನಾಡಿಯಾಗಿ ನೀರಾವರಿ ಸೌಲಭ್ಯ ಮತ್ತು ಕುಡಿಯುವ ನೀರಿನ ಸೌಲಭ್ಯದ ಕಾರಣ, ಪಾವಿತ್ರದ ದೃಷ್ಟಿಯಿಂದ 'ದಕ್ಷಿಣಗಂಗೆ' ಎಂದೇ ಹೇಳಲಾಗಿದೆ.

ನಗರದ ಅದಿದೇವತೆ ಶ್ರೀ ಮೀನಾಕ್ಷಿ ಸಮೇತ ಶ್ರೀ ಅರ್ಕೇಶ್ವರಸ್ವಾಮಿಯ ಪಾದಪದ್ಮಗಳ ಸಮೇತ ವಿಪುಲವಾದ ಧಾರ್ಮಿಕ ಪರಂಪರೆಯನ್ನು ಹೊಂದಿರುವ ನಗರ ಇಲ್ಲಿರುವ ದೇವಸ್ಥಾನ ಜನರ ಧಾರ್ಮಿಕ ನಂಬಿಕೆಗಳು ಭಾರತೀಯ ಧರ್ಮ ಮತ್ತು ಸಂಸ್ಕೃತಿಗೆ ಪೂರಕವಾಗಿದೆ. ಹಳೇ ಎಡತೊರೆ ಕ್ಷೇತ್ರ, ಕಪ್ಪಡಿ ಶ್ರೀ ಗದ್ದುಗೆ, ಚುಂಚನಕಟ್ಟೆ ಶ್ರೀ ರಾಮೋತ್ಸವ ಹೀಗೆ ಹಲವಾರು ಧಾರ್ಮಿಕ ಕೇಂದ್ರಗಳು ನಗರದ ಆಸ್ತಿಕರಿಗೆ ದಕ್ಷಿಣ ಗಂಗೆಯಾಗಿ ರೂಪುಗೊಂಡಿದೆ.

ಜಾನಪದ ದೃಷ್ಟಿಯಿಂದ ಕಪ್ಪಡಿ ಪ್ರಮುಖಸ್ಥಳವಾಗಿದೆ. ಜಾನಪದ ನಂಬಿಕೆಯ ಫಲವಾಗಿ ಇಂದು ತಾಲ್ಲೂಕಿನಲ್ಲಿ ಅಲ್ಲಲ್ಲಿ ಜಾನಪದ ಸೊಗಡನ್ನು ಕಾಣುತ್ತೇವೆ.

ನೀಲಗಾರರ ಸಂಪ್ರದಾಯವುಳ್ಳ ಜಾನಪದ ಕಾವ್ಯಗಳು, ಕಂಸಾಳೆಯವರು ಹಾಡುವ ಮಂಟೇಸ್ವಾಮಿ ಕಾವ್ಯ ತಾಲ್ಲೂಕಿನ ಪ್ರಮುಖ ಜಾನಪದ ಹಿನ್ನೆಲೆಯ ಸ್ಥಳವಾಗಿದೆ. ತಿಪ್ಪೂರಿನ ನರಸಿಂಹನಾಯಕರಂತಹ ರಾಜ್ಯಮಟ್ಟದ ಕಲಾವಿದರನ್ನು ಪಡೆದ ಕೃಷ್ಣರಾಜನಗರ, ಜಾನಪದದಲ್ಲಿ ತನ್ನ ಹಿರಿಮೆಯನ್ನು ತೋರ್ಪಡಿಸುತ್ತದೆ. ತಾಲ್ಲೂಕಿನಾದ್ಯಂತ ಇರುವ ಅನೇಕ ಸಂಘಸಂಸ್ಥೆಗಳು ತಮ್ಮೂರಿನ ಕಲಾಸೇವೆಯನ್ನು ಉಳಿಸಿ, ಬೆಳೆಸಿಕೊಂಡು ಕಾರ್ಯೋನ್ಮುಖವಾಗಿವೆ. ವೀರಗಾಸೆ, ಕೋಲಾಟ, ಡೊಳ್ಳುಕುಣಿತ ಮುಂತಾದ ಜಾನಪದೀಯ ಕಲೆಯನ್ನು ಪರಂಪರಗತವಾಗಿ ಮುಂದುವರೆಸಿಕೊಂಡು ಬರುತ್ತಿದೆ.

ತಾಲ್ಲೂಕಿನವರಾದ ಎಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ ಮತ್ತು ಸಿ.ಪಿ.ಕೃಷ್ಣ–ಕುಮಾರ್‌ರಂತಹ ಕವಿಗಳನ್ನು ಕಂಡಂತ ಕೃಷ್ಣರಾಜನಗರ ಸಾಹಿತ್ಯ ಮತ್ತು ಪತ್ರಿಕೋದ್ಯಮದಲ್ಲಿ ತನ್ನ ಶ್ರೀಮಂತಿಕೆಯನ್ನು ಗಳಿಸಿದೆ. ಅಂಕಣ, ವಿಮರ್ಶೆ, ಅರ್ಥಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರದಲ್ಲಿ ಸಾಕಷ್ಟು ಸಾಹಿತ್ಯಕೃತಿಗಳನ್ನು ರಚಿಸುವುದರ ಜೊತೆಗೆ ಪತ್ರಿಕಾ ಕ್ಷೇತ್ರದಲ್ಲಿ ತಮ್ಮದೇ ವಿಶಿಷ್ಟ ಸ್ಥಾನಮಾನವನ್ನು ಗಳಿಸಿರುತ್ತಾರೆ. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಯಲ್ಲಿ ಅಪಾರ ಪಾಂಡಿತ್ಯ ಪಡೆದ ಸಿ.ಪಿ.ಕೆಯವರು ನಗರ–ದವರೆಂಬುದು ಹೆಮ್ಮೆಯ ವಿಷಯ. ಇವರಲ್ಲದೇ ಪ್ರೊ. ಎಸ್.ಕೆ.ರಾಮಚಂದ್ರರಾವ್, ಪ್ರೊ. ಸಿ.ಜಿ.ಪುರುಷೋತ್ತಮ, ಡಾ. ಕೆ.ವಿ.ಅನಂತರಾಮು, ಡಾ. ಕೆ.ವೈ.ಶಿವಕುಮಾರ್, ಡಾ. ಜಿ.ಆರ್.ಕುಪ್ಪುಸ್ವಾಮಿ, ಕಾ.ತ.ಚಿಕ್ಕಣ್ಣ, ಡಾ. ಎಚ್.ಎನ್.ಮಂಜುರಾಜ್‌ರಂತಹ ಶ್ರೇಷ್ಠ ಬರಹಗಾರರನ್ನು ಪಡೆದು ಸಾಹಿತ್ಯಲೋಕದಲ್ಲಿ ಕೃಷ್ಣರಾಜನಗರ ಮಹತ್ತ್ವವನ್ನು ಸಾಧಿಸಿದೆ.

ಕಾವೇರಿ ನದಿಯ ತಟದಲ್ಲಿ ಕಂಡುಬರುವ ಎಡತೊರೆ, ಕಪ್ಪಡಿ, ಚುಂಚನಕಟ್ಟೆ ಮುಂತಾದ ಪ್ರೇಕ್ಷಣೀಯ ಸ್ಥಳಗಳಲ್ಲದೇ, ಬೇರ್‍ಯ, ಮಿರ್ಲೆ, ಸಾಲಿಗ್ರಾಮ ಹನಸೋಗೆ ಮತ್ತು ಡೋರ್ನಹಳ್ಳಿಯಂತಹ ಚಾರಿತ್ರಿಕ ಸ್ಥಳಗಳು ಮೈಸೂರು ಜಿಲ್ಲೆಯಲ್ಲಿಯೇ ಪ್ರಸಿದ್ಧಿ ಪಡೆದ ಸ್ಥಳಗಳಾಗಿವೆ. ಇಲ್ಲಿ ನಡೆಯುವ ಜಾತ್ರಾ ಮಹೋತ್ಸವಗಳು ರಾಜ್ಯದ ನಾನಾಭಾಗಗಳ ಜನರ ಭಕ್ತಿಯ ಕೇಂದ್ರಗಳಾಗಿವೆ. ಹಿಂದೂ, ಮುಸ್ಲಿಂ, ಜೈನರು ಮತ್ತು ಕ್ರಿಶ್ಚಿಯನ್ನರನ್ನು ಒಳಗೊಂಡ ಕೃಷ್ಣರಾಜನಗರ ಒಂದು ರೀತಿಯಲ್ಲಿ ಸರ್ವಧರ್ಮ ಸಮನ್ವಯತೆಯನ್ನು ಗಳಿಸಿದೆ.

'ಬತ್ತದ ಕಣಜ'ವೆಂಬ ಹೆಸರಿಗೆ ಪಾತ್ರವಾಗಿರುವ ತಾಲ್ಲೂಕು ಇಂದು ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸಿದೆ. ಶೇ. ೭೫ರಷ್ಟು ಜನರು ಕೃಷಿಯನ್ನು ಅವಲಂಬಿಸಿ ಬತ್ತ ಈ ಭಾಗದ ಪ್ರಮುಖ ಬೆಳೆಯಾದರೆ ವಾಣಿಜ್ಯ ಬೆಳೆಗಳಾಗಿ ರೇಷ್ಮೆ ಮತ್ತು ಹೊಗೆಸೊಪ್ಪು ಹೆಚ್ಚಾಗಿ ಕಂಡುಬರುತ್ತದೆ. ವ್ಯಾಪಾರವಾಣಿಜ್ಯಗಳಲ್ಲಿ ಹೇಳಿಕೊಳ್ಳುವಂತಹ ವಹಿವಾಟು ಕಾಣುವುದಿಲ್ಲ. ಇಲ್ಲಿ ಯಾವುದೇ ಬೃಹತ್ ಉದ್ಯಮಗಳು ಸ್ಥಾಪನೆಯಾಗಿಲ್ಲ. ಇರುವಲ್ಲಿ ಸಕ್ಕರೆ ಮತ್ತು ಕಾಗದದ ಕೈಗಾರಿಕೆಗಳೇ ಪ್ರಮುಖವಾಗಿ ಹೇಳುವಂತ ಉದ್ಯಮಗಳಾಗಿವೆ.

ಇಂದು ಕೃಷ್ಣರಾಜನಗರ ರಾಜಕೀಯ ಕ್ಷೇತ್ರ ತನ್ನ ಪ್ರಭುತ್ವವನ್ನು ಸಾಧಿಸಿದೇ ಎಂತಲೇ ಹೇಳಬಹುದು. ಪುರಸಭೆ ಅಸ್ತಿತ್ವಕ್ಕೆ ಬಂದಂದಿನಿಂದ ಇಲ್ಲಿಯವರೆಗೆ ನಗರ ಅನೇಕ ರಾಜಕೀಯ ನಾಯಕರನ್ನು ಕಂಡಿದೆ. ೧೯೫೨ರಿಂದ ಇಲ್ಲಿಯವರೆಗೆ ಆಯ್ಕೆಗೊಂಡ ಜನಪ್ರತಿನಿಧಿಗಳು ರಾಜ್ಯ ರಾಜಕಾರಣದಲ್ಲಿ ತಮ್ಮದೇ ಛಾಪು ಹೊತ್ತಿದ್ದಾರೆ. ಎಚ್.ಎಂ.ಚನ್ನಬಸಪ್ಪ, ಎಚ್.ವಿಶ್ವನಾಥ್ ಮತ್ತು ಎಸ್.ನಂಜಪ್ಪನವರು ಸಚಿವರಾಗಿ ಆಡಳಿತ ನಡೆಸಿ ಕೃಷ್ಣರಾಜನಗರವನ್ನು ಭೌಗೋಳಿಕವಾಗಿ ಗುರುತಿಸುವಲ್ಲಿ ಸಫಲರಾಗಿದ್ದಾರೆ. ಇಬ್ಬರೂ ಲೋಕಸಭಾ ಸದಸ್ಯರನ್ನು, ಮೂವರು ವಿಧಾನ ಪರಿಷತ್ ಸದಸ್ಯರನ್ನು ಒಳಗೊಂಡಂತೆ ಒಂಬತ್ತು ಶಾಸಕರನ್ನು ಆಯ್ಕೆಮಾಡಿ, ಕೃಷ್ಣರಾಜನಗರ ಜನ ತಮ್ಮ ರಾಜಕೀಯ ಆಸಕ್ತಿಯನ್ನು ತೋರಿಸಿದ್ದಾರೆ.

ಎಡತೊರೆ ಕೃಷ್ಣರಾಜನಗರವಾಗಿ ೧೯೩೪ರಲ್ಲಿ ನೂತನವಾಗಿ ನಗರ ನಿರ್ಮಾಣಗೊಂಡಂದಿನಿಂದ ಇಂದಿನವರೆಗೆ ನಗರ ಏಳಿಗೆಗೆ ನೂರಾರು ಮಹನೀಯರು ದುಡಿದಿದ್ದಾರೆ. ೭೫ ರ್ಷಗಳಲ್ಲಿ ನಗರ ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿದೆ. ಕೃಷ್ಣರಾಜ ಒಡೆಯರ್‌ರಂತಹ ರಾಜಪರಂಪರೆಯ ಹಿನ್ನೆಲೆಯನ್ನು ಮಿರ್ಜಾಇಸ್ಮಾಯಿಲ್, ವಿಶ್ವೇಶ್ವರಯ್ಯ, ಕ್ರೆಂಬಿಗ್ರಲ್‌ರಂತ ನಿಪುಣರನ್ನು ಮಾಸ್ತಿಯಂತಹ ದಕ್ಷ ಅಧಿಕಾರಿಯನ್ನು ಅವರ ಸೇವೆಯನ್ನು ಕಂಡಂತ ನಗರ ಇಂದು ಸರ್ವರೀತಿಯಿಂದಲೂ ಸಂಪದ್ಭರಿತ–ವಾಗಿದೆ. ವೈ.ಆರ್.ಪುಟ್ಟಣ್ಣಯ್ಯ, ಬಳೆ ನಂಜುಂಡ ಶೆಟ್ಟರಂತಹ ಮಹಾನ್ ದಾನಿಗಳ ನೆರವು ಸಿಕ್ಕಿದೆ. ಸ್ವಾತಂತ್ರಸಂಗ್ರಾಮಕ್ಕೆ ನಗರದ ಅನೇಕ ಮಹನೀಯರು ದುಡಿದಿದ್ದಾರೆ. ಸಂಗ್ರಾಮದಲ್ಲಿ ಹುತಾತ್ಮರಾದ ಕೋಳೂರು ಶಂಕರಪ್ಪರಂತಹ ಸ್ವಾತಂತ್ರ ಹೋರಾಟ–ಗಾರರನ್ನು ಅರ್ಪಿಸಿರುವುದು ಕೃಷ್ಣರಾಜನಗರದ ಸಾರ್ಥಕತೆಗೆ ಸಾಕ್ಷಿಯಾಗಿದೆ.

ಒಟ್ಟಿನಲ್ಲಿ ಸೂರ್ಯನಿಂದಲೇ ಪೂಜಿಸಲ್ಪಟ್ಟ ಅರ್ಕೇಶ್ವರನ ಕ್ಷೇತ್ರ ಎಡತೊರೆ ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆ ಈ ಕ್ಷೇತ್ರ ಪಡೆದು, ಸ್ಥೂಲವಾಗಿ ಇಡೀ ನಾಡಿನ ದೃಷ್ಟಿಯಿಂದಲೂ ಪ್ರಸಿದ್ಧಿ ಪಡೆದಿದೆ. ಕೃಷ್ಣರಾಜನಗರ ಒಂದು ರೀತಿಯಲ್ಲಿ ಕರತಲ ಕರ್ನಾಟಕ, ಕರತಲ ಭಾರತ ಬತ್ತದ ಕಣಜವಾಗಿ ಸಾಹಿತಿಗಳನ್ನು ಕಂಡಂತ ಜಾನಪದ ಮಹಾನ್ ಕಲೆಗಾರರನ್ನು, ಧರ್ಮಸಮನ್ವಯತೆಯನ್ನು ಸಾಧಿಸಿ ಕೃಷ್ಣರಾಜನಗರವನ್ನು ಸಂಗ್ರಹ ಭಾರತ, ಕರತಲ ಭರತಭೂಮಿ ಎಂದೇಳಬಹುದು.

ಅನುಬಂಧಗಳು

i) ಪರಾಮರ್ಶನ ಗ್ರಂಥಗಳು

೧. ಕೃತಿ ; 'ಮುಮ್ಮಡಿ ಕೃಷ್ಣರಾಜ ವಿರಚಿತ
ಎಡತೊರೆ ಅರ್ಕ ಪುಷ್ಕರಿಣೀ ಮಹಾತ್ಮೆ
ಸಂಪಾದಕರು: ಟಿ.ಆರ್.ಶಾಂತ
ಪ್ರಕಾಶನ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨. 'ಸ್ಮರಣ ಸಂಚಿಕೆ'
೫೦ ಕೃಷ್ಣರಾಜನಗರ ಸುವರ್ಣ ಮಹೋತ್ಸವ – ೧೯೮೬
ಸಂಪಾದಕರು : ತೇ.ಸಿ.ವಿಶ್ವೇಶ್ವರಯ್ಯ
ಪ್ರಕಟಣೆ : ಸುವರ್ಣ ಮಹೋತ್ಸವ ಸಮಿತಿ – ಕೃಷ್ಣರಾಜನಗರ

೩. 'ಕಲ್ಯಾಣ ಪಥ'
ಸಂಪಾದಕರು : ತೇ.ಸಿ.ವಿಶ್ವೇಶ್ವರಯ್ಯ
ಪ್ರಕಟಣೆ : ಶ್ರೀ ಶಿವರಾತ್ರೀಶ್ವರ ಜಯಂತಿ ಮಹೋತ್ಸವ ಸಮಿತಿ – ೧೯೯೭
ಕೃಷ್ಣರಾಜನಗರ

೪. 'ಸ್ನೇಹಸಂಪದ'
ಸ್ಮರಣ ಸಂಚಿಕೆ –೨೦೧೦–೧೧
ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಗ
ಕೃಷ್ಣರಾಜನಗರಶಾಖೆ

೫. 'ಸಾಹಿತ್ಯ ಮಾಹಿತಿ ಕೋಶ – ಭಾಗ –೨
ಲೇಖಕರು – ಬಿ.ಜಿ.ಸತ್ಯಮೂರ್ತಿ

ii) ಕ್ಷೇತ್ರಕಾರ್ಯ ವಿವರ

ಕ್ರ. ಸಂ.	ಹೆಸರುಗಳು	ವಯಸ್ಸು	ಸ್ಥಳ	ವಿದ್ಯಾರ್ಹತೆ
೧.	ತೇಸಿ.ವಿಶ್ವೇಶ್ವರಯ್ಯ	೫೦	ಮೈಸೂರು	ಎಂ.ಎ. ಬಿ.ಎಡ್. ವಯಸ್ಕರ ಶಿಕ್ಷಣ ಸಮಿತಿ
೨.	ವೈ.ಆರ್.ಪ್ರಕಾಶ್	೬೦	ಕೃ.ರಾ.ನಗರ ಪಟ್ಟಣ	ಮಾಜಿ ಅಧ್ಯಕ್ಷರು, ಪುರಸಭೆ
೩.	ಟಿ.ಕೆ.ಚಿನ್ನಸ್ವಾಮಿ	೮೦	ಕೃ.ರಾ.ನಗರ ಪಟ್ಟಣ	ಬಿ.ಎಸ್‌ಸಿ. ಬಿ.ಎಡ್. ಮಾಜಿ ಶಾಸಕರು
೪.	ಹೆಚ್.ಎಸ್.ಲೋಕೇಶ್	೪೫	ಹೆಬ್ಬಾಳು ಗ್ರಾಮ	ಎಂ.ಪಿ.ಎಡ್ ದೈಹಿಕ ಶಿಕ್ಷಕರು ಜಾನಪದ ಕಲಾವಿದರು

೫.	ಡಾ. ಸೋಮಶೇಖರ್	೪೦	ಕೃ.ರಾ.ನಗರ ಪಟ್ಟಣ	ಎಮ್.ಎಸ್‌ಸಿ (ಅಗ್ರಿ) ಪಿಎಚ್.ಡಿ., ಸಹಾಯಕ ಕೃಷಿ ಅಧಿಕಾರಿಗಳು
೬.	ಪುಟ್ಟೇಗೌಡ	೫೦	ಹೆಬ್ಬಾಳು ಗ್ರಾಮ	ಬಿ.ಎ. ಗೌರವ ಅಧ್ಯಕ್ಷರು ರಾಮಚಂದ್ರ ಯುವಕ ಸಂಘ – ಹೆಬ್ಬಾಳು
೭.	ಎಡತೊರೆ ರಾಜೇಂದ್ರ	೪೦	ಕೃ.ರಾ.ನಗರ ಪಟ್ಟಣ	ಬಿ.ಎ., ವರದಿಗಾರರು ವಿಜಯಕರ್ನಾಟಕ
೮.	ದೀಪಕ್	೩೫	ಹೆಬ್ಬಾಳು ಗ್ರಾಮ	ಪಿ.ಯು.ಸಿ. ಅಧ್ಯಕ್ಷರು ಬಸವೇಶ್ವರ ಯುವಕ ಸಂಘ
೯.	ಶ್ರೀಕಾಂತ ಪಾಟೀಲ್	೪೦	ಕೃ.ರಾ.ನಗರ ಪಟ್ಟಣ	ಬಿ.ಎ., ಭೂಮಾಪನಶಾಖೆ, ಕೃಷ್ಣರಾಜನಗರ
೧೦.	ಅಪ್ಪಾಜಿಗೌಡ	೪೫	ಚಂದಹಾಲು ಗ್ರಾಮ	ಪಿ.ಯು.ಸಿ. ಶ್ರೀರಾಮ ಸಕ್ಕರೆ ಕಾರ್ಖಾನೆ, ಚುಂಚನಕಟ್ಟೆ
೧೧.	ನರಸಿಂಹನಾಯಕ	೬೪	ತಿಪ್ಪೂರು ಗ್ರಾಮ	ಎಂಟನೇ ತರಗತಿ ಜಾನಪದ ಕಲಾವಿದರು
೧೨.	ಚಂದ್ರಪ್ಪ	೫೦	ದೇವಿ ತಂದ್ರೆ ಗ್ರಾಮ	ಪಿ.ಯು.ಸಿ. ವೀರಗಾಸೆ ನೃತ್ಯ ಕಲಾವಿದರು
೧೩.	ಸುಬ್ಬೇಗೌಡ	೪೦	ಕೃ.ರಾ.ನಗರ ಪಟ್ಟಣ	ಬಿ.ಎ. ತಾಲ್ಲೂಕು ಸಾಕ್ಷಾರತಾ ಸಮಿತಿ
೧೪.	ಲೋಕೇಶ	೩೮	ಕೃ.ರಾ.ನಗರ ಪಟ್ಟಣ	ಬಿ.ಎ.ಛಾಯಾಗ್ರಾಹಕರು
೧೫.	ಶ್ರೀಕಂಠಯ್ಯ	೬೫	ಕೃ.ರಾ.ನಗರ ಪಟ್ಟಣ	ಎಂ.ಎ. ನಿವೃತ್ತ ಉಪನ್ಯಾಸಕರು
೧೬.	ದಿವಾಕರ್	೫೦	ಮೇಲೂರು ಗ್ರಾಮ	ಬಿ.ಎ. ಶಿಕ್ಷಕರು
೧೭.	ಕೆ.ಪಿ.ಕೆಂಡಗಣ್ಣಪ್ಪ	೬೫	ಕೃ.ರಾ.ನಗರ ಪಟ್ಟಣ	ಎಂ.ಎ. ನಿವೃತ್ತ ಉಪನ್ಯಾಸಕರು
೧೮.	ಸ್ವಾಮಿ	೪೦	ಕುಂಬಾರಕೊಪ್ಪಲು ಗ್ರಾಮ	ಜನಪದ ಗಾಯಕರು
೧೯.	ಕೆ.ವಿ.ರಮಣ	೫೫	ಕೃ.ರಾ.ನಗರ ಪಟ್ಟಣ	ನಾಟಕ ಕಲಾವಿದರು
೨೦.	ಸಿ.ಜಿ.ಮಹೇಶ	೩೬	ಚಂದಗಾಲು ಗ್ರಾಮ	ಬಿ.ಎ. ಶಿಕ್ಷಕರು

*****

iii) ಛಾಯಾಚಿತ್ರಗಳು





೧. ಎಡತೊರೆಯಿಂದ ಸ್ಥಳಾಂತರಗೊಂಡಾಗ ೧೯೩೯ಳರಲ್ಲಿ ಸ್ಥಾಪಿಸಿದ ಸ್ಥಂಭ



೨. ಎಡತೊರೆಯ ಶ್ರೀ ಅರ್ಕೇಶ್ವರಸ್ವಾಮಿ ದೇವಸ್ಥಾನ








೩. ಚುಂಚನಕಟ್ಟೆಯ ಶ್ರೀ ಕೋದಂಡರಾಮ ದೇವಸ್ಥಾನ



೪. ಕೀಲು ಕುದುರೆ ಬೊಂಬೆಯಾಟ









೫. ಡೋರ್ನಹಳ್ಳಿಯ ಸಂತ ಆಂತೋಣಿಯವರ ಚರ್ಚ್




೬. ಜಾನಪದ ಕವಿ ಪಿ.ಕೆ.ರಾಜಶೇಖರ್ ಅವರೊಂದಿಗಿನ ಹೆಬ್ಬಾಳುಗ್ರಾಮದ
ಡೊಳ್ಳುಕುಣಿತದ ಕಲಾಮೇಳ









೭. ರಾಜ್ಯಮಟ್ಟದಲ್ಲಿ ಮನ್ನಣೆಗಳಿಸಿದ ಹೆಬ್ಬಾಳು ಕೊಪ್ಪಲಿನ ಬಸವೇಶ್ವರ ಯುವಕ ಸಂಘ



೮. ರಾಜ್ಯಪ್ರಶಸ್ತಿ ವಿಜೇತ ತಿಪ್ಪೂರಿನ ಕೋಲಾಟದ ನರಸಿಂಹನಾಯಕ.
ತರಬೇತಿನಿರತ ಮಕ್ಕಳೊಂದಿಗೆ





೯. ಜನಪದ ಕಲಾವಿದ ನರಸಿಂಹನಾಯಕ ಅವರು



೧೦. ತಿರುವನಂತಪುರದಲ್ಲಿ ಪಾಲ್ಗೊಂಡ ಜಾನಪದ ಗಾಯನತಂಡ (ಹೆಬ್ಬಾಳು)